ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 । ಸಂಚಿಕೆ 36 । ಆಗಸ್ಟ್ 30–ಸೆಪ್ಟೆಂಬರ್ 05, 2021 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com

ಸತ್ಯಜೀತ್ ರೇ 100







ಭಾರತದಲ್ಲಿ ತಾಲಿಬಾನಿಗಳ ಪ್ರತಿಬಿಂಬಗಳು



ರಾಷ್ಟ್ರೀಯ ಸೊತ್ತುಗಳ ಮಹಾ ಮಾರಾಟ









ಸ್ವಾತಂತ್ರ್ಯ-75 ಮತ್ತು ಸ್ವಾವಲಂಬನೆ



ಮೈಸೂರಿನಲ್ಲೊಂದು ಘೋರ ಕೃತ್ಯ – ಕ್ಷೀಣ ಪ್ರತಿಕ್ರಿಯೆ

ಸೆಪ್ಟೆಂಬರ್ 20-30: ದೇಶಾದ್ಯಂತ ಜಂಟಿ ಪ್ರತಿಭಟನಾ ಕಾರ್ಯಾಚರಣೆಗಳು

ಸೆಪ್ಟೆಂಬರ್ 20 ರಿಂದ 30: ದೇಶಾದ್ಯಂತ ಜಂಟಿ ಪ್ರತಿಭಟನಾ ಕಾರ್ಯಾಚರಣೆಗಳು

-19 ಪ್ರತಿಪಕ್ಷಗಳ ನಿರ್ಧಾರ



ಕಾಂಗ್ರೆಸ್, ಎನ್‌ಸಿಪಿ, ಟಿಎಂಸಿ, ಎಡಪಕ್ಷಗಳು ಸೇರಿದಂತೆ ದೇಶದ 19 ಪ್ರತಿಪಕ್ಷಗಳು ಆಗಸ್ಟ್ 20 ರಂದು ನಡೆದ ಆನ್‌ಲೈನ್ ಸಭೆಯಲ್ಲಿ ದೇಶಾದ್ಯಂತ ಸಪ್ಟಂಬರ್ 20ರಿಂದ 30ರ ನಡುವೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ಜಂಟಿಯಾಗಿ ಸಂಘಟಿಸಲು ನಿರ್ಧರಿಸಿವೆ. 11 ಬೇಡಿಕೆಗಳ ಮೇಲೆ ಈ ಕಾರ್ಯಾಚರಣೆಗಳು ನಡೆಯುತ್ತವೆ. ಈ ಸಾರ್ವಜನಿಕ ಪ್ರತಿಭಟನಾ ಕಾರ್ಯಾಚರಣೆಗಳ ಸ್ವರೂಪವನ್ನು ಈ ಎಲ್ಲ ಪಕ್ಷಗಳ ರಾಜ್ಯ ಘಟಕಗಳು ಆಯಾಯ ರಾಜ್ಯದ ಕೊವಿಡ್ ವಿಧಿ-ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸುತ್ತವೆ. ಧರಣಿ, ಪ್ರತಿಭಟನಾ ಮರಪ್ರದರ್ಶನಗಳು, ಹರತಾಳ ಮುಂತಾದ ರೂಪಗಳಲ್ಲಿ ಈ ಕಾರ್ಯಾಚರಣೆಗಳು ನಡೆಯುತ್ತವೆ ಎಂದು ಈ ಸಭೆಯ ನಂತರ ಪ್ರಕಟಿಸಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಸರಕಾರ ಮತ್ತು ಆಳುವ ಪಕ್ಷ ಸಂಸತ್ತಿನ ಮುಂಗಾರು ಅಧಿವೇಶನವನ್ನು ಛಿದ್ರಗೊಳಿಸಿದ ರೀತಿಯನ್ನು ಈ ಸಭೆ ಬಲವಾಗಿ ಖಂಡಿಸಿತು. ಪೆಗಸಸ್ ಮಿಲಿಟರಿ ಗೂಢಚರ್ಯೆ ತಂತ್ರಾಂಶದ ಕಾನೂನುಬಾಹಿರ ಬಳಕೆ, ಮೂರು ಕೃಷಿ ಕಾಯ್ದೆಗಳ ರದ್ದತಿ, ಕೊವಿಡ್ ಮಹಾಸೋಂಕಿನ ಅತ್ಯಂತ ಕಳಪೆ ನಿರ್ವಹಣೆ, ಲಂಗುಲಗಾಮಿಲ್ಲದ ಹಣದುಬ್ಬರ ಮತ್ತು ಬೆಲೆಯೇರಿಕೆ ಮತ್ತು ನಿರುದ್ಯೋಗ ಇವನ್ನೆಲ್ಲ ಚರ್ಚಿಸಲು ಅಥವ ಉತ್ತರಿಸಲು ನಿರಾಕರಿಸುವ ಮೂಲಕ ಅಧಿವೇಶನವನ್ನು ಛಿದ್ರಗೊಳಿಸಲಾಗಿದೆ ಎಂದು ಈ ಪಕ್ಷಗಳು ಹೇಳಿವೆ.

ಸಂಸತ್ತಿನಲ್ಲಿ ಹಿಂದೆಂದೂ ಕಾಣದ ದೃಶ್ಯಗಳು ಕಂಡು ಬಂದವು. ಪ್ರತಿಪಕ್ಷಗಳ ಪ್ರತಿಭಟನೆಗಳನ್ನು ಛಿದ್ರಗೊಳಿಸಲು ತಂದ ಮಾರ್ಷಲ್‌ಗಳಿಂದ ಸಂಸತ್ ಸದಸ್ಯರು, ಮಹಿಳಾ ಎಂಪಿಗಳು ಕೂಡ ಗಾಯಗೊಳ್ಳುವ ಪರಿಸ್ಥಿತಿ ಉಂಟಾಯಿತು. ದೇಶದ ಮುಂದಿರುವ ನಿರ್ಣಾಯಕ ಪ್ರಶ್ನೆಗಳನ್ನು ಎತ್ತುವ ಪ್ರತಿಪಕ್ಷಗಳ ಹಕ್ಕನ್ನು ನಿರಾಕರಿಸಿರುವುದು ಮಾತ್ರವಲ್ಲ, ಸರಕಾರ ಗದ್ದಲದ ನಡುವೆಯೇ ಎರಡೂ ಸದನಗಳಲ್ಲಿ ಶಾಸನಗಳನ್ನು ಬಲವಂತದಿಂದ ಚರ್ಚೆಯಿಲ್ಲದೆಯೇ ಪಾಸು ಮಾಡಿಸಿಕೊಂಡಿದೆ ಎಂದು ಹೇಳಿಕೆ ಖೇದ ವ್ಯಕ್ತಪಡಿಸಿದೆ.

ಪ್ರಧಾನ ಮಂತ್ರಿಗಳು ತನ್ನ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಜನಗಳ ಸಂಕಟಗಳಿಗೆ ಸಂಬಂಧಪಟ್ಟ ಒಂದೇ ಒಂದು ಪ್ರಶ್ನೆಯ ಮೇಲೆ ಸಹ ಗಮನ ಕೇಂದ್ರೀಕರಿಸಲಿಲ್ಲ. ಆ ಭಾಷಣ ಆಡಂಬರದ ಮಾತುಗಳು, ಟೊಳ್ಳು ಘೋಷಣೆಗಳು ಮತ್ತು ಹುಸಿಮಾಹಿತಿಗಳಿಂದ ತುಂಬಿತ್ತು. ನಿಜ ಹೇಳಬೇಕೆಂದರೆ, 2019 ಮತ್ತು 2020ರ ಭಾಷಣಗಳ ಮರು ಪ್ಯಾಕೇಜಿಂಗ್ ಮಾತ್ರ ಆಗಿದ್ದ ಈ ಭಾಷಣ, ನಮ್ಮ ಜನಗಳ ಬದುಕುಗಳು ಮತ್ತಷ್ಟು ಹದಗೆಡುತ್ತವೆ ಎಂಬುದರ ಅನಿಷ್ಟಕಾರೀ ಎಚ್ಚರಿಕೆಯೇ ಆಗಿದೆ ಎಂದು ಈ ಪ್ರತಿಪಕ್ಷಗಳು ಟೀಕಿಸಿವೆ.

ಸಂಸತ್ತು ಜನಗಳ ಜೀವ, ಜೀವನೋಪಾಯಗಳನ್ನು ಬಾಧಿಸುತ್ತಿರುವ ಮಹತ್ವದ ಪ್ರಶ್ನೆಗಳನ್ನು ಚರ್ಚಿಸಲು ಸಾಧ್ಯವಾಗಲಿಲ್ಲ, ಇತ್ತ ಪ್ರಧಾನಮಂತ್ರಿಗಳ ಭಾಷಣವೂ ಜನಗಳ ಹದಗೆಡುತ್ತಿರುವ ಸಮಸ್ಯೆಗಳಿಗೆ ಯಾವುದೇ ಪರಿಹಾರವನ್ನು ಸೂಚಿಸಿಲ್ಲ.

ಇಂತಹ ಸಂದರ್ಭದಲ್ಲಿ, ಹನ್ನೊಂದು ಬೇಡಿಕೆಗಳನ್ನು ಸರಕಾರದ ಮುಂದಿಡುವುದಾಗಿ ಈ 19 ಪಕ್ಷಗಳು ಹೇಳಿವೆ. ಅವು ಹೀಗಿವೆ:

1. ಭಾರತದಲ್ಲಿ ಲಭ್ಯವಿರುವ ಎಲ್ಲ ಲಸಿಕೆ ಉತ್ಪಾದನಾ ಸಾಮರ್ಥ್ಯಗಳನ್ನು ಕ್ರೋಡೀಕರಿಸಬೇಕು, ಜಾಗತಿಕವಾಗಿ ಲಸಿಕೆಗಳನ್ನು ಖರೀದಿಸಬೇಕು ಮತ್ತು ತಕ್ಷಣವೇ ಉಚಿತ ಸಾರ್ವತ್ರಿಕ ಸಾಮೂಹಿಕ ಲಸಿಕೀಕರಣ ಅಭಿಯಾನದ ವೇಗವನ್ನು ಹೆಚ್ಚಿಸಬೇಕ; ಕೊವಿಡ್‌ನಿಂದ ಪ್ರಾಣ ಕಳಕೊಂಡವರಿಗೆ ಸಾಕಷ್ಟು ಪರಿಹಾರ ಒದಗಿಸಬೇಕು, ಮತ್ತು ಸಾರ್ವಜನಿಕ ಆರೋಗ್ಯಪಾಲನೆ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕು.
2. ಕೇಂದ್ರ ಸರಕಾರ ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲ ಕುಟುಂಬಗಳಿಗೆ ತಿಂಗಳಿಗೆ ರೂ.7500 ನಗದು ವರ್ಗಾವಣೆಯನ್ನು ಅನುಷ್ಠಾನಕ್ಕೆ ತರಬೇಕು ಮತ್ತು ಅಗತ್ಯವಿರುವ ಎಲ್ಲರಿಗೂ ದಿನಬಳಕೆಯ ಎಲ್ಲ ಅಗತ್ಯ ಸರಕುಗಳಿರುವ ಆಹಾರ ಕಿಟ್ ಗಳನ್ನು ಉಚಿತವಾಗಿ ವಿತರಿಸಬೇಕು.
3. ಪೆಟ್ರೋಲಿಯಂ ಮತ್ತು ಡೀಸೆಲ್ ಮೇಲಿನ ಕೇಂದ್ರೀಯ ಅಬಕಾರಿ ಸುಂಕಗಳಲ್ಲಿ ಅಭೂತಪೂರ್ವ ಹೆಚ್ಚಳಗಳನ್ನು ಹಿಂತೆಗೆದುಕೊಳ್ಳಬೇಕು; ಅಡುಗೆ ಅನಿಲ ಮತ್ತು ಅಗತ್ಯ ವಸ್ತುಗಳ, ವಿಶೇಷವಾಗಿ ಅಡುಗೆ ತೈಲದ ಬೆಲೆಗಳನ್ನು ಕಡಿಮೆ ಮಾಡಬೇಕು ಮತ್ತು ನಾಗಾಲೋಟ ಹೂಡಿರುವ ಹಣದುಬ್ಬರವನ್ನು ನಿಯಂತ್ರಿಸಬೇಕು.
4. ಮೂರು ಕೃಷಿ ವಿರೋಧಿ ಕಾನೂನುಗಳನ್ನು ರದ್ದುಗೊಳಿಸಬೇಕು ಮತ್ತು ರೈತರಿಗೆ ಕಡ್ಡಾಯವಾಗಿ ಒಖಕ ಗ್ಯಾರಂಟಿ.ಕೊಡಬೇಕು.
5. ಸಾರ್ವಜನಿಕ ವಲಯದ ಲಂಗುಲಗಾಮಿಲ್ಲದ ಖಾಸಗೀಕರಣವನ್ನು ನಿಲ್ಲಿಸಬೇಕು ಮತ್ತು ಹಿಂದಕ್ಕೆ ಪಡೆಯಬೇಕು;; ಶ್ರಮಿಕರು ಮತ್ತು ಕಾರ್ಮಿಕ ವರ್ಗದ ಹಕ್ಕುಗಳನ್ನು ದುರ್ಬಲಗೊಳಿಸುವ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು. ಪ್ರತಿಭಟಿಸುವ ಮತ್ತು ವೇತನ ಚೌಕಾಶಿಯ ದುಡಿಯುವ ಜನರ ಹಕ್ಕುಗಳನ್ನು ಮರುಸ್ಥಾಪಿಸಬೇಕು.
6. .ಮಧ್ಯಮ ಸಣ್ಣ ಮತ್ತು ಅತಿ ಸಣ್ಣ(ಎಂ.ಎಸ್.ಎಂ.ಇ.)ಗಳ ಪುನರುಜ್ಜೀವನಕ್ಕಾಗಿ ವಿತ್ತೀಯ ಉತ್ತೇಜನಾ ಪ್ಯಾಕೇಜ್‌ಗಳನ್ನು ಜಾರಿಗೊಳಿಸಬೇಕು, ಸಾಲ ನೀಡಿಕೆಗಳ ಅಂಶಗಳನ್ನಲ್ಲ. ನಮ್ಮ ಆರ್ಥಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳನ್ನು ನಿರ್ಮಿಸಲು ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ದೇಶೀಯ ಬೇಡಿಕೆಯನ್ನು ಹೆಚ್ಚಿಸಲು ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು. ಸರ್ಕಾರಿ ಉದ್ಯೋಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು.
7. . ಕನಿಷ್ಠ ಎರಡುಪಟ್ಟು ಕೂಲಿಯೊಂದಿಗೆ 200 ದಿನಗಳ ವರೆಗೆ ಹೆಚ್ಚಿಸಿದ ಖಾತರಿಯೊಂದಿಗೆ ಮನರೇಗವನ್ನು ದೊಡ್ಡದಾಗಿ ವಿಸ್ತರಿಸಬೇಕು. ಇದೇ ರೀತಿಯಲ್ಲಿ ನಗರ ಉದ್ಯೋಗ ಖಾತರಿ ಕಾರ್ಯಕ್ರಮಕ್ಕೆ ಶಾಸನ ರೂಪಿಸಬೇಕು.
8. .ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಲಸಿಕೀಕರಣಕ್ಕೆ ಆದ್ಯತೆ ನೀಡಿ ಶಿಕ್ಷಣ ಸಂಸ್ಥೆಗಳನ್ನು ಬೇಗನೆ ಪುನಃ ತೆರೆಯುವಂತಾಗಬೇಕು.
9. ಪೆಗಾಸಸ್ ಗೂಢಚರ್ಯೆ ತಂತ್ರಾಂಶವನ್ನು ಜನಗಳ ಮೇಲೆ ಕಣ್ಗಾವಲಿಗೆ ಬಳಸುವುದರ ಕುರಿತು ತಕ್ಷಣವೇ ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆಯನ್ನು ನಡೆಸಬೇಕು. ರಫೇಲ್ ವ್ಯವಹಾರದಲ್ಲಿ ಹಿಂದಿನ ಆದೇಶವನ್ನು ರದ್ದುಗೊಳಿಸಿರುವುದು ಮತ್ತು ಹೆಚ್ಚಿನ ವೆಚ್ಚದಲ್ಲಿ ಹೊಸ ಆದೇಶವನ್ನು ನೀಡಿರುವುದರ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು.
10. ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಮತ್ತು ಸಿಎಎ ವಿರೋಧಿ ಪ್ರತಿಭಟನೆಗಳಲ್ಲಿ ಕರಾಳ ಯುಎಪಿಎ ಅಡಿಯಲ್ಲಿ ಬಂಧನದಲ್ಲಿ ಇರುವವರೂ ಸೇರಿದಂತೆ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು. ಜನರ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಉಲ್ಲಂಘಿಸಲು ದೇಶದ್ರೋಹ/ಯುಎಪಿಎ ನಂತಹ ' ಕಠಿಣ ಕಾನೂನುಗಳನ್ನು ಬಳಸುವುದನ್ನು ನಿಲ್ಲಿಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯದ ತಮ್ಮ ಮೂಲಭೂತ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಬಂಧಿಸಿರುವ ಎಲ್ಲಾ ಮಾಧ್ಯಮ ಸಿಬ್ಬಂದಿಯನ್ನು ಬಿಡುಗಡೆ ಮಾಡಬೇಕು.
11. ಜಮ್ಮು ಮತ್ತು ಕಾಶ್ಮೀರದಲ್ಲಿ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು.. ಕೇಂದ್ರ ಸೇವೆಗಳ ಜಮ್ಮು ಮತ್ತು ಕಾಶ್ಮೀರ ಕೇಡರ್ ಸೇರಿದಂತೆ ಪೂರ್ಣ ರಾಜ್ಯದ ಸ್ಥಾನಮಾನವನ್ನು ಮರುಸ್ಥಾಪಿಸಬೇಕು. ಆದಷ್ಟು ಬೇಗನೇ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಬೇಕು.

ನಮ್ಮ ಜಾತ್ಯತೀತ, ಪ್ರಜಾಸತ್ತಾತ್ಮಕ ಗಣತಣತ್ರ ವ್ಯವಸ್ಥೆಯನ್ನು ನಮ್ಮೆಲ್ಲ ಶಕ್ತಿ-ಸಾಮರ್ಥ್ಯದೊಂದಿಗೆ ರಕ್ಷಿಸಿಕೊಳ್ಳಲು ಎದ್ದು ನಿಲ್ಲಬೇಕು, ಭಾರತದ ಒಂದು ಉತ್ತಮ ನಾಳೆಗಾಗಿ ಇಂದು ಅದನ್ನು ಉಳಿಸಬೇಕು ಎಂದು ಈ 19 ಪಕ್ಷಗಳ ನೇತಾರರು ಜನರಿಗೆ ಕರೆ ನೀಡಿದ್ದಾರೆ.

ಕಾಂಗ್ರೆಸ್, ಎನ್‌ಸಿಪಿ, ಟಿಎಂಸಿ, ಡಿಎಂಕೆ, ಶಿವಸೇನೆ, ನ್ಯಾಷನಲ್ ಕಾನ್ಫರೆನ್ಸ್, ಜೆಎಂಎಂ, ಪಿಡಿಪಿ, ಆರ್‌ಜೆಡಿ., ಆರ್‌ಎಲ್‌ಡಿ.,ಎಐಎಯುಡಿಎಫ್, ಎಲ್‌ಜೆ.ಡಿ., ಸಿಪಿಐ, ಆರ್‌ಎಸ್‌ಪಿ, ಕೆಸಿಎಂ, ಐಯುಎಂಎಲ್, ವಿಸಿಕೆ, ಜೆಡಿ(ಎಸ್) ಮತ್ತು ಸಿಪಿಐ(ಎಂ) ನೇತಾರರು ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ. ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಸಂಪರ್ಕದ ಸಮಸ್ಯೆಯಿಂದಾಗಿ ಈ ಸಭೆಯಲ್ಲಿ ಭಾಗವಹಿಸಲಾಗಲಿಲ್ಲ.ಅವರಿಗೆ ಈ ಹೇಳಿಕೆಯನ್ನು ಕಳಿಸಲಾಗಿದೆ ಎಂದೂ ಈ ಹೇಳಿಕೆ ತಿಳಿಸಿದೆ.

□

ಭಾರತವನ್ನು ಮಾರಾಟ ಮಾಡುವುದನ್ನು ನಿಲ್ಲಿಸಿ -ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜನತೆಯ ಸಂಪತ್ತಿನ ಲೂಟಿಯನ್ನು ಪ್ರತಿರೋಧಿಸಲು ಜನತೆಗೆ ಕರೆ

ಕೇಂದ್ರ ಸರಕಾರ ಭಾರತವನ್ನು ಮಾರಾಟ ಮಾಡುವುದನ್ನು ಅಧಿಕೃತವಾಗಿ ಪ್ರಕಟಿಸಿದೆ. ಆಗಸ್ಟ್ 23ರಂದು ಬಿಡುಗಡೆ ಮಾಡಿರುವ 'ರಾಷ್ಟ್ರೀಯ ನಗದೀಕರಣ ಕ್ರಮಸರಣಿ'(ನ್ಯಾಷನಲ್ ಮೊನಿಟೈಸೇಷನ್ ಪೈಪ್ ಲೈನ್-ಎನ್‌ಎಂಪಿ) ನಮ್ಮ ರಾಷ್ಟ್ರೀಯ ಆಸ್ತಿಗಳ ಮತ್ತು ಮೂಲರಚನೆಗಳ ಲೂಟಿಯ ವಿವರಗಳನ್ನು ಕೊಡುತ್ತದೆ. ಇದು ಜನಗಳ ಸಂಪತ್ತಿನ ನೇರ ಲೂಟಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ದೈನಂದಿನ ವೆಚ್ಚಗಳನ್ನು ಭರಿಸಲಿಕ್ಕೆ ಕುಟುಂಬದ ಬೆಲೆಬಾಳುವ ವಸ್ತುಗಳನ್ನು ಮಾರುವುದು ಆರ್ಥಿಕವಾಗಿಯೂ ಮತ್ತು ಸಾಮಾನ್ಯ ದೃಷ್ಟಿಯಲ್ಲೂ ಅರ್ಥಹೀನ. ನಮ್ಮ ರಾಷ್ಟ್ರೀಯ ಆಸ್ತಿಗಳನ್ನು, ಮಾರುಕಟ್ಟೆ ಮಂದಗೊಂಡಿರುವಾಗ ಬಹಳ ಅಗ್ಗದಲ್ಲಿ ಮಾರುವುದರಿಂದ ಬಂಟ ಕಾರ್ಪೊರೇಟ್‌ಗಳಿಗೆ ಮಾತ್ರವೇ ಪ್ರಯೋಜನ ಒದಗುತ್ತದೆ ಮತ್ತು ಇದು ಬಂಟ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸುತ್ತದೆ. ಎಂದು ಕಟುವಾಗಿ ಟೀಕಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಪ್ರತಿಭಟಿಸಬೇಕು ಮತ್ತು ನಮ್ಮ ರಾಷ್ಟ್ರೀಯ ಆಸ್ತಿಗಳ ಈ ಲೂಟಿಯನ್ನು ಪ್ರತಿರೋಧಿಸಬೇಕು ಎಂದು ಜನತೆಗೆ ಕರೆ ನೀಡಿದೆ.

ರಾಷ್ಟ್ರದ ಸೊತ್ತುಗಳ ಲೂಟಿಯ ದುಷ್ಟ ತಂತ್ರ-ಸಿಐಟಿಯು ಖಂಡನೆ

ಮೋದಿ ನೇತೃತ್ವದ ಬಿಜೆಪಿ ಸರಕಾರದ 'ರಾಷ್ಟ್ರೀಯ ನಗದೀಕರಣ ಕ್ರಮಸರಣಿ' (ನ್ಯಾಷನಲ್ ಮೊನಿಟೈಸೇಷನ್ ಪೈಪ್ ಲೈನ್) ಅಥವ ಎನ್.ಎಂ.ಪಿ.ಯನ್ನು ಸಿಐಟಿಯು ಬಲವಾಗಿ ಖಂಡಿಸಿದೆ. ಇದು ಹಲವು ಲಕ್ಷ ಕೋಟಿ ರೂ. ಬೆಲೆಬಾಳುವ ಉತ್ಪಾದಕ ರಾಷ್ಟ್ರೀಯ ಆಸ್ತಿಗಳನ್ನು ದೇಶಿ ಮತ್ತು ವಿದೇಶಿ ಖಾಸಗಿ ಗುತ್ತೇದಾರರುಗಳಿಗೆ ಅಗ್ಗದ ಲ್ಲಿ ವಹಿಸಿ ಕೊಡುವ ಒಂದು ಯೋಜನೆ ಎಂದು ಅದು ವರ್ಣಿಸಿದೆ.

ಈ ಆಸ್ತಿಗಳಲ್ಲಿ ಚಾಲ್ತಿಯಲ್ಲಿರುವ, ಆರ್ಥಿಕ ವ್ಯವಸ್ಥೆಯ ಜೀವನಾಡಿಯಾಗಿರುವ ಮೂಲರಚನೆಗಳೂ ಸೇರಿವೆ ಎಂಬುದು ಗಮನಾರ್ಹ. ಇದು ಅಂತರ್ರಾಷ್ಟ್ರೀಯ ಣಕಾಸು ಬಂಡವಾಳದ ನಿರ್ದೇಶನದಂತೆ ನಡೆಯುತ್ತಿರುವ ಒಂದು ನವ-ಉದಾರವಾದಿ ಕ್ರಮವಾಗಿದೆ. ವಾಸ್ತವವಾಗಿ ಇದು ಸಾರ್ವಜನಿಕ ಸೊತ್ತುಗಳುನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುವಾಗ ನಡೆಯಲಿರುವ ಭ್ರಷ್ಟಾಚಾರದ ಕ್ರಮಸರಣಿ ಎಂದು ಸಿಐಟಿಯು ವರ್ಣಿಸಿದೆ.

ಈ ವಿಧ್ವಂಸಕಾರಿ ಎನ್‌ಎಂಪಿ, ಹಣಕಾಸು ಮಂತ್ರಿಗಳು ಮತ್ತು ನೀತಿ ಆಯೋಗ ಹೇಳುತ್ತಿರುವಂತೆ ದೇಶದ ಮೂಲರಚನೆಗಳ ಬೆಳವಣಿಗೆಯನ್ನು ಅಧಿಕಗೊಳಿಸಲಿಕ್ಕಾಗಿ ಅಲ್ಲ, ಬದಲಿಗೆ, ಯಾವುದೇ ಬಂಡವಾಳ ಹೂಡಿಕೆ ಮಾಡದೆ ಅಪಾರ ವರಮಾನಗಳನ್ನು ಪಡೆಯಲು ಖಾಸಗಿ ಕಾರ್ಪೊರೇಟ್‌ಗಳಿಗೆ ಅವಕಾಶ ಮಾಡಿಕೊಡಲಿಕ್ಕಾಗಿಯೇ ಖಾಸಗೀಕರಿಸಲಿರುವ ಅಥವ ಭೋಗ್ಯಕ್ಕೆ ಕೊಡಲೆಂದೇ ರೂಪಿಸಿದ ಯೋಜನೆ. ಇದು ರಾಷ್ಟ್ರೀಯ ಸೊತ್ತುಗಳ ಲುಟಿಯಲ್ಲದೆ ಬೇರೇನೂ ಅಲ್ಲ ಎಂದು ಅದು ಹೇಳಿದೆ.

ಆಗಸ್ಟ್ 23 ರಂದು ಹಣಕಾಸು ಮಂತ್ರಿಗಳು ಪ್ರಕಟಿಸಿರುವ ಈ ಎನ್‌ಎಂಪಿ ಯಲ್ಲಿ ಈ ಕೆಳಗಿನ ಪ್ರಮುಖ ಮೂಲರಚನೆಗಳನ್ನು ಖಾಸಗಿ ಕಾರ್ಪೊರೇಟ್

ಪುಟ 7 ನೋಡಿ

ಸಂಪಾದಕೀಯ

ಮತೀಯವಾದ ವಿರೋಧಿ ಶಕ್ತಿಗಳಿಗೆ ಇಂಬು ಇದೆ

ರಾಜ್ಯದಲ್ಲಿ ಮತೀಯವಾದ ವಿರೋಧಿ ಶಕ್ತಿಗಳು ಜೆಡಿ(ಎಸ್) ನಲ್ಲಿ ವಿಶ್ವಾಸವನ್ನು ಹಾಗೂ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ಸಂಘ ಪರಿವಾರ ಪ್ರತಿಪಾದಿಸುವ ಹಿಂದುತ್ವವಾದವನ್ನು ಅವರು ತಿರಸ್ಕರಿಸುತ್ತಾ ಬಂದಿದ್ದರು. ಮೃದು ಹಿಂದುತ್ವವಾದವನ್ನು ಬೆಂಬಲಿಸುತ್ತಿರುವ ಕಾಂಗ್ರೆಸನ್ನೂ ಸಹ ಮತದಾರರು ಮೂಲೆಗುಂಪು ಮಾಡುತ್ತಾ ಬಂದಿದ್ದರು. ಇವೆರಡು ರಾಷ್ಟ್ರೀಯ ಪಕ್ಷಗಳ ನಡುವೆ ನೆಲೆ ಕಾಣಲು ಪ್ರಯತ್ನಿಸುತ್ತಿದ್ದ ಪ್ರಾದೇಶಿಕ ಪಕ್ಷ ಜೆಡಿ(ಎಸ್) ನಲ್ಲಿ ರಾಜ್ಯದ ಪ್ರಗತಿಪರ, ಜಾತ್ಯಾತೀತ ಜನಸಮೂಹಗಳು ಪರ್ಯಾಯವನ್ನು ಕಾಣತೊಡಗಿದ್ದರು. ಆದರೆ ಇತ್ತೀಚಿನ ಬೆಳವಣಿಗೆಗಳು ಪ್ರಗತಿಪರ ಶಕ್ತಿಗಳ ಕನಸುಗಳನ್ನು ನುಚ್ಚು ನೂರಾಗಿಸಿವೆ.

ಜೆಡಿ(ಎಸ್) ಒಂದು ಮತೀಯವಾದ ವಿರೋಧಿ ಪ್ರಾದೇಶಿಕ ಪಕ್ಷವಾಗಿ ಉಳಿಯದಿರುವುದು ಒಂದು ದುರಂತವೇ ಆಗಿದೆ. ಮತೀಯವಾದಿ ಬಿಜೆಪಿಯೊಂದಿಗೆ ಅದು ಆಗಾಗ ಮಾಡಿಕೊಳ್ಳುತ್ತಾ ಬಂದಿರುವ ಸಮಯಸಾಧಕ ಮೈತ್ರಿ ಅದರ ಅಧಿಕಾರ ಲಾಲಸೆಯನ್ನು ಬಯಲಿಗೆಳೆದಿದೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ನಡೆದಿರುವ ಬೆಳವಣಿಗೆ ಇತ್ತೀಚಿನ ಉದಾಹರಣೆ. ಕಳೆದ 30 ವರ್ಷಗಳ ಪಾಲಿಕೆ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯುವಂತೆ ಮಾಡುವಲ್ಲಿ ಜೆಡಿ(ಎಸ್) ಯಶಸ್ವಿಯಾಗಿದೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಮೈತ್ರಿ ಇತ್ತು. ಹೊಸ ಮೇಯರ್ ಆಯ್ಕೆಯಲ್ಲೂ ಈ ಮೈತ್ರಿ ಮುಂದುವರೆಯಲಿದೆ ಎನ್ನಲಾಗಿತ್ತು. ಆದರೆ ಕಾಂಗ್ರೆಸ್ ಮತ್ತು ಜೆಡಿ(ಎಸ್) ಎರಡೂ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಘೋಷಣೆ ಮಾಡಿದ್ದವು. ಕೊನೆಯ ಕ್ಷಣದಲ್ಲಿ ಯಾರಾದರೂ ಹಿಂದೆ ಸರಿಯಬಹುದು. ಎಂಬ ನಿರೀಕ್ಷೆ ಇತ್ತು. ಆದರೆ ಹಾಗೆ ಆಗಲಿಲ್ಲ. ಬಿಜೆಪಿ ಸೇರಿದಂತೆ ಮೂರೂ ಪಕ್ಷಗಳು ಕಣದಲ್ಲಿ ಉಳಿದವವು. ಹೀಗಾಗಿ 26 ಮತ ಪಡೆದು ಬಿಜೆಪಿಯ ಸುನಂದಾ ಗೆದ್ದರು. ಜೆಡಿ(ಎಸ್) ಅಶ್ವಿನಿ 22, ಮತ್ತು ಕಾಂಗ್ರೆಸಿನ ಶಾಂತಕುಮಾರಿ 22 ಮತ ಪಡೆದರು. ಬಿಜೆಪಿ ಮತ್ತು ಜೆಡಿ(ಎಸ್) ನಡುವಿನ ತೆರೆಮರೆಯ ಆಟದಿಂದ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿ ಮುರಿದು ಬಿತ್ತು. ಬಿಜೆಪಿ–ಜೆಡಿ(ಎಸ್) ಸ್ನೇಹಕ್ಕೆ ಮುನ್ನುಡಿ ಬರೆದಂತಾಯಿತು.

ಜಾತ್ಯಾತೀತತೆ ಅಂದರೇನು ಎಂಬುದೇ ತನಗೆ ಗೊತ್ತಿಲ್ಲ ಎಂದು ಹಿಂದೆ ಹೇಳುತ್ತಿದ್ದ ಕುಮಾರಸ್ವಾಮಿ ಈಗಲೂ ಬದಲಾಗಿಲ್ಲ. ರಾಜ್ಯದಲ್ಲಿ ಬಿಜೆಪಿ ಸರಕಾರವೇನಾದರೂ ಸಂಕಷ್ಟಕ್ಕೆ ಸಿಲುಕಿದರೆ ತಾನು ಬೆಂಬಲಿಸುವುದಾಗಿ ಕುಮಾರಸ್ವಾಮಿ ವಾಗ್ದಾನ ಮಾಡಿದ್ದರು. ಇದು ಮುಂದಿನ ಚುನಾವಣೆಯಲ್ಲಿ ನಡೆಯಬಹುದಾದ ಮೈತ್ರಿಯ ಮುನ್ಸೂಚನೆಯಂತೆ ಬಾಸವಾಗುತ್ತದೆ. ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಒಂದೆರಡು ಸ್ಥಾನಗಳನ್ನು ಗೆಲ್ಲುವುದಕ್ಕಾಗಿ ಜೆಡಿ(ಎಸ್) ಪಕ್ಷವು ಬಿಜೆಪಿ ಪಕ್ಷದೊಂದಿಗೆ ಮೈತ್ರಿ ಮಾಡಲು ಸಜ್ಜಾಗಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಇದು ಜೆಡಿ(ಎಸ್) ಪಕ್ಷದ ದೌರ್ಬಲ್ಯ. ಹೆಸರಿಗಷ್ಟೇ ಅದು ಜಾತ್ಯಾತೀತ. ಅಧಿಕಾರ ಗಳಿಸುವುದನ್ನು ಬಿಟ್ಟರೆ ಬೇರೆ ಯಾವ ಸಿದ್ದಾಂತದಲ್ಲಿಯೂ ಅದಕ್ಕೆ ವಿಶ್ವಾಸವಿಲ್ಲ. ಕಾರಣಾಂತರದಿಂದ ಅಲ್ಲಿ ಆಯ್ಕೆಯಾಗುವ ಶಾಸಕರಿಗಾಗಲಿ, ಸಂಸತ್ ಸದಸ್ಯರಿಗಾಗಲಿ ಅಧಿಕಾರವೇ ಮುಖ್ಯ. ಅಧಿಕಾರಕೋಸ್ಕರ ಯಾರೊಂದಿಗೂ ರಾಜಿ ಮಾಡಿಕೊಳ್ಳಲು ಅದು ಸಿದ್ಧ. ಅಧಿಕಾರ ಇಲ್ಲದೆ ಜನಸೇವೆ, ದೇಶದ ಅಭಿವೃದ್ಧಿ ಮುಂತಾದ ಯಾವ ಸಿದ್ಧಾಂತವೂ ಅವರನ್ನು ಆಕರ್ಷಿಸುವುದಿಲ್ಲ. ಹಾಗಾಗಿ ಅವರು ಅಧಿಕಾರ ಪ್ರಾಪ್ತವಾಗುವ ಪಕ್ಷದೊಂದಿಗೆ ಕೈಜೋಡಿಸಲು ಅಸಹ್ಯ ಪಟ್ಟುಕೊಳ್ಳುವುದಿಲ್ಲ. ಹೀಗಾಗಿ ಅವರು ಒಬ್ಬೊಬ್ಬರಾಗಿ ಪಕ್ಷ ತೊರೆಯುವುದನ್ನು ನಾವು ಕಾಣುತ್ತಿರುತ್ತೇವೆ.

ಬಿಜೆಪಿ ಎಷ್ಟೇ ಅನಾಹುತಕಾರಿಯಾಗಿದ್ದರೂ ಅದುವೇ ಸಧ್ಯದ ಗೆಲ್ಲುವ ಪಕ್ಷ ಎಂದುಕೊಂಡು ಅಧಿಕಾರ ಹಿಡಿಯುವ ಪಕ್ಷ ಎಂದಾಗಿರುವುದರಿಂದ ಅದರೊಂದಿಗೆ ಮೈತ್ರಿ ಮಾಡಿಕೊಳ್ಳಲು ಜೆಡಿ(ಎಸ್) ಹೇಸಲಾರದು. ಬಿಜೆಪಿಗೆ ಸೇರಿಕೊಂಡರೆ ದೊಡ್ಡ ಮೊತ್ತದ ಹಣ ಹರಿದು ಬರಲಿದೆ ಎಂಬುದು ಸಹ ಇನ್ನೊಂದು ಆಕರ್ಷಣೆ. ಜೆಡಿ(ಎಸ್) ಈ ಪ್ರಕಾರ ಖಾಲಿಯಾಗುತ್ತಿದೆ. ಅದು ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವುದರಿಂದ, ಅದು ತಿಳಿದುಕೊಂಡಂತೆ ಅದಕ್ಕೆ ಯಾವುದೇ ಲಾಭ ಆಗದು. ಪ್ರಗತಿಪರರು, ಮತೀಯವಾದ ವಿರೋಧಿಗಳು ಜೆಡಿ(ಎಸ್) ನಿಂದ ದೂರವಾಗುತ್ತಾರೆ. ಅಲ್ಲಿ ನಿರ್ಮಾಣವಾಗುವ ಇಂಬು ಯಾವ ಪಕ್ಷವನ್ನು ಬಲಪಡಿಸಲಿದೆ? ಅದರಿಂದ ಮತೀಯವಾದಿ ಬಿಜೆಪಿಗೆ ಲಾಭವಾದರೆ ಆಶ್ಚರ್ಯವೇನಿಲ್ಲ. ಹಿಂದಿನಿದಲೂ ಬಿಜೆಪಿಯನ್ನು ಬೆಳೆಸಿದ ಗಟ್ಟಿಗೊಳಿಸಿದ ಕುಖ್ಯಾತಿ ಜೆಡಿ(ಎಸ್) ಗೆ ಹೋಗಲಿದೆ. ಜೆಡಿ(ಎಸ್) ನಿಂದ ನಿರ್ಮಾಣ ಆಗುತ್ತಿರುವ ಇಂಬು ಮತೀಯವಾದಿಗಳಿಗೆ ಲಾಭ ಆಗುವುದನ್ನು ತಡೆಯುವ ಕೆಲಸ ಆಗಬೇಕಾಗಿದೆ. ಇಲ್ಲಿ ಎಡ ಪಕ್ಷಗಳ ಪಾತ್ರ ಮಹತ್ವದ್ದಾಗಿದೆ. ಮತೀಯವಾದ ವಿರೋಧಿ ಶಕ್ತಿಗಳು ಉಂಟುಮಾಡುವ ಇಂಬನ್ನು ತುಂಬುವ ಕೆಲಸ ಎಡ ಪಕ್ಷಗಳಿಂದ ಮಾತ್ರ ಸಾಧ್ಯ. ಜೆಡಿ(ಎಸ್) ಅಂತಹ ಪಕ್ಷಗಳಿಂದ ಹೊರಬರುವ ಪ್ರಗತಿಪರ ಜಾತ್ಯಾತೀತ ಶಕ್ತಿಗಳನ್ನು ಎಡ ಪಕ್ಷಗಳಿಗೆ ಆಕರ್ಷಿಸಿ ಎಡ ಪಕ್ಷಗಳನ್ನು ಬಲಪಡಿಸಬೇಕಾಗಿದೆ. ಟಿಎಂಸಿ ಎಡ ಪಕ್ಷಗಳಿಗೆ ಪರ್ಯಾಯವಾಗಲಾರದು. ಕಾಂಗ್ರೆಸ್ ದೋರಣೆಗಳು ಎಡ ಪಂಥೀಯ ದೋರಣೆಗಳಿಗೆ ಪರ್ಯಾಯವಾಗದು. ದಾರಿ ತಪ್ಪಿ ಬಂಡವಾಳಗಾರರ. ಪಕ್ಷಗಳಿಗೆ, ಕಾರ್ಪೋರೇಟ್ ಕಂಪನಿಗಳ ಪರವಾದ ಪಕ್ಷಗಳಲ್ಲಿ ಎಡೆ ಕಂಡುಕೊಂಡವರು ಎಡ ಪರ್ಯಾಯವನ್ನು ಕಂಡುಕೊಳ್ಳುವಂತೆ ಮಾಡಬೇಕಾಗಿದೆ.

‘ಸಂವಿಧಾನ ಓದು’ ಇಂದು ಮನೆಮಾತಾಗಿವೆ–ಜಸ್ಟೀಸ್ ನಾಗಮೋಹನ್ ದಾಸ್



ಮೂರು ವರ್ಷಗಳ ಹಿಂದೆ ಆರಂಭಗೊಂಡ ‘ಸಂವಿಧಾನ ಓದು’ ಅಭಿಯಾನ ಅದೊಂದು ಆಂದೋಲನದ ಸ್ವರೂಪದಿಂದಾಗಿ ಇಂದು ರಾಜ್ಯದ ಮನೆಮಾತಾಗಿವೆ ಎಂದು ಸಂವಿಧಾನ ಓದು ಪುಸ್ತಕದ ಕರ್ತೃ ಹಾಗೂ ನಿವೃತ್ತ ನ್ಯಾಯಮೂರ್ತಿಯಾದ ಎಚ್.ಎನ್. ನಾಗಮೋಹನ ದಾಸ್ ತಿಳಿಸಿದರು.

ಸಮುದಾಯ–ಸಹಯಾನ–ಚಿಂತನ ಸಹಯೋಗದಲ್ಲಿ ಆಯೋಜಿಸಲಾದ ಸಂವಿಧಾನ ಓದು ಹಿನ್ನೋಟ ಮತ್ತು ಮುನ್ನೋಟ ಮೂರು ವರ್ಷದ ನೆನಪಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಆರಂಭದಲ್ಲಿ ಕೇವಲ 2000 ಪ್ರತಿಗಳ ಮಾರಾಟದೊಂದಿಗೆ ಆರಂಭಗೊಂಡ ಈ ಅಭಿಯಾನ ಇಂದು 50 ಬಾರಿ ಮುದ್ರಣದೊಂದಿಗೆ 2 ಲಕ್ಷ ಪ್ರತಿಗಳ ದಾಖಲೆ ಮಾರಾಟವಾಗಿದೆ. ಅಲ್ಲದೆ ಹಿಂದಿ ಇಂಗ್ಲಿಷ್ ಭಾಷೆಗೂ ತರ್ಜುಮೆಗೊಂಡಿದೆ ಮಾತ್ರವಲ್ಲ ಇದೀಗ ಮಲೆಯಾಳಿಗೂ ಅನುವಾದಗೊಂಡಿದೆ. ಇದಕ್ಕೆ ರಾಜ್ಯ ಜನಪರ ಮನಸ್ಸುಗಳು ನೀಡಿದ ಸಹಾಯ ಕಾರಣವಾಗಿದೆ ಹೀಗಾಗಿ ಈ ಆಂದೋಲನದಲ್ಲಿ ನಾನೊಬ್ಬ ಸಹಯಾನಿ ಮಾತ್ರ ಎಂದು ಅವರು ಹೇಳಿದರು.

ಮೂಲಭೂತ ಹಕ್ಕುಗಳ ಉಲ್ಲಂಘನೆ:

ಹಿಂದೆಂದಿಗಿಂತಲೂ ಹೆಚ್ಚಾಗಿರುವ ದೇಶದ್ರೋಹ, ರಾಷ್ಟ್ರೀಯ ಭದ್ರತೆ, ಯುಎಪಿಎ ಕಾನೂನುಗಳ ದುರ್ಬಳಕೆ, ಹೆಚ್ಚುತ್ತಿರುವ ನ್ಯಾಯಾಂಗದ ಮೇಲೆ ಒತ್ತಡ, ಪೆಗಾಸಿಸ್ ಗೂಢಚರ್ಯೆ ಸೇರಿದಂತೆ ಹೆಚ್ಚುತ್ತಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆ ಹೆಚ್ಚು ಹೆಚ್ಚು ಜನರಲ್ಲಿ ಸಂವಿಧಾನ ಪ್ರಜ್ಞೆ ಬೆಳೆಸುವ ಅಗತ್ಯವನ್ನು ಒತ್ತಿ ಹೇಳುತ್ತಿವೆ ಎಂದು ದಾಸ್ ಅಭಿಪ್ರಾಯ ಪಟ್ಟರು.

ಹಿಂದೆ ಕ್ವಿಟ್ ಇಂಡಿಯಾ ಘೋಷಣೆ ಮೊಳಗಿಸಿದ್ದರೆ ಈಗ ಭಾರತ ಉಳಿಸಿ ,ಸಂವಿಧಾನ ಉಳಿಸಿ ಎಂಬ ಘೋಷಣೆ ಎಲ್ಲೆಡೆ ಕೇಳಿಬರುತ್ತಿದೆ. ಪ್ರತಿ ದಿನ ಸಂವಿಧಾನ ಉಲ್ಲಂಘನೆ ಕೆಲಸಗಳು ನಡೆಯುತ್ತಿರುವಾಗ ಜನರಲ್ಲಿ ಸಂವಿಧಾನ ಪ್ರಜ್ಞೆ ಮೂಡಿಸುವುದು ಮಾತ್ರವೇ ಸಂವಿಧಾನವನ್ನು ರಕ್ಷಿಸುತ್ತದೆ ಸಂವಿಧಾನ ರಕ್ಷಣೆ ಆದರೆ ಮಾತ್ರವೇ ದೇಶದಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ,ಸಾಮಾಜಿಕ ನ್ಯಾಯ ಉಳಿಯುತ್ತದೆ ಎಂದು ಅವರು ಪ್ರತಿಪಾದಿಸಿದರು

ಹಿರಿಯ ಚಿಂತಕ ಎಂ.ಜಿ ಹೆಗಡೆ ರವರು ಮಾತಾನಾಡಿ, ಈ ಸಂವಿಧಾನ ಓದು ಒಂದು ಆಂಧೋಲನ ಸ್ವರೂಪ ತಾಳಲು ಕಾರಣವಾಗಿದ್ದು ಡಾಃ ವಿಠ್ಠಲ ಭಂಡಾರಿ ಶ್ರಮ ಕಾರಣ. ಸ್ವತಃ ಒಬ್ಬ ಅಧ್ಯಾಪಕನಾಗಿ, ಸಾಂಸ್ಕೃತಿಕ ಚಳವಳಿಯ ಒಬ್ಬ ಕಾರ್ಯಕರ್ತ ನಾಗಿ ಅವನು ಮಾಡಿದ ಅಪರಿಮಿತ ಶ್ರಮದಿಂದಾಗಿ ಈ ಸಂವಿಧಾನ ಓದು ರಾಜ್ಯದ ಎಲ್ಲ ವಿಭಾಗಗಳ ಜನರನ್ನು ತಲುಪುವಲ್ಲಿ ಸಫಲವಾಗಿದೆ ಎಂದರು

ರಾಜ್ಯಶಾಸ್ತ್ರ ವಿಷಯದ ಪಠ್ಯ ವಾಗಿ ಮಾತ್ರ ಸಾಮಾನ್ಯವಾಗಿ ಗ್ರಹಿಸಿದ್ದ ಸಂವಿಧಾನ ವನ್ನು ಒಂದು ಜೀವನ ತತ್ವವಾಗಿ ಹಾಗೂ ಸಾಂಸ್ಕೃತಿಕ ಪಠ್ಯ ವಾಗಿ ಜನರ ಮುಂದೆ ಸಂವಿಧಾನ ಓದು ಅಭಿಯಾನ ತೋರ್ಪಡಿಸಿದೆ ಇದೇ ಅಭಿಯಾನ ಯಶಸ್ವಿ ಆಗಲು ಕಾರಣ ಎಂದು ಹೇಳಿದರು.

ವಿವಿಧ ಜಿಲ್ಲೆಗಳಲ್ಲಿ ಸಂವಿಧಾನ ಓದು ಅಭಿಯಾನವನ್ನು ತಲೆಯ ಮೇಲೆ ಹೊತ್ತು ನಡೆಸಿದ ಸಂವಿಧಾನ ಸಹಯಾನಿಗಳು ತಮ್ಮ ಅನುಭವ ಗಳನ್ನು ತಿಳಿಸಿದರು.

ದಾವಣಗೆರೆಯ ಅನಿಶ್ ಪಾಶಾ, ಹಾಸನದ ಡಾ.ಭಾರತಿ ದೇವಿ, ಸಹಯಾನದ ಯಮುನಾ ಗಾಂವ್ಕಾರ್, ಚಾಮರಾಜನಗರದ ನವೀನ್, ಮಂಡ್ಯದ ಯಶವಂತ್, ಕಲ್ಬುರ್ಗಿಯ ಶರಣಪ್ಪ ಸೈದಾಪುರ, ಬಾಗಲಕೋಟೆಯ ರಮೇಶ್ ಮತ್ತಿತರು ಮಾತಾಡಿದರು.

ಕಾರ್ಯಕ್ರಮದಲ್ಲಿ ಡಾ. ವರಮಹಾಲಕ್ಮೀ ‘ಸಂವಿಧಾನ ಓದು’ವನ್ನು ‘ಹರಿಕಥೆ’ ಹಾಗೂ ಜನಪದ ಪ್ರಕಾರವಾಗಿ ಅಳವಡಿಸಿಕೊಂಡು ಪ್ರಸ್ತುತಪಡಿಸಿದರು. ಅಭಿಯಾನದಲ್ಲಿ ಖ್ಯಾತ ಗಾಯಕ ಪಿಚ್ಚಳ್ಳಿ ಶ್ರೀನಿವಾಸ, ನರಸಿಂಹಮೂರ್ತಿ ಜಾಗೃತಿ ಗೀತೆಗಳನ್ನು ಹಾಡಿದರು.

ಸಂವಿಧಾನ ಓದು ಅಭಿಯಾನವನ್ನು ಮುಂದುವರೆಸಲು ವಿವಿಧ ಮಾದರಿಗಳನ್ನು, ರೀತಿಗಳನ್ನು ಅಳವಡಿಸಿ ಮುಂದುವರೆಸಲು ನಿರ್ಧಾರ ಮಾಡಲಾಯಿತು. ಪ್ರಾಸ್ತಾವಿಕವಾಗಿ ಮಾತಾನಾಡಿದರು. ಪ್ರಾಧ್ಯಾಪಕ ರಾಜಶೇಖರ ಕಿಗ್ಗ ರವರು ನಿರ್ವಹಿಸಿದರು ಸಮುದಾಯದ ದೇವೆಂದ್ರಗೌಡ ರವರು ಸ್ವಾಗತಿಸಿದರು.

ಆನ್‌ಲೈನ್ ಕಾರ್ಯಕ್ರಮದಲ್ಲಿ, ಪ್ರೊ. ಪುರುಷೋತ್ತಮ ಬಿಳಿಮಲೆ, ನಾಗರಾಜ್ ಸಮುದಾಯ ಸಂಘಟನೆಯ ರಾಜ್ಯಾಧ್ಯಕ್ಷ ಅಚ್ಯುತ್, ಬಾಲಕೃಷ್ಣ ಶೆಟ್ಟಿ, ಹೆಚ್.ಆರ್. ನವೀನ್ ಕುಮಾರ್, ಎಲ್. ಜಗನ್ನಾಥ್ ಸೇರಿದಂತೆ ನಾಡಿನಾದ್ಯಂತ ಈ ಆಂದೋಲನಲ್ಲಿ ಸಹಯಾನಿಗಳಾಗಿದ್ದ ನೂರಾರು ಕಾರ್ಯಕರ್ತರು ಆನ್ ಲೈನ್ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಐಐಎಸ್‌ಸಿ: ದಲಿತ, ಹಿಂದುಳಿದವರಿಗೆ ಮೀಸಲಿಟ್ಟ ಸ್ಥಾನಗಳು 'ಇನ್ನೊಬ್ಬರ' ಪಾಲು?!



ಮೀಸಲಾತಿಗೆ ಎಳ್ಳುನೀರು ಬಿಟ್ಟ ಐಐಎಸ್‌ಸಿ
ಕ್ಯಾಬಿನೆಟ್‌ನಲ್ಲಿ ದಲಿತರಿಗೆ, ಹಿಂದುಳಿದವರಿಗೆ ಹೆಚ್ಚಿನ ಆದ್ಯತೆ ನೀಡಿರುವ ಕೇಂದ್ರ ಸರಕಾರ ಐಐಎಸ್‌ಸಿ ವಿಚಾರದಲ್ಲಿ ಯಾಕೆ ಮೌನವಾಗಿದೆ?
ಐಐಎಸ್‌ಸಿ ವಿರುದ್ಧ ಹಲವರ ಆಕ್ರೋಶ

ಗುರುರಾಜ ದೇಸಾಯಿ

ಸಂಶೋಧನೆ ಹಾಗೂ ಉನ್ನತ ಶಿಕ್ಷಣ ಕಲಿಕೆಗೆ ಹೆಸರುವಾಸಿಯಾಗಿರುವ ಭಾರತೀಯ ವಿಜ್ಞಾನ ಸಂಸ್ಥೆಯು ಅಧ್ಯಾಪಕರ ನೇಮಕಾತಿಯಲ್ಲಿ ಮೀಸಲಾತಿ ಅನ್ವಯ ಹುದ್ದೆಗಳನ್ನು ಹಂಚಿಕೆ ಮಾಡಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಅನ್ವಯ ಸೀಟುಗಳನ್ನು ಹಂಚಿಕೆ ಮಾಡಿಲ್ಲ ಎಂಬ ಅಂಶ ಈಗ ಹೊರಬಿದ್ದಿದ್ದು ಅನೇಕರು ಸಂಸ್ಥೆಯ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. 2021 ರ ಮೇ ತಿಂಗಳಲ್ಲಿ ನಡೆದ ಅಧ್ಯಾಪಕರ ನೇಮಕಾತಿಯಲ್ಲಿ 465 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ತಳ ಸಮುದಾಯದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಅನ್ಯಾಯವನ್ನು ಮಾಡಲಾಗಿದೆ.

ಕೇಂದ್ರ ಸರ್ಕಾರ ತನ್ನ ಕ್ಯಾಬಿನೆಟ್‌ನಲ್ಲಿ ದಲಿತರಿಗೆ, ಹಿಂದುಳಿದವರಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಸಾಮಾಜಿಕ ನ್ಯಾಯ ಪಾಲಿಸಲು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ತಮ್ಮ ಬೆನ್ನು ತಟ್ಟಿಕೊಳ್ಳುತ್ತಿರುವಾಗಲೇ ಅದರ ನೆರಳಲ್ಲೇ ಸಾಮಾಜಿಕ ನ್ಯಾಯಕ್ಕೆ ಎಳ್ಳುನೀರು ಬಿಡಲಾಗಿದೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನ ನೇಮಕಾತಿಯಲ್ಲಿ ರೋಸ್ಟರ್ ಅನುಸರಿಸದೆ ದಲಿತ ಹಿಂದುಳಿದವರ ಪಾಲನ್ನು ಅನ್ಯರಿಗೆ ನೀಡಲಾಗಿದ್ದು ಸಾರ್ವಜನಿಕ ವಲಯಲ್ಲಿ ಚರ್ಚೆಯನ್ನು ಹುಟ್ಟುಹಾಕಿದೆ.

ಧಾರ್ಮಿಕ/ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಹೊರತು ಪಡಿಸಿ ಉಳಿದ ಶಿಕ್ಷಣ ಸಂಸ್ಥೆಗಳು ಹಾಗೂ ನೇಮಕಾತಿಯಲ್ಲಿ ಮೀಸಲಾತಿಯನ್ನು ಜಾರಿಗೆ ತರುವುದು ಕಡ್ಡಾಯವಾಗಿದೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳಿಗೆ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಮೀಸಲಾತಿಯನ್ನು ಜಾರಿಗೆ ತರಲಾಗಿದೆ. ಎಸ್.ಸಿ 15%. ಎಸ್‌ಟಿ 7.5% ಒಬಿಸಿ 27% ಸಾಮಾನ್ಯ 50% ಈ ರೀತಿ ಹಂಚಿಕೆ ಮಾಡಬೇಕು ಎಂದು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ ಹಾಗೂ ಸರಕಾರದ ದಾಖಲೆಗಳಲು ಕೂಡಾ ಹೇಳುತ್ತಿವೆ. ಆದರೆ ಭಾರತೀಯ ವಿಜ್ಞಾನ ಸಂಸ್ಥೆ ಈ ನಿಯಮಗಳನ್ನು ಅನ್ವಯ ಮಾಡದೆ ಮನಸೋ ಇಚ್ಛೆ ನೇಮಕ ಮಾಡಿಕೊಂಡಿರುವುದು ಕಂಡುಬಂದಿದೆ.

465 ಹುದ್ದೆಗಳಲ್ಲಿ 438 ಹುದ್ದೆಗಳನ್ನು ಸಾಮಾನ್ಯ ವರ್ಗಕ್ಕೆ ಸೇರಿದವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಂದರೆ 94.2% ಸ್ಥಾನಗಳನ್ನು ಸಾಮಾನ್ಯ ಜನರಿಗೆ ನೀಡಿದ್ದು, ಎಸ್‌ಟಿ ವರ್ಗಕ್ಕೆ ಸೇರಿದವರಿಗೆ 02 (ಪುರುಷ), 0.4% ರಷ್ಟು ಮಾತ್ರ, ಎಸ್‌ಸಿ ವರ್ಗಕ್ಕೆ ಸೇರಿದವರಲ್ಲಿ 11 ಪುರುಷ, 2 ಮಹಿಳೆ ಸೇರಿದಂತೆ ಒಟ್ಟು 13 ಸ್ಥಾನಗಳನ್ನು ನೀಡಲಾಗಿದೆ. 2.8% ಅಭ್ಯರ್ಥಿಗಳನ್ನು ಮಾತ್ರ ನೇಮಕ ಮಾಡಿಕೊಳ್ಳಲಾಗಿದೆ. ಇನ್ನೂ 10 ಪುರುಷ ಹಾಗೂ 2 ಮಹಿಳೆ ಸೇರಿದಂತೆ ಒಟ್ಟು 12 ಸ್ಥಾನಗಳು 2.6 % ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಪಕ್ಕದ ಚಿತ್ರದಲ್ಲಿರುವ ಅಂಕಿಅಂಶಗಳನ್ನು ಗಮನಿಸಿದರೆ ನಿಮಗೆ ಸ್ಪಷ್ಟವಾದ ಮಾಹಿತಿ ಸುಗುತ್ತದೆ.

ಯಾವುದೇ ನೇಮಕಾತಿಯು 50% ರಷ್ಟನ್ನು ದಾಟಬಾರದು ಎಂದು ಸುಪ್ರೀಂಕೋರ್ಟ್ ನಿರ್ದೇಶನವಿದೆ. ಆದರೂ ಇಲ್ಲಿ ಸಾಮಾನ್ಯ ವರ್ಗಕ್ಕೆ 94.2% ಆಧಾರದಲ್ಲಿ ಸ್ಥಾನಗಳನ್ನು ನೀಡಿರುವುದು ಸಂವಿಧಾನದ ಉಲ್ಲಂಘನೆ ಅಲ್ಲವೆ? ಎಂದು ಹಲವರು ಪ್ರಶ್ನೆಗಳನ್ನೆತ್ತಿದ್ದಾರೆ. ಅಷ್ಟೆ ಅಲ್ಲದೆ 33% ಮಹಿಳಾ ಮೀಸಲಾತಿಯನ್ನು ಇಲ್ಲಿ ಉಲ್ಲಂಘಿಸಲಾಗಿದೆ. ನಿಯಮದ ಪ್ರಕಾರ 33% ರಂತೆ ಮಹಿಳಾ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬೇಕಿತ್ತು. ಅಂದರೆ 465 ಹುದ್ದೆಗಳಲ್ಲಿ 120 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕಿತ್ತು. ಆದರೆ ಇಲ್ಲಿ ಕೇವಲ 4 ಸ್ಥಾನಗಳಿಗೆ ಮಾತ್ರ ಮಹಿಳೆಯರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಪಿಎಚ್‌ಡಿ ಪ್ರವೇಶಾತಿಯಲ್ಲೂ ಅನ್ಯಾಯ:

ಸಂಶೋಧನಾ ಶಿಕ್ಷಣ (ಪಿಎಚ್‌ಡಿ) ಕಲಿಕೆಯಲ್ಲಿ ತಳ ಸಮುದಾಯಗಳಿಗೆ ಅನ್ಯಾಯವನ್ನು ಮಾಡಲಾಗಿದೆ. ಪಕ್ಕದ ಚಿತ್ರದಲ್ಲಿ ತೋರಿಸಿದ ಮಾಹಿತಿಯಂತೆ ನೋಡುವುದಾದರೆ. 2018 ರಿಂದ 2021 ರ ದಾಖಲೆಗಳನ್ನು ನೋಡುವುದಾದರೆ. 3 ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ದಲಿತ ಮತ್ತು ಹಿಂದುಳಿದ ಸಮುದಾಯಗಳಿಗೆ ಅನ್ಯಾಯವನ್ನು ಎಸಗಲಾಗಿದೆ. 7.5 % ಮೀಸಲಾತಿಯಲ್ಲಿ ಎಸ್.ಟಿ ವಿಭಾಗಕ್ಕೆ ಪಿಎಚ್‌ಡಿ ಪ್ರವೇಶಕ್ಕೆ ಅವಕಾಶ ನೀಡಬೇಕಿತ್ತು. ಮೂರು ವರ್ಷಗಳಲ್ಲಿ ಕೇವಲ 85 ಜನ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶಾತಿ ದೊರತಿದೆ. ಅಂದರೆ 2.8% ಸ್ಥಾನಗಳು ಮಾತ್ರ ಸಿಕ್ಕಿವೆ. 286 ಜನ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳು ಪಿಎಚ್‌ಡಿ ಮುಗಿಸಿದ್ದಾರೆ. 15% ಮೀಸಲಿಡಬೇಕಿದ್ದ ಸೀಟುಗಳಲ್ಲಿ 9.3% ಮಾತ್ರ ಇಲ್ಲಿಯವರೆಗೆ ನೀಡಲಾಗಿದೆ. ಇನ್ನೂ 599 ಒಬಿಸಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು 27% ದಲ್ಲಿ 19.5 % ಪ್ರವೇಶ ಪಡೆದಿದ್ದಾರೆ. ಇ.ಡಬ್ಲ್ಯೂ.ಎಸ್ (ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಮೀಸಲಾತಿ) ನಲ್ಲಿ 119 ಜನ ಪ್ರವೇಶ ಪಡೆದಿದ್ದು, 10% ದಲ್ಲಿ 3.9 % ದಷ್ಟು ಪ್ರವೇಶ ಪಡೆದಿದ್ದಾರೆ. 1985 ಜನ ಸಾಮಾನ್ಯ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು 64.6% ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದಾರೆ.

ನೇಮಕಾತಿ ವ್ಯವಸ್ಥೆ ಹೇಗಿದೆ:

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ರೋಲಿಂಗ್ ಜಾಹಿರಾತು ವ್ಯವಸ್ಥೆ ಇದ್ದು, ಯಾವಾಗ ಬೇಕಾದರೂ ಉದ್ಯೋಗಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಬಹುಷಃ ಇದೇ ಮೀಸಲಾತಿ ಉಲ್ಲಂಘನೆಗೆ ಕಾರಣವಾಗುತ್ತಿರಬಹುದು. ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ನಂತರ ಮತ್ತೊಂದು ಅರ್ಜಿಯನ್ನು ಅವರು ನೀಡುತ್ತಾರೆ. ಅದನ್ನು ಭರ್ತಿಮಾಡಿದ ನಂತರ ನಾಲ್ವರು ಸಂದರ್ಶನ ನಡೆಸಿ ಅಂತಿಮವಾಗಿ ಉದ್ಯೋಗವನ್ನು ನೀಡಲಾಗುತ್ತಿದೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯಲು ಐಐಎಸ್‌ಸಿ ನಿರ್ದೇಶಕರನ್ನು ಸಂಪರ್ಕಿಸುವ ಪ್ರಯತ್ನವನ್ನು ಜನಶಕ್ತಿ ಮೀಡಿಯಾ ನಡೆಸಿತಾದರೂ ಅವರು ದೂರವಾಣಿ ಕರೆಯನ್ನು ಸ್ವೀಕರಿಸಲಿಲ್ಲ. ಈ ಕುರಿತಾಗಿ ಐಐಎಸ್‌ಸಿ ಆಡಳಿತಾಧಿಕಾರಿಗಳು ಅಲ್ಲಿರುವ ನೇಮಕಾತಿ ವಿಚಾರಗಳನ್ನು ಬಹಿರಂಗಗೊಳಿಸಬೇಕಿದೆ.

DYFI ರಾಜ್ಯ ಮುಖಂಡ ವಿ.ಅಂಬರೀಶ್ ಈ ಘಟನೆಗಳಿಗೆ ಪ್ರತಿಕ್ರಿಯೆ ನೀಡಿದ್ದು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು ಇಲ್ಲಿನ ಬೋಧಕ ವೃಂದದ ಈ ಪಟ್ಟಿಯನ್ನು ಗಮನಿಸಿದಾಗ ಇಲ್ಲಿ ಮೀಸಲಾತಿ ಪದ್ಧತಿಯನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದೆ. ಕೇಂದ್ರ ಸರ್ಕಾರದ ಸಂಸ್ಥೆಯೊಂದರಲ್ಲಿ ಈ ರೀತಿಯಾಗಿ ಅಕ್ರಮವಾಗಿ ಹುದ್ದೆಗಳನ್ನು ಭರ್ತಿ ಮಾಡಿರುವುದು ನ್ಯಾಯಾಲಯದ ತೀರ್ಪುಗಳ ಮತ್ತು ಮೀಸಲಾತಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಮೀಸಲಾತಿ ಪದ್ಧತಿಯನ್ನು ಉಲ್ಲಂಘಿಸಿ ನಡೆದಿರುವ ಅಕ್ರಮ ನೇಮಕಾತಿಯನ್ನು ರದ್ದು ಮಾಡಬೇಕು ಮತ್ತು ಈ ನೇಮಕಾತಿಯನ್ನು ನಡೆಸಿರುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಸಂಸ್ಥೆಯ ವಿರುದ್ಧ ಹೋರಾಟ ರೂಪಿಸುವುದಾಗಿ ವಿ.ಅಂಬರೀಶ್ ತಿಳಿಸಿದ್ದಾರೆ.

"ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್" ಬೆಂಗಳೂರು ಇದರಲ್ಲಿ ಸಂವಿಧಾನದ ಮೀಸಲಾತಿಯನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿದ್ದಾರೆ. ಸಂವಿಧಾನ ಬದ್ಧವಾಗಿ ಮೀಸಲಾತಿ ಅನ್ವಯ ಉದ್ಯೋಗಗಳನ್ನು ಹಂಚಿಕೆ ಮಾಡದೇ ಇಲ್ಲಿ ಬಹುತೇಕ ದಲಿತರ ಹಿಂದುಳಿದ ವರ್ಗಗಳ ಮೀಸಲು ಇಡಬೇಕಾದ ಸ್ಥಾನಗಳನ್ನು ಮೀಸಲು ಇಡದೇ ದಲಿತ ಹಿಂದುಳಿದ ವರ್ಗಗಳನ್ನು ವಂಚಿಸಿದ್ದು ಮೇಲ್ನೋಟಕ್ಕೆ ಕಂಡು ಬರುತ್ತದೆ ಇಂತಹ ನೇಮಕಾತಿ ಆದೇಶ ರದ್ದು ಮಾಡಬೇಕು ಇಲ್ಲದೆ ಹೊದರೆ ನ್ಯಾಯಾಲಯದ ಮೊರೆ ಹೋಗಿ ವಂಚಿತ ಸಮುದಾಯಗಳಿಗೆ ನ್ಯಾಯ ಕೊಡಿಸುತ್ತವೆ, ಎಂದು ಹೈಕೋರ್ಟ ವಕೀಲ ಹನುಮೇಶ್ ಗುಂಡೂರು ತಿಳಿಸಿದ್ದಾರೆ.

ದೇಶದ ಅತ್ಯುತ್ತಮ ಮತ್ತು ಅತ್ಯುನ್ನತ ವಿದ್ಯಾ ಸಂಸ್ಥೆಗಳಲ್ಲೊಂದಾದ IISC ವಿದ್ಯಾ ಸಂಸ್ಥೆಯಲ್ಲಿ ಉಪನ್ಯಾಸಕರ ನೇಮಕಾತಿಯಲ್ಲಿ ಜಾತಿ ತಾರತಮ್ಯ ತಾಂಡವಾಡುತ್ತಿರುವುದು ತುಂಬಾ ವಿಷಾದನೀಯ ಎಂದು ಹೇಳುತ್ತಾರೆ ಭೀಮ ಆರ್ಮಿ ರಾಜ್ಯ ಘಟಕದ ಅಧ್ಯಕ್ಷ ರಾದ ರಾಜಗೋಪಾಲ್ ಡಿ.ಎಸ್. ದೇಶಕ್ಕೆ ಮಾದರಿ ಯಾಗಬೇಕಾದ ವಿದ್ಯಾಸಂಸ್ಥೆ ಇಂದು ಪೂರ್ವಗ್ರಹ ಪೀಡಿತ ಮನಸ್ಸುಗಳು ಈ ವಿದ್ಯಾಸಂಸ್ಥೆಯಲ್ಲಿ ಸೇರಿಕೊಂಡು, ತಲಾ ತಲಾಂತರದಿಂದ ಜಾತಿ ತಾರತಮ್ಯ ದಿಂದ ಭೇದ ಭಾವ ಅನುಭವಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗಳಿಗೆ ನೇಮಕಾತಿಯಲ್ಲಿ ಅನ್ಯಾಯ ಮಾಡುವುದು, ಮತ್ತು ಆ ಸಮುದಾಯದ ಬಗ್ಗೆ ಉಡಾಫೆ ಮಾತಗಳನ್ನು ಆಡುವುದು ಸಂವಿಧಾನಕ್ಕೆ ಮತ್ತು ನೊಂದ ಜನಾಂಗದವರಿಗೆ ಮಾಡುವ ಅನ್ಯಾಯಗಳಾಗಿವೆ ಇದರ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ತಿಳಿಸಿದ್ದಾರೆ.

ದಲಿತರಿಗೆ ಮೀಸಲಾತಿಯಲ್ಲಿ ವಂಚನೆ ಹೊಸದೇನಲ್ಲ. ಸ್ವಾತಂತ್ರ್ಯ ಬಂದು 7 ದಶಕಗಳು ಕಳೆದರು ಸಂವಿಧಾನಾತ್ಮಕ ವಾಗಿ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಲೇ ಇಲ್ಲ. ಇನ್ನೂ ಉನ್ನತ ಸಂಶೋಧನಾ ಕೇತ್ರದಲ್ಲಿ, ಸಂಸ್ಥೆಗಳಲ್ಲಿ ಅಂದರೆ IIT, IIM ಮತ್ತು IIsc ಈ ರೀತಿ ನೂರಾರು ಸಂಸ್ಥೆಗಳಲ್ಲಿ ದಲಿತರಿಗೆ ಉದ್ಯೋಗ ಮೀಸಲಾತಿ ಮರೀಚಿಕೆಯಾಗಿದೆ. ಎಂದು ದಲಿತ ಹಕ್ಕುಗಳ ಹೋರಾಟ ಸಮಿತಿಯ (DHS) ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಬೇಸರ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಯಶವಂತಪುರ ದಲ್ಲಿರುವ ಪ್ರತಿಷ್ಠಿತ ಭಾರತೀಯ ವಿಜ್ಞಾನ ಮಂದಿರ(IISC) ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾಗಿದ್ದು ಇತ್ತೀಚಿಗೆ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ನಡೆದಿದೆ. ಅತೀ ಹೆಚ್ಚು ಹುದ್ದೆಗಳನ್ನು ಸಾಮಾನ್ಯ ವರ್ಗಕ್ಕೆ ನೀಡಲಾಗಿದೆ. ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ (ಓಬಿಸಿ) ವರ್ಗಗಳಿಗೆ ಕೇವಲ 27 ಸ್ಥಾನಗಳನ್ನು ನೀಡಿ, ದಲಿತ, ಹಿಂದುಳಿದ ವರ್ಗಗಳ ಮೀಸಾಲಾತಿ ಹಕ್ಕುಗಳನ್ನು ಕಸಿದು ಕೊಳ್ಳಲಾಗಿದೆ. ಯಾವುದೇ ಕಾನೂನು ಬದ್ಧ ನೇಮಕಾತಿ ಪ್ರಕ್ರಿಯೆ ನಡೆದಿರುವುದಿಲ್ಲ. ಆಡಳಿತ ಮಂಡಳಿಯು ಇಂತಹ ಸಂವಿಧಾನಾತ್ಮಕ ಹಕ್ಕುಗಳನ್ನು ವಂಚಿಸುತ್ತಿರುವುದನ್ನು ಖಂಡಿಸಿರುವ ಗೋಪಾಲಕೃಷ್ಣ ರವರು, ಮುಂದೆ ಹೋರಾಟವನ್ನು ರೂಪಿಸುವುದಾಗಿ ತಿಳಿಸಿದ್ದಾರೆ.

ಐಐಎಸ್‌ಸಿ ಈ ರೀತಿ ನಿಯಮ ಉಲ್ಲಂಘನೆ ಮಾಡಿರುವುದು ಸಾಮಾಜಿಕ ನ್ಯಾಯದ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಇದು ಸಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ. ಸಾಮಾಜಿಕ ನ್ಯಾಯವನ್ನು ಖಾತ್ರಿ ಪಡಿಸಬೇಕಾದ ಸಂಸ್ಥೆ ಉದ್ಯೋಗ ಮತ್ತು ಕಲಿಕೆ ಎರಡರಲ್ಲೂ ಉಲ್ಲಂಘನೆ ಮಾಡಿರುವುದು ಖೇದಕರವಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಸೆನೆಟ್ ಸದಸ್ಯರಾದ ಕೆ.ಎಸ್. ಲಕ್ಷ್ಮೀ ತಿಳಿಸಿದ್ದಾರೆ.

ಶುಲ್ಕ ಹೆಚ್ಚಿರುವ ಕಾರಣ ಪಿಎಚ್‌ಡಿ ಪ್ರವೇಶಕ್ಕೆ ಶೋಷಿತ ಸಮುದಾಯದ ವಿದ್ಯಾರ್ಥಿಗಳು ಸಂಖ್ಯೆ ಕಡಿಮೆಯಾಗಿರುವ ಸಾಧ್ಯತೆಗಳಿವೆ. ತಳಸಮುದಾಯಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶುಲ್ಕವನ್ನು ನಿಗದಿ ಮಾಡಬೇಕಿದೆ. ಇನ್ನೂ ಉದ್ಯೋಗದ ನೇಮಕಾತಿ ಪ್ರಚಾರವೂ ಆಗಿಲ್ಲ ಎಂಬುದು ಈ ದಾಖಲೆಗಳಿಂದ ತಿಳಿದುಬಂದಿದೆ. ಕೇವಲ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಸುಮ್ಮನಾಗುವುದು ಸರಿಯಾದ ವಿಧಾನವಲ್ಲ. ಎಲ್ಲರೂ ಡಿಜಿಟಲ್ ವಿಧಾನಕ್ಕೆ ಇನ್ನೂ ಒಗ್ಗಿಕೊಂಡಿಲ್ಲ ಹಾಗಾಗಿ ಐಐಎಸ್‌ಸಿಯ ನಿರ್ಲಕ್ಷ್ಯ ಇದರಲ್ಲಿ ಎದ್ದು ಕಾಣುತ್ತಿದೆ. ಮಹಿಳಾ ಅಭ್ಯರ್ಥಿಗಳ ಮೀಸಲಾತಿಯಲ್ಲೂ ಅನ್ಯಾಯ ಮಾಡಲಾಗಿದೆ. ಕೂಡಲೆ ಇದನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೆಲ ಶಿಕ್ಷಣ ಸಂಸ್ಥೆಗಳು ಈ ರೀತಿ ಮೀಸಲಾತಿ ಪಾಲನೆಗೆ ಆಧ್ಯತೆ ನೀಡುವುದಿಲ್ಲ. ಅವರಿಗೆ ನೇಮಕಾತಿ ಹಾಗೂ ಶಿಕ್ಷಣ ನೀಡುವಿಕೆ ಕಡೆ ಗಮನ ನೀಡುತ್ತಾರೆ. ಐಐಎಸ್ಸಿ ಯಲ್ಲೂ ಇದೇ ರೀತಿ ಇರಬಹುದು ಎಂಬುದು ಕೆಲವರ ವಾದವಾಗಿದೆ. ಆದರೆ ಕೊಡಬೇಕಾದ ಮೀಸಲಾತಿಯನ್ನು ಕೊಡದೆ, 'ಶಿಕ್ಷಣ ನೀಡುವ ಸಂಸ್ಥೆ' ಅಲ್ಲಿನ ವಿದ್ಯಾರ್ಥಿಗಳಿಗೆ ಸಂವಿಧಾನದ ಆಶಯಗಳನ್ನು ಹೇಳಿ ಕೊಡುತ್ತದಾ? ಎಂಬ ಪ್ರಶ್ನೆ ಕಾಡದೆ ಇರದು. ಈ ಎಲ್ಲ ಸಮಸ್ಯೆಗಳಿಗೆ ಐಐಎಸ್ಸಿ ಶೀಘ್ರವಾಗಿ ಉತ್ತರಿಸಬೇಕಿದೆ. ಇನ್ನೂ ಕೇಂದ್ರ ಸರಕಾರ ತನ್ನ ಕ್ಯಾಬಿನೆಟ್ ನಲ್ಲಿ ದಲಿತರಿಗೆ, ಹಿಂದುಳಿದವರಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಸಾಮಾಜಿಕ ನ್ಯಾಯ ಪಾಲಿಸಲು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ತಮ್ಮ ಬೆನ್ನು ತಟ್ಟಿಕೊಳ್ಳುತ್ತಿರುವ ಜೊತೆಯಲ್ಲಿಯೇ ಸಾಮಾಜಿಕ ನ್ಯಾಯಕ್ಕೆ ಎಳ್ಳುನೀರು ಬಿಡುವ ಬದಲು ಸಾಮಾಜಿಕ ನ್ಯಾಯವನ್ನು ರಕ್ಷಿಸಲು ಮುಂದಾಗಬೇಕಿದೆ. ■

Faculty Diversity at the IISc Bangalore as on 31st May 2021

Faculties	ST		SC		OBC		Gen	
	F	M	F	M	F	M	F	M
Professor	0	2	0	2	0	1	10	194
Asso Prof	0	0	0	3	0	3	12	104
Asst Prof	0	0	2	6	2	6	12	106
Total	2		13		12		438	
Percentage	0.4		2.8		2.6		94.2	
Norm (minimum)	7.5		15.0		27.0			

Source: RTI Data: F - Female M - Male

PhD Admissions at the IISc Bangalore in the Last Three Years (2018-2020)

Faculties	ST		SC		OBC		EWS		Gen	
	F	M	F	M	F	M	F	M	F	M
PhD Enrolled	16	69	74	212	177	422	41	78	715	1270
Total	85		286		599		119		1985	
Percentage	2.8		9.3		19.5		3.9		64.6	
Norm (minimum)	7.5		15.0		27.0		10			

Source: RTI Data F- Female M - Male; EWS came into force in 2019

ಹೋರಾಟಗಾರ್ತಿ, ಸಂಶೋಧಕಿ, ಚಿಂತಕಿ ಗೇಲ್ ಓಂವೆಡ್ತ್ ನಿಧನ

ಖ್ಯಾತ ಸಂಶೋಧಕಿ, ಅಂಬೇಡ್ಕರ್‌ವಾದ ಮತ್ತು ದಲಿತ ಚಳವಳಿಯ ಲೇಖಕಿ ಡಾ.ಗೆಲ್ ಓಮ್‌ವೆಡ್ತ್ ಬುಧವಾರ ಕಾಸೆಗಾಂವ್‌ನಲ್ಲಿ ಅನಾರೋಗ್ಯದಿಂದ ನಿಧನರಾದರು. ಆವರಿಗೆ 81 ವರ್ಷ ವಯಸ್ಸಾಗಿತ್ತು. ಅವರ ನಿಧನಕ್ಕೆ ದೇಶದ ಅನೇಕ ಚಿಂತಕರು, ಜನಪರ ಸಂಘಟನೆಗಳು, ದಲಿತ ಸಂಘಟನೆಗಳು ಕಂಬನಿ ಮಿಡಿದಿವೆ.

ಅಮೆರಿಕದ ಮಿನ್ನೇಸೋಟ ರಾಜ್ಯದ ಮಿನ್ನಿಯಾಪೊಲಿಸ್ ನಲ್ಲಿ ಜನಿಸಿದ ಡಾ. ಓಮ್ವೆಡ್ ತನ್ನ ಉನ್ನತ ವ್ಯಾಸಂಗ ಮುಗಿಸಿ ಭಾರತಕ್ಕೆ ಬಂದರು ಮತ್ತು ದಲಿತರು, ಬಡವರು ಮತ್ತು ದೀನರು, ರೈತರು, ಮಹಿಳೆಯರು ಸೇರಿದಂತೆ ವಿವಿಧ ಸಾಮಾಜಿಕ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು.



ಒಮ್ವೆಡ್–ಪಟಂಕರ್ ದಂಪತಿಗಳು 1980 ರ ದಶಕದ ಆರಂಭದಲ್ಲಿ ಶ್ರಮಿಕ್ ಮುಕ್ತಿ ದಳವನ್ನು ಸ್ಥಾಪಿಸಿದರು, ಅವರು 1983 ರ ಸುಮಾರಿಗೆ ಭಾರತೀಯ ಪ್ರಜೆಯಾದರು. ಅವರು ವಿವಿಧ ಸಾಮಾಜಿಕ ವಿಷಯಗಳ ಕುರಿತು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ವಿವಿಧ ಪತ್ರಿಕೆಗಳಿಗೆ ಅಂಕಣಗಳನ್ನು ಬರೆದಿದ್ದಾರೆ, ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ, ಆಕ್ಸ್‌ಫ್ಯಾಮ್ ನೋವಿಬ್ ಮತ್ತು ಇತರ ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದರು. ಡಾ.ಓಂವೆಡ್ತ್ ಅವರ ಅಂತಿಮ ಸಂಸ್ಕಾರವನ್ನು ಗುರುವಾರ ಬೆಳಿಗ್ಗೆ ಸಾಂಗ್ಲಿಯ ಕ್ರಾಂತಿವೀರ್ ಬಾಪೂಜಿ ಪತಂಕರ್ ಸಂಸ್ಥೆ ಕ್ಯಾಂಪಸ್‌ನಲ್ಲಿ ನೆರವೇರಿಸಲಾಗುತ್ತದೆ ಎಂದು ಅವರ ಸಹಾಯಕ ತಿಳಿಸಿದ್ದಾರೆ.


ಗೆಲ್ ಒಮ್ವೆಡ್ತ್ ನಿಧನಕ್ಕೆ ಸಿಪಿಐಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಟ್ವಿಟ್ ಮೂಲಕ ಸಂತಾಪ ಸೂಚಿಸಿದ್ದಾರೆ. “ಗಣ್ಯ ಕ್ರಿಯಾಶೀಲ ವಿದ್ವಾಂಸರು, ಎಂದೂ ರಾಜಿಗಿಳಿಯದ ಬದ್ಧತೆಯಿದ್ದವರು. ಅವರು ನಮ್ಮ ಸಾಮಾಜಿಕ ಪರಿಸ್ಥಿತಿಗಳನ್ನು ಅರಿತುಕೊಳ್ಳುವಲ್ಲಿ ಆಳವಾದ ಹೊಳಹುಗಳನ್ನು ಒದಗಿಸಿದ್ದರು ಎಂದು ಯೆಚೂರಿ ಟ್ವಿಟ್ ಮಾಡಿದ್ದಾರೆ.

ಓಂವೆಡ್ತ್ ನಿಧನಕ್ಕೆ ಕಂಬನಿ ಮಿಡಿದರುವ ಚಿಂತಕ ಡಾ. ವಡ್ಡಗೆರೆ ನಾಗರಾಜಯ್ಯರವರು ಫೆಸ್ಬುಕ್ ನಲ್ಲಿ ಅವರ ಬಗ್ಗೆ ಈ ಕೆಳಗಿನಂತೆ ಬರೆದು ಕೊಂಡಿದ್ದಾರೆ. “ ನಮ್ಮ ಕಾಲದ ಶ್ರೇಷ್ಠ ಸಮಾಜಶಾಸ್ತ್ರಜ್ಞೆ, ಸ್ತ್ರೀವಾದಿ ಚಿಂತಕಿ, ಮಾನವ ಹಕ್ಕುಗಳ ಹೋರಾಟಗಾರ್ತಿ, ಜಾತಿ ವಿನಾಶ ಚಳವಳಿಯ ಬಹು ಮುಖ್ಯ ಧ್ವನಿ, ಬಹುಜನ ಚಳವಳಿಯ ಮೇರು ಚಿಂತಕರಲ್ಲಿ ಒಬ್ಬರಾಗಿದ್ದ ಗೇಲ್ ಓಂವೆಡ್ತ್ ನಿಧನರಾಗಿದ್ದಾರೆ.

ಅಮೆರಿಕಾದಲ್ಲಿ ಜನಿಸಿದ ಗೇಲ್ ತಮ್ಮ ಪಿಎಚ್‌ಡಿ ಅಧ್ಯಯನಕ್ಕೆಂದು ಭಾರತಕ್ಕೆ ಬಂದವರು. ‘ಅಂಬೇಡ್ಕರ್ ಚಿಂತನೆ ಮತ್ತು ಹೋರಾಟ’ದ ಬಗ್ಗೆ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದು ಭಾರತದಲ್ಲಿಯೇ ನೆಲೆಸಿ ತಮ್ಮ ಇಡೀ ಬದುಕನ್ನು ದಮನಿತ ಸಮುದಾಯಗಳ ಅಧ್ಯಯನಕ್ಕೆ ತೆತ್ತುಕೊಂಡವರು. ತಮ್ಮ ಪ್ರಖರ ಬೌದ್ಧಿಕತೆಯ ಮೂಲಕ ಅಂಬೇಡ್ಕರ್ ಚಿಂತನೆ ಮತ್ತು ದಲಿತ ಅಧ್ಯಯನವನ್ನು ವಿಶ್ವಮಟ್ಟಕ್ಕೆ ಬೆಳೆಸಿದ ಈ ಮೇರು ಚಿಂತಕಿಯಾಗಿದ್ದಾರೆ.

“ಗೇಲ್ ಓಂವೆಡ್ತ್ ಅವರು ಬುದ್ಧಪೂರ್ವ ಯುಗದಲ್ಲಿ ಜೀವಿಸಿದ್ದು ಬೌದ್ಧಧಮ್ಮವನ್ನು ಮೊದಲಿಗೆ ಪ್ರತಿಪಾದಿಸುವ ಮೂಲಕ ಆದಿಬುದ್ಧ ಎನ್ನಿಸಿದ ಕಸ್ಸಪ ಮಾತಂಗನನ್ನು ಕುರಿತು, ಖಿಜ ಆಚಿಟುಣ ಎಂಬ ಇಂಗ್ಲಿಷ್ ಮ್ಯಾಗಜೀನ್ ನಲ್ಲಿ ಪ್ರಕಟಿಸಿದ್ದ ಖಜಭಿಟಚುಟುಟಿರ ಒಚಿಣಚಿಟಿಂಚಿ ಎಂಬ ಸಂಶೋಧನಾ ಲೇಖನವನ್ನು ನಾನು ಕನ್ನಡಕ್ಕೆ ಅನುವಾದಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಡಾ.ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ ನಾನು ರೂಪಿಸಿದ “ಕರ್ನಾಟಕದ ಆದಿಜಾಂಬವ ಮಾತಂಗ ಪರಂಪರೆ” ಎಂಬ ನನ್ನ ಪಿಎಚ್.ಡಿ ಮಹಾಪ್ರಬಂಧದಲ್ಲಿಯೂ ಓಂವೆಡ್ತ್ ಅವರ ಚಿಂತನೆಗಳನ್ನು ದಾಖಲಿಸಿರುತ್ತೇನೆ ಎಂದು ಡಾ. ವಡ್ಡಗೆರೆ ನಾಗರಾಜಯ್ಯ ಅಂತಿಮ ನಮನಗಳನ್ನು ಸಲ್ಲಿಸಿದ್ದಾರೆ. ■

ಹಿರಿಯ ಪತ್ರಕರ್ತ–ರಂಗಕರ್ಮಿ ಗುಡಿಹಳ್ಳಿ ನಾಗರಾಜ ನಿಧನ



ರಂಗಕರ್ಮಿಯಾಗಿ ಹಾಗೂ ಪತ್ರಕರ್ತರಾಗಿ ರಾಜ್ಯದ ಜನಮಾನಸದಲ್ಲಿ ಗುರುತಿಸಿಕೊಂಡಿದ್ದ ಹಿರಿಯ ಪತ್ರಕರ್ತ ಗುಡಿಹಳ್ಳಿ ನಾಗರಾಜ (66 ವರ್ಷ) ನಗರದಲ್ಲಿ ನಿಧನರಾಗಿದ್ದಾರೆ.

ದಾವಣಗೆರೆ (ಈಗ ಬಳ್ಳಾರಿ) ಜಿಲ್ಲೆ ಹರಪನಹಳ್ಳಿ, ತಾಲ್ಲೂಕು ಗುಡಿಹಳ್ಳಿಯ ನಾಗರಾಜ ತಮ್ಮ ಆರಂಭದ ದಿನಗಳಲ್ಲೂ ರಂಗತಂಡಗಳ ರೂವಾರಿಯಾಗಿ ರಾಜ್ಯದ ನಾಲ್ಕಾರು ರಂಗತಂಡಗಳ ತೆರೆಯ ಹಿಂದಿನ ಶಕ್ತಿಯಾಗಿ ತೊಡಗಿಸಿಕೊಂಡಿದ್ದವರು. ನೂರಾರು ಕಲಾವಿದರನ್ನು ಬೆಳಕಿಗೆ ತಂದಿದ್ದಾರೆ. ಮುಖ್ಯವಾಹಿನಿಯಲ್ಲಿ ಅವಕಾಶ ಕಲ್ಪಿಸಿದ್ದಾರೆ.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ.ಇಂಗ್ಲಿಷ್ ಪದವಿ ಪಡೆದು, ಹರಪನಹಳ್ಳಿಯಲ್ಲಿ ಮೂರು ವರ್ಷ (1980–83) ಉಪನ್ಯಾಸಕರಾಗಿದ್ದರು. 1983 ರಲ್ಲಿ ಪ್ರಜಾವಾಣಿ, ಸುಧಾ, ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಮೂಹದಲ್ಲಿ 31 ವರ್ಷ ಕಾಲ ವಿವಿಧ ಸಂಪಾದಕೀಯ ಹುದ್ದೆ ನಿರ್ವಹಿಸಿ ಸುದ್ದಿಸಂಪಾದಕರಾಗಿ ನಿವೃತ್ತರಾದರು.

ನಟ, ನಿರ್ದೇಶಕರಾಗಿ ರಂಗಪ್ರವೇಶ ಮತ್ತು ಸಂಘಟರಾಗಿಯೂ ಕೆಲಸ ಮಾಡಿದ ಗುಡಿಹಳ್ಳಿಯವರು ರಂಗ ಬರವಣಿಗಳಲ್ಲಿಯೂ ತೊಡಗಿಸಿಕೊಂಡಿದ್ದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ, ಪ್ರೆಸ್‌ಕ್ಲಬ್ ಉಪಾಧ್ಯಕ್ಷ, ಬಂಡಾಯ ಸಾಹಿತ್ಯ ಸಂಘಟನೆ ರಾಜ್ಯ ಸಂಚಾಲಕ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದವರು. ರಾಜ್ಯೋತ್ಸವ, ಕೆಂಪೇಗೌಡ, ಮುರುಘರಾಜೇಂದ್ರ, ನಾಟಕ ಅಕಾಡೆಮಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಹರಪನಹಳ್ಳಿ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಂಗ ದಿಗ್ಗಜರ ಹಲವಾರು ವ್ಯಕ್ತಿಚಿತ್ರಗಳು ಶಾಲೆ, ಕಾಲೇಜು ಪಠ್ಯಪುಸ್ತಕಗಳಲ್ಲಿ ಪಾಠಗಳಾಗಿವೆ. ಗುಡಿಹಳ್ಳಿ ಬರೆದದ್ದಕ್ಕಿಂತ ಬರೆಯಿಸಿದ್ದೇ ಹೆಚ್ಚು, ರಂಗದ ಮೇಲೆ ಮೆರೆದದ್ದಕ್ಕಿಂತ ತೆರೆಯ ಹಿಂದೆ ದುಡಿದದ್ದೇ ಹೆಚ್ಚು. ರಂಗಭೂಮಿ ಬಿಟ್ಟರೆ ಮತ್ತೇನು ಗೊತ್ತಿಲ್ಲ ಎಂಬಂತೆ ಬದುಕುತ್ತಿರುವ ನಿಷ್ಕಾಮ ರಂಗಕರ್ಮಿ.

ಗುಡಿಯಳ್ಳಿ ನಾಗರಾಜ ಅವರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಬೆಂಗಳೂರಿನ ಗೋವಿಂದರಾಜನಗರದಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಅವಕಾಶವಿದೆ. ನಾಗರಾಜ್ ಅವರ ಅಂತ್ಯಸಂಸ್ಕಾರವನ್ನು ದಾವಣಗೆರೆ ಜಿಲ್ಲೆಯ ಕೆರೆಗುಡಿಹಳ್ಳಿಯಲ್ಲಿ ನಡೆಸಲು ಕುಟುಂಬಸ್ಥರು ತೀರ್ಮಾನಿಸಿದ್ದಾರೆ.

“ರಂಗ ನೇಪಥ್ಯ” ರಂಗಪತ್ರಿಕೆಯ ಸಂಪಾದಕರಾಗಿ ಗೆಳೆಯ ಗುಡಿಹಳ್ಳಿ ನಾಗರಾಜ ಅವರು ನಿಧನದಿಂದ ದುಃಖವನ್ನು ತರಿಸಿದೆ. ಪ್ರಜಾವಾಣಿಯಿಂದ ನಿವೃತ್ತರಾದ ಮೇಲೆ “ಕನ್ನಡ ರಂಗಭೂಮಿ”ಯ ಜತೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಮುಖ್ಯವಾಗಿ ‘ಕಂಪನಿ ನಾಟಕರಂಗ’ ಕುರಿತು ಲೇಖನಗಳನ್ನು ಬರೆಯುತ್ತಿದ್ದ ಗುಡಿಹಳ್ಳಿ ನಾಗರಾಜ 1979 ರಲ್ಲಿ ಸಮುದಾಯ ಆಯೋಜಿಸಿದ್ದ ಬಾದಲ್ ಸರ್ಕಾರ್ ಅವರ ರಂಗ ತರಬೇತಿ ಶಿಬಿರದಲ್ಲಿ ನಮ್ಮ ಜತೆ ಭಾಗವಹಿಸಿದ ನೆನಪು ನನಗಿದೆ. ಅವರ ಅಗಲಿಕೆ ಕನ್ನಡ ರಂಗಭೂಮಿಗೆ ದೊಡ್ಡ ನಷ್ಟ.

ಟಿ. ಸುರಂದ್ರರಾವ್, ರಂಗಕರ್ಮಿ, ಸಮುದಾಯ

ಪತ್ರಿಕೋದ್ಯಮ ಕ್ಷೇತ್ರದಲ್ಲಿ ವಿಶೇಷವಾಗಿ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದ್ದ ಗುಡಿಹಳ್ಳಿ, ಪ್ರಜಾವಾಣಿ ಪತ್ರಿಕೆಯಲ್ಲಿ ಸುಧೀರ್ಘ ಅವಧಿಗೆ ಕೆಲಸ ಮಾಡಿದವರು. ಪತ್ರಕರ್ತರ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ದುಡಿದವರು. ಕೆಯುಡಬ್ಲ್ಯೂಜೆ ಸಂಘಟನೆಯಲ್ಲಿ ಅವರ ಸೇವೆ ಮರೆಯಲಾಗದು.

ಶಿವಾನಂದ ತಗಡೂರು, ಅಧ್ಯಕ್ಷರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ

ಚಿತ್ರದುರ್ಗದಲ್ಲಿ 1990 ರಿಂದಲೇ ಅವರು ಅಂದಿನ ಅವಿಭಜಿತ ಜಿಲ್ಲೆಗೆ ಪ್ರಜಾವಾಣಿ ವರದಿಗಾರರಾಗಿ ಆಗಮಿಸಿದ ದಿನಮಾನಗಳಿಂದಲೂ ಪರಿಚಿತರು. ಜನಪರ ಹೋರಾಟ ಹಾಗೂ ಕಾರ್ಯಕ್ರಮಗಳಿಗೆ ಕೈಲಾದಷ್ಟು ಧನಸಹಾಯ ಮಾಡುತ್ತಾ ಬಂದವರು. ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐ ಎರಡನೇ ಜಿಲ್ಲಾ ಸಮ್ಮೇಳನ ದಾವಣಗೆರೆಯಲ್ಲಿ ಸಂಘಟಿಸಿದ್ದಾಗ ಅದರ ಸ್ವಾಗತ ಸಮಿತಿ ಅಧ್ಯಕ್ಷರಾಗಿ ನಮಗೆ ಸ್ಪೂರ್ತಿಯುತವಾಗಿ ಸಹಾಯ ಮಾಡಿದ್ದಾರೆ. ರಂಗಭೂಮಿ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದವರು ಅದಕ್ಕಾಗಿ ಇಡೀ ರಾಜ್ಯವನ್ನೇ ತಿರುಗಿದರು.

ಕೆ. ಮಹಾಂತೇಶ, ಸಿಐಟಿಯು ರಾಜ್ಯ ಕಾರ್ಯದರ್ಶಿ

ವೃತ್ತಿ, ಹವ್ಯಾಸಿ, ಗ್ರಾಮೀಣ ಸೇರಿದಂತೆ ಸಮಗ್ರ ರಂಗಭೂಮಿ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಗುಡಿಹಳ್ಳಿ ನಾಗರಾಜ ರಂಗಭೂಮಿ ಕುರಿತ ಇವರ ಬರಹಗಳು ರಂಗ ಇತಿಹಾಸದಲ್ಲಿ ಹೊಸ ಹಾದಿ ನಿರ್ಮಿಸಿವೆ. ಅಂತಹ ಹದಿನೈದಕ್ಕೂ ಹೆಚ್ಚು ರಂಗಕೃತಿ ರಚಿಸಿದ್ದಾರೆ.

ಗುಡಿಹಳ್ಳಿ ನಾಗರಾಜ್ ಅವರ ರಂಗಕೃತಿಗಳು: ರಂಗನಾಟಕ ಪ್ರಯೋಗ ಸಾರ್ಥಕತೆ, ತೆರೆ ಸರಿದಾಗ (ಮಾಲತಿಶ್ರೀ ಮೈಸೂರು ಆತ್ಮಕತೆ), ರಂಗಸಿರಿ (ಮರಿಯಮ್ಮನಹಳ್ಳಿ ಡಾ.ನಾಗರತ್ನಮ್ಮ ಆತ್ಮಕತೆ), ಗುಬ್ಬಿ ವೀರಣ್ಣ, ಡಾ.ಲಕ್ಷ್ಮಣದಾಸ್, ಗಾನಕೋಗಿಲೆ, ಅನುಪಮ ಅಭಿನೇತ್ರಿ ಸುಭದ್ರಮ್ಮ ಮನ್ಸೂರು, ಮೇಕಪ್‌ಮನ್ ಸುಬ್ಬಣ್ಣ, ರಂಗನೇವರಿಕೆ, ರಂಗಸಂದರ್ಶನ, ರಂಗದಿಗ್ಗಜರು, ಚಿಂದೋಡಿ ಲೀಲಾ, ಕಲಾಗ್ರಾಮ, ಜನಪರ ರಂಗಭೂಮಿ, ರಂಗಸೆಲೆ ಇತ್ಯಾದಿ.

ಅವರ ಸಂಪಾದಿತ ಕೃತಿಗಳು:

ಕರ್ನಾಟಕ ನಾಟಕ ಅಕಾಡೆಮಿಯ ಜಿಲ್ಲಾ ರಂಗಮಾಹಿತಿ ಮಾಲಿಕೆ, ಹಾಗೂ ರಂಗಸಂಪನ್ನರು ಮಾಲಿಕೆಯ 40 ಕೃತಿಗಳು, ವೃತ್ತಿ ರಂಗದ ಮಹತ್ತರ ನಾಟಕಗಳು (ರಾಮಕೃಷ್ಣ ಮರಾಠೆ ಜತೆಗೆ), ಶತಮಾನದ ಶಕಪುರುಷ ಏಣಗಿ ಬಾಳಪ್ಪ (ಈ ಮೂರೂ ಸರಣಿ ನಾಟಕ ಅಕಾಡೆಮಿ ಪ್ರಕಟಣೆ), ಪಿ.ಬಿ. ಧುತ್ತರಗಿ ಆಯ್ದ ನಾಟಕಗಳು (ಪುಸ್ತಕ ಪ್ರಾಧಿಕಾರದ ಪ್ರಕಟಣೆ) ಸೇರಿದಂತೆ ಹಲವು ಕೃತಿಗಳು ಪ್ರಕಟವಾಗಿವೆ. ■

ಬಿ.ಆರ್. ಶೆಟ್ಟಿ ಆಸ್ಪತ್ರೆ ಸಿಬ್ಬಂದಿಗಳ ಹೋರಾಟಕ್ಕೆ ಸಿಐಟಿಯು ಬೆಂಬಲ

ಡಾ. ಬಿ.ಆರ್. ಶೆಟ್ಟಿ ವೆಂಚರ್ಸ್ – ಹಾಜಿ ಅಬ್ದುಲ್ಲಾ ಆಸ್ಪತ್ರೆಯ 16 ಮಂದಿ ಸಿಬ್ಬಂದಿಯನ್ನು ಏಕಾಏಕಿ ವಜಾಗೊಳಿಸಿದ ಕ್ರಮವನ್ನು ಖಂಡಿಸಿರುವ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಉಡುಪಿ ತಾಲೂಕು ಸಮಿತಿ ಸಿಬ್ಬಂದಿಗಳ ಹೋರಾಟಕ್ಕೆ ಬೆಂಬಲ ಸೂಚಿಸಿದೆ.



ಆಡಳಿತ ಮಂಡಳಿಯು ಸಿಬ್ಬಂದಿಗಳಿಗೆ ಕಳೆದ ಮೂರು ತಿಂಗಳಿಂದ ವೇತನ ನೀಡದೆ ಸತಾಯಿಸಿದೆ. ಜಿಲ್ಲಾಡಳಿತದ ಮಧ್ಯಪ್ರವೇಶದ ನಂತರವೂ ವೇತನ ನೀಡದೆ ಪ್ರಮುಖರನ್ನು ಕೆಲಸದಿಂದ ವಜಾ ಮಾಡಿದ ಔಚಿತ್ಯವೇನು ಎಂದು ಸಿಐಟಿಯು ಪ್ರಶ್ನಿಸುತ್ತದೆ. ವೇತನ ಸಿಗದಿದ್ದರೂ ಆಸ್ಪತ್ರೆಗೆ ದಾಖಲಾದವರಿಗೆ ಚಿಕಿತ್ಸೆಯನ್ನು ನೀಡುತ್ತಿರುವುದು ಉದ್ಯೋಗಿಗಳ ಹೃದಯವಂತಿಕೆಯನ್ನು ತೋರಿಸುತ್ತದೆ ಎಂದು ಸಂಘಟನೆಯು ತಿಳಿಸಿದೆ.

ಖಾಸಗಿ ಒಡೆತನದಲ್ಲಿದ್ದ ಆಸ್ಪತ್ರೆಯು ಈಗ ನಡೆಸಲು ಸಾಧ್ಯವಿಲ್ಲ ಎಂದು ಪತ್ರ ಬರೆದಿರುವುದು ಕಂಡು ಬಂದಿದೆ. ಕೂಡಲೇ ತಡ ಮಾಡದೆ ಸಂಪೂರ್ಣ ಆಸ್ಪತ್ರೆಯನ್ನು ಸರಕಾರವೇ ವಶಕ್ಕೆ ತೆಗೆದುಕೊಂಡು ನಿರ್ವಹಿಸಬೇಕು ಎಂದು ಸಿಐಟಿಯು ಆಗ್ರಹಿಸುತ್ತದೆ.

ಆಸ್ಪತ್ರೆಯ ಸಿಬ್ಬಂದಿಗಳ ಸಂಬಳದ ವಿಚಾರದಲ್ಲಿ ಬಹಳಷ್ಟು ಭಾರೀ ಪ್ರತಿಭಟನೆ ನಡೆದರೂ ಶಾಸಕರು, ಜಿಲ್ಲಾಧಿಕಾರಿ ಮಧ್ಯೆ ಪ್ರವೇಶಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದೀಗ ಸರಕಾರದ ವೈಫಲ್ಯಕ್ಕೆ ಜನ ಸಂಕಷ್ಟ ಪಡುವಂತಾಗಿದೆ. ಸಿಬ್ಬಂದಿಗಳ ನ್ಯಾಯಯುತ ಹೋರಾಟಕ್ಕೆ ಉಡುಪಿಯ ಜನತೆ ಬೆಂಬಲ ನೀಡಬೇಕೆಂದು ಸಿಐಟಿಯು ಮನವಿ ಮಾಡಿದೆ.

ವಜಾ ಆಗಿರುವ ಎಲ್ಲಾ 16 ನೌಕರರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳಬೇಕು ಹಾಗೂ ಬಾಕಿ ಇರುವ ಎಲ್ಲಾ ವೇತನವನ್ನು ಕೂಡಲೇ ನೀಡಬೇಕೆಂದು ಸಿಐಟಿಯು ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಕವಿರಾಜ್ ಆಗ್ರಹಿಸಿದೆ. ■

ಅತ್ಯಾಚಾರವೆಂಬ ಘೋರಕೃತ್ಯವೂ, ಕ್ಷೀಣಿಸುತ್ತಿರುವ ಪ್ರತಿರೋಧವೂ

ಪ್ರಸಕ್ತ

ವಿಮಲಾ ಕೆ.ಎಸ್.

ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಿರ್ಭಯಾ ಪ್ರಕರಣವನ್ನೇ ಹೋಲುವ ಅತ್ಯಾಚಾರದ ಘಟನೆಯೊಂದು ನಡೆದಿದೆ. ಘಟನೆ ನಡೆದು ಯಾರೋ ಸ್ನೇಹಿತರಿಗೆ ಕರೆ ಮಾಡಿ ಯುವಕ ಸಹಾಯಕ್ಕಾಗಿ ಯಾಚಿಸಿ ನಂತರ ಯುವತಿ ದೂರು ದಾಖಲಿಸಲು ಹೋದಾಗ ಸ್ಥಳೀಯ ಪೋಲಿಸರು ಆಕೆ ಪರಸ್ಥಳದವಳೆಂಬ ಕಾರಣಕ್ಕೆ ದೂರು ದಾಖಲಿಸಿಕೊಳ್ಳಲು ವಿಳಂಬ ಮಾಡಿದರು ಎನ್ನುತ್ತದೆ ವರದಿಯೊಂದು. ಘಟನೆ ನಡೆದಿರುವುದು ಮೈಸೂರು ನಗರದ ಪೋಲೀಸ್ ವ್ಯಾಪ್ತಿಯಲ್ಲಿಯೇ, ಎಂದ ಮೇಲೆ ದೂರು ದಾಖಲಿಸಿಕೊಳ್ಳದಿರುವುದು ಕರ್ತವ್ಯ ಲೋಪವಾಗುವುದಿಲ್ಲವೇ? ಜಸ್ಟೀಸ್ ವರ್ಮಾ ಸಮಿತಿಯ ಶಿಫಾರಸುಗಳ ಪ್ರಕಾರ ಅತ್ಯಾಚಾರದಂಥಹ ಹೀನ ಕೃತ್ಯದ ದೂರು ದಾಖಲಿಸಿಕೊಳ್ಳಲು ವಿಫಲರಾದರೆ ಅಥವಾ ತನಿಖೆಗೆ ತೊಂದರೆಯುಂಟು ಮಾಡಿದರೆ ಆ ಅಧಿಕಾರಿ ಶಿಕ್ಷೆಗೆ ಅರ್ಹರು. ಸಾಂದರ್ಭಿಕ ಸಾಕ್ಷಗಳೇ ಆಧಾರವಾಗಬೇಕಾದ್ದರಿಂದ ಮತ್ತು ಸಿಗಬಹುದಾದ ಪ್ರಮುಖ ಸಾಕ್ಷಿಗಳನ್ನು ಘಟನೆ ನಡೆದ ಸ್ಥಳದಲ್ಲಿ ಪಡೆಯಬೇಕಾದ ಪೋಲೀಸರು ಘಟನೆ ನಡೆದ 24 ಘಂಟೆಗಳ ತರುವಾಯ ಸ್ಥಳಕ್ಕೆ ಭೇಟಿಕೊಟ್ಟರೆಂಬ ದೂರುಗಳೂ ಕೇಳಬರುತ್ತಿವೆ.

ಅತ್ಯಾಚಾರವೆಂಬ ಘನಘೋರ ಕೃತ್ಯ ನಡೆಯುತ್ತದೆ. ಸಮಾಜ ಬಹಳ ವಿಚಲಿತಗೊಂಡಂತೆ ಕಾಣುವುದಿಲ್ಲ. ಯಾಕೆಂದರೆ ಅದೀಗ ಸಾಮಾನ್ಯ ಸಂಗತಿಯಾಗಿದೆ. ಪ್ರತಿಕ್ರಿಯೆ, ಪ್ರತಿರೋಧ ಮಾಡಿದರೂ ಮಾಡದಿದ್ದರೂ ನಡೆಯುತ್ತದೆ ಎಂಬ ತಣ್ಣಗಿನ ಭಾವಕ್ಕೆ ಬಿದ್ದಂತೆ ಭಾಸವಾಗುತ್ತಿದೆ.

ಅಂದು 2012ರಲ್ಲಿ ನಿರ್ಭಯಾ ಪ್ರಕರಣ ನಡೆದಾಗ ದೇಶದಾದ್ಯಂತ ಆಕ್ರೋಶ ಭುಗಿಲೆದ್ದಿತ್ತು. ಕೇಂದ್ರ ಸರಕಾರ ಸಮರೋಪಾದಿಯಲ್ಲಿ ಕ್ರಮಕ್ಕೆ ಇಳಿಯುವಂತೆ ಮಾಡುವಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳ ಹೋರಾಟ ಯಶಸ್ವಿಯಾಗಿತ್ತು. ಯಾಕೆಂದರೆ ಆಕೆಯೊಬ್ಬ ಪ್ಯಾರಾ ಮೆಡಿಕಲ್ ಓದುತ್ತಿದ್ದ ವಿದ್ಯಾರ್ಥಿನಿಯಾಗಿದ್ದಳು. ರೋಷಾವೇಶದ ಮಾತುಗಳು, ಅತ್ಯಾಚಾರಿಗಳಿಗೆ ರಾಸಾಯನಿಕ ಬಳಸಿ ಷಂಡರನ್ನಾಗಿ ಮಾಡಬೇಕು, ಗಲ್ಲು ಶಿಕ್ಷೆ ವಿಧಿಸಬೇಕು ಎಂಬಿತ್ಯಾದಿ ಮಾತುಗಳೂ ಕೇಳಿ ಬಂದವು. ಜನರ ಒತ್ತಡ ಸರಕಾರವನ್ನು ತುರ್ತಾಗಿ ಕೆಲಸಕ್ಕೆ ಇಳಿಸಲು ನೆರವಾಯಿತು. ಸಂತ್ರಸ್ತೆಯನ್ನು ಸರಕಾರದ ಖರ್ಚಿನಲ್ಲಿ ವಿಶೇಷ ವಿಮಾನದ ಮೂಲಕ ಸಿಂಗಪೂರ್‌ಗೆ ಚಿಕಿತ್ಸೆಗೆ ಕೂಡ ಕಳಿಸಿಕೊಡುವಂತಾಯಿತು. ಸುಮ್ಮನೆ ನೆನಪಿಸಿಕೊಳ್ಳಲು ಆಗ ಕೇಂದ್ರದಲ್ಲಿ ಯು.ಪಿ.ಎ ಸರಕಾರವಿತ್ತು. ಮತ್ತು ಬಿ.ಜೆ.ಪಿ. ವಿರೋಧ ಪಕ್ಷವಾಗಿತ್ತು.

ಇಂತಹ ದೌರ್ಜನ್ಯಗಳನ್ನು ನಿವಾರಿಸಲು ಮಾರ್ಗೋಪಾಯ ಕಂಡುಹಿಡಿಯಲು ಜಸ್ಟೀಸ್ ವರ್ಮಾ ರವರ ನೇತೃತ್ವದಲ್ಲಿ ಒಂದು ಆಯೋಗದ ರಚನೆಯೂ ಆಯಿತು. ಅದು ತನಗಿದ್ದ ಸೀಮಿತ ಅವಧಿಯೊಳಗೆ 'ಜಗ ಮೆಚ್ಚಿ ಅಹುದಹುದೆನ್ನುವಂತ' ವರದಿಯನ್ನೂ ನೀಡಿತು. ವರದಿಯ ಅನುಷ್ಠಾನದ ಕುರಿತು ಎಷ್ಟು ಬೇಕೋ ಅಷ್ಟು ಪ್ರತಿಕ್ರಿಯೆಗಳು ಬಂದಿದ್ದು ಕೂಡಾ ಅಚ್ಚರಿಯ ಸಂಗತಿಯೇನಲ್ಲ. ಆದರೆ ಅತ್ಯಾಚಾರವನ್ನು ಬಹಳ ಮನಸ್ಸಿಗೆ ಹಚ್ಚಿಕೊಂಡಂತೆ, ಮತ್ತು ಕಾನೂನಿನ ಕುಣಿಕೆ ಬಿಗಿಯಾದರೆ ಅಪರಾಧ ನಿಂತು ಹೋಗುತ್ತದೆಂಬ ಹುಂಬತನದ ವಾದವನ್ನು ಹರಿಬಿಟ್ಟು, ಮಂಕ ಮಡೆಯ ಮುತ್ಠಾಳರಿಂದ ಹೌದ್ಹೌದೆನಿಸಿಕೊಂಡು ಕೆಲವು ರಾಜ್ಯಗಳಲ್ಲಿ ಅತ್ಯಾಚಾರಕ್ಕೆ ಗಲ್ಲು ಶಿಕ್ಷೆಯನ್ನು ಕೂಡಾ ತಂದಾಗಿದೆ. ಆದರೆ..ಅತ್ಯಾಚಾರ ನಿಂತಿತೇ.. ಇಲ್ಲ. ಗಲ್ಲು ಶಿಕ್ಷೆಯ ವರೆಗೆ ಇರಲಿ ಬಹುತೇಕ ಆರೋಪಿಗಳು ಅಪರಾಧಿಗಳಾಗುವುದೇ ಇಲ್ಲ ಎನಿಸುವಷ್ಟು ಆಮೆಗತಿಯಲ್ಲಿ ವಿಚಾರಣೆ ನಡೆಯುತ್ತದೆ. ಮತ್ತು ಕಾಲಗರ್ಭದಲ್ಲಿ ಹೂತು ಹೋಗುತ್ತದೆ. ಜನರ ಮರೆವಿಗೆ ಔಷಧಿ ಇಲ್ಲ, ಮರೆತಿದ್ದು ನೆನಪಿಸುವವರೂ ಇಲ್ಲ.

ಈಗ ಅಗಸ್ಟ್ 25, 2021ರಂದು ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಿರ್ಭಯಾ ಪ್ರಕರಣವನ್ನೇ ಹೋಲುವ ಅತ್ಯಾಚಾರದ ಘಟನೆಯೊಂದು ನಡೆದಿದೆ. ಎಂ.ಬಿ.ಎ ವಿದ್ಯಾರ್ಥಿನಿ, ಸ್ನೇಹಿತನೊಂದಿಗೆ ಚಾಮುಂಡಿ ತಪ್ಪಲಿನಲ್ಲಿ ಸಂಜೆ ಏಳು ಘಂಟೆಯ ಹೊತ್ತಿನಲ್ಲಿ ಇದ್ದಾಗ ಪಾನಮತ್ತರ ಗುಂಪೊಂದು ಬಂದು ಹಣಕ್ಕಾಗಿ ಪೀಡಿಸಿದೆ. ಹಣವಿಲ್ಲವೆಂದಾಗ ಯುವಕನನ್ನು ಕಟ್ಟಿಹಾಕಿ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದೆ ಎಂಬುದು ಒಂದು ಮಾಹಿತಿ ಇದರ ಜೊತೆಗೇ ಅದೂ ಇದೂ ಕಾಗಕ್ಕ ಗುಬ್ಬಕ್ಕರ ರೆಕ್ಕೆ ಪುಕ್ಕ ಕಟ್ಟಿಕೊಂಡ ಹಲವು ಉಪಕಥೆಗಳೂ



ಹರಿದಾಡುತ್ತಿವೆ.

ನಿರ್ಭಯಾ ಪ್ರಕರಣದಲ್ಲಿ ಜನ ಹುಚ್ಚೆದ್ದು ಪ್ರತಿಭಟಿಸುವಾಗ ಇಂದಿನ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ನಡೆಸುತ್ತಿರುವ ಬಿ.ಜೆ.ಪಿ ವಿರೋಧ ಪಕ್ಷವಾಗಿತ್ತು. ಅದರ ಧ್ವನಿಯೂ ಪ್ರತಿಭಟನೆಯ ಧ್ವನಿಯೊಳಗೆ ಸಶಕ್ತವಾಗಿಯೇ ಸೇರಿಕೊಂಡಿತ್ತೆಂಬುದರಲ್ಲಿ ಯಾವ ಅನುಮಾನಗಳೂ ಇಲ್ಲ.

ಘಟನೆ ನಡೆದು ಯಾರೋ ಸ್ನೇಹಿತರಿಗೆ ಕರೆ ಮಾಡಿ ಯುವಕ ಸಹಾಯಕ್ಕಾಗಿ ಯಾಚಿಸಿ ನಂತರ ಯುವತಿ ದೂರು ದಾಖಲಿಸಲು ಹೋದಾಗ ಸ್ಥಳೀಯ ಪೋಲಿಸರು ಆಕೆ ಪರಸ್ಥಳದವಳೆಂಬ ಕಾರಣಕ್ಕೆ ದೂರು ದಾಖಲಿಸಿಕೊಳ್ಳಲು ವಿಳಂಬ ಮಾಡಿದರು ಎನ್ನುತ್ತದೆ ವರದಿಯೊಂದು. ಜಸ್ಟೀಸ್ ವರ್ಮಾ ಸಮಿತಿಯ ಶಿಫಾರಸು ಬಹಳ ಸ್ಪಷ್ಟವಾಗಿ – ಸಂತ್ರಸ್ತೆಯು ದೂರು ದಾಖಲಿಸಲು ಬಂದಾಗ ನ್ಯಾಯವ್ಯಾಪ್ತಿಯ ಸಬೂಬು ಹೇಳದೆಯೇ ದೂರು ದಾಖಲಿಸಿಕೊಳ್ಳಬೇಕು ಎಂದು ಹೇಳುತ್ತದೆ. ಇಲ್ಲಿ ಯುವತಿ ಪರಊರಿನವಳಾಗಿರಬಹುದು. ಆದರೆ ಘಟನೆ ನಡೆದಿರುವುದು ಮೈಸೂರು ನಗರದ ಪೋಲೀಸ್ ವ್ಯಾಪ್ತಿಯಲ್ಲಿಯೇ, ಎಂದ ಮೇಲೆ ದೂರು ದಾಖಲಿಸಿಕೊಳ್ಳದಿರುವುದು ಕರ್ತವ್ಯ ಲೋಪವಾಗುವುದಿಲ್ಲವೇ? ಜಸ್ಟೀಸ್ ವರ್ಮಾ ಸಮಿತಿಯ ಶಿಫಾರಸುಗಳ ಪ್ರಕಾರ ಅತ್ಯಾಚಾರದಂಥಹ ಹೀನ ಕೃತ್ಯದ ದೂರು ದಾಖಲಿಸಿಕೊಳ್ಳಲು ವಿಫಲರಾದರೆ ಅಥವಾ ತನಿಖೆಗೆ ತೊಂದರೆಯುಂಟು ಮಾಡಿದರೆ ಆ ಅಧಿಕಾರಿ ಶಿಕ್ಷೆಗೆ ಅರ್ಹರು. ಅಲ್ಲದೆ ಅತ್ಯಾಚಾರದಂಥಹ ಪ್ರಕರಣಗಳಲ್ಲಿ ಸಾಕ್ಷಿ ಪುರಾವೆಗಳನ್ನು ಮುಂದಿಟ್ಟುಕೊಂಡು ತನಿಖೆ ನಡೆಯುವುದು ದುಸ್ತರವೆಂಬುದು ಅನುಭವ ಜನ್ಯ ಸತ್ಯವಾಗಿದ್ದು ಸಾಂದರ್ಭಿಕ ಸಾಕ್ಷಗಳೇ ಆಧಾರವಾಗಬೇಕಾಗುತ್ತದೆ. ಈ ಕಾರಣದಿಂದ ಮತ್ತು ಸಿಗಬಹುದಾದ ಪ್ರಮುಖ ಸಾಕ್ಷಿಗಳನ್ನು ಘಟನೆ ನಡೆದ ಸ್ಥಳದಲ್ಲಿ ಪಡೆಯಬೇಕಾದ ಪೋಲೀಸರು ಘಟನೆ ನಡೆದ 24 ಘಂಟೆಗಳ ತರುವಾಯ ಸ್ಥಳಕ್ಕೆ ಭೇಟಿಕೊಟ್ಟರೆಂಬ ದೂರುಗಳೂ ಕೇಳಿಬರುತ್ತಿವೆ. ಇಷ್ಟೆಲ್ಲ ಘಟನೆಗಳು ನಡೆಯುತ್ತಿರುವಾಗ ರಾಜ್ಯದ ಗೃಹಮಂತ್ರಿಗಳು ತಮ್ಮ ಸ್ಥಾನದ ಘನತೆಯನ್ನು ಮರೆತು ತಮ್ಮ ಸಂಘೀ ಸಿದ್ಧಾಂತದ ವಕ್ತಾರರಾಗಿ ಮಹಿಳೆಯರು ರಾತ್ರಿ ಮನೆಯಿಂದ ಹೊರಗೆ ಹೋಗಬಾರದು, ಯುವತಿ 7.30ಯ ನಂತರ ಅಲ್ಲಿಗೆ ಹೋಗಬಾರದಿತ್ತು ಎಂದಿದ್ದಾರೆ. ಅಲ್ಲದೇ ಮಹಿಳಾ ಆಯೋಗದ ಮಾಜಿ ಅಧ್ಯಕ್ಷರು ಕೂಡಾ ಆಕೆಯೊಬ್ಬಳು ಎಂ.ಬಿ.ಎ ವಿದ್ಯಾರ್ಥಿನಿ, ನನಗೆ ಅಸಹ್ಯವಾಗುತ್ತದೆ, ಅಷ್ಟೊತ್ತಿನಲ್ಲಿ ಅವಳ್ಯಾಕೆ ಅಲ್ಲಿಗೆ ಹೋಗಿದ್ದಳು ಎಂದು ಗಾಬರಿ ಹುಟ್ಟಿಸುವ ಮಾತಾಡಿದ್ದಾರೆ. ಇದು ಈ ಸಮಾಜದೊಳಗಿನ ಯೋಚನಾ ಲಹರಿ. ಇವರಿಂದ ನ್ಯಾಯ ನಿರೀಕ್ಷೆ ಮಾಡಲು ಸಾಧ್ಯವೇ ಅಥವಾ ಇವರಿಗೆ ಸಂವಿಧಾನದತ್ತ ಸಮಾನ ಮತ್ತು ಘನತೆಯ ಬದುಕಿನ ಅರ್ಥಗೊತ್ತಿರಲು ಸಾಧ್ಯವೇ? ಎಂಬ ಪ್ರಶ್ನೆ ನನಗಂತೂ ಕಾಡುತ್ತಿದೆ.

ರಾಜ್ಯದ ವಿವಿಧ ಮಹಿಳಾ ಸಂಘಟನೆಗಳ ನಿಯೋಗ ನಗರದ ಪೋಲೀಸ್ ಕಮಿಷನರ್ ರವರನ್ನು ಭೇಟಿ ಮಾಡಿದೆ. ಯಥಾ ಪ್ರಕಾರ ಅಧಿಕಾರಿಯವರು ಸೌಜನ್ಯಯುತವಾಗಿ ನಿಷ್ಪಕ್ಷಪಾತ ತನಿಖೆ ನಡೆಸುವ ಭರವಸೆ ನೀಡಿದ್ದಾರೆ!, ಆದರೆ. . . . ಅವರಿಗೆ ಮರೆತಿರಬಹದಾದ ಆದರೆ ಇನ್ನೂ ಕಡತದಿಂದ ಹೊರಬಾರದಿರುವ ಅದೆಷ್ಟೋ ಪ್ರಕರಣಗಳಿವೆ. ಅದರಲ್ಲಿ ಅವರದೇ ನಗರದ ಇತ್ತೀಚಿನ ವರ್ಷ ಎಂದರೆ 2019ರ ಮೇ ತಿಂಗಳಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ಘಟನೆಯನ್ನು ನೆನಪಿಸಿದರೆ ಅದಿನ್ನೂ ತನಿಖೆಯಲ್ಲಿದೆ ಎಂಬ ಸಿದ್ಧ ಉತ್ತರ ದೊರೆಯಿತು ನಿಯೋಗಕ್ಕೆ. ಆ ಘಟನೆಯಲ್ಲಿ ಕೂಡಾ ಕೆಲಸದಿಂದ ರಾತ್ರಿ ಹಿಂತಿರುಗುತ್ತಿದ್ದ ಮಹಿಳೆ ಮತ್ತು ಆಕೆಯ ಸ್ನೇಹಿತರ ಬೈಕ್ ಅಡ್ಡಗಟ್ಟಿ ಪಾನಮತ್ತ 8 ಜನರ ಗುಂಪುದಾಳಿ ಮಾಡಿತ್ತು ಮತ್ತು ಸಾಮೂಹಿಕ ಅತ್ಯಾಚಾರ ಮಾಡಿತ್ತು. ದೂರು ದಾಖಲಿಸಿಕೊಂಡ ಮೇಲೆ ನ್ಯಾಯವ್ಯಾಪ್ತಿಯ ತಕರಾರು ಎರಡು ಪೋಲೀಸ್ ಠಾಣೆಗಳ ಮಧ್ಯೆ!!, ಆ ನಂತರ ಒಂದೆರಡು ದಿನಗಳ ಸುದ್ದಿ, ಇಬ್ಬರೋ ಮೂವರೋ ಆರು ಜನರದೋ ಬಂಧನವಾಗಿದೆ. ಮುಂದೇನಾಯಿತು?????? ಪ್ರಶ್ನಾರ್ಥಕ ಚಿಹ್ನೆಯಲ್ಲದೇ ಉತ್ತರವಿಲ್ಲ. ಹಾಗಾಗಿಯೇ ಪೋಲಿಸ್ ವರಿಷ್ಠಾಧಿಕಾರಿಗಳು ಇನ್ನೂ ತನಿಖೆ ನಡೆಯುತ್ತಿದೆ ಎನ್ನುತ್ತಾರೆ. ಅಂದರೆ ನಿಗದಿತ ಅವಧಿಯೊಳಗೆ ತನಿಖೆ ನಡೆಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಬೇಕೆನ್ನುವ ನಿಯಮ ಇಲ್ಲಿ ಜಾರಿಗೊಳ್ಳುವುದೇ ಇಲ್ಲವೆಂದಾಯಿತು.

ಅದೇ ವೇಳೆಗೆ ಜಸ್ಟೀಸ್ ವರ್ಮಾ ಸಮಿತಿಯು ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ತ್ವರಿತ ನ್ಯಾಯಾಲಯಗಳ ಸ್ಥಾಪನೆಗೆ, ಮತ್ತು ಅದಕ್ಕೆ ಅಗತ್ಯವಾದ ಸಿಬ್ಬಂದಿಗಳ ನೇಮಕಕ್ಕೆ ಹಾಗೂ ಸಮಾಜದ ಎಲ್ಲ ಸ್ಥರಗಳಲ್ಲಿ ಸಂವೇದನಾಶೀಲತೆಯನ್ನು ಬೆಳೆಸಲು ಕೂಡಾ ಶಿಫಾರಸುಗಳನ್ನು ಮಾಡಿತ್ತು. ಅಧಿಕಾರದ ಖುರ್ಚಿಗಾಗಿನ ಹೊಡೆದಾಟದಲ್ಲಿ ಈ ಯಾವುದರ ಪರಿವೆಯೇ ಇಲ್ಲದೇ ಪಕ್ಷಗಳು ಕಿತ್ತಾಟ ನಡೆಸುತ್ತಿವೆ. ನ್ಯಾಯ ಸಾಯುತ್ತಿದೆ.


ಇಂಥಹ ಸ್ಥಿತಿಯನ್ನು ನೋಡಿಯೇ ಜಸ್ಟೀಸ್ ವರ್ಮಾ ತಮ್ಮ ವರದಿಯಲ್ಲಿ **ಆಡಳಿತ ವ್ಯವಸ್ಥೆಯ ವೈಫಲ್ಯವೇ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಮೂಲ ಕಾರಣ** ಎಂದು ಸ್ಪಷ್ಟವಾಗಿ ಬರೆದಿದ್ದಾರೆ.

ಈ ಪ್ರಕರಣದಲ್ಲಿ ಯುವತಿ ಪರ ಊರಿನವಳು. ಇಲ್ಲಿ ಓದುತ್ತಿದ್ದವಳು. ಅವಳ ಕುಟುಂಬದ ಪರಿಸ್ಥಿತಿ ಏನಿದೆ ಎಂಬ ಮಾಹಿತಿಗಳಿಲ್ಲ. ಆಕೆಯಿಂದ ಈ ಕ್ಷಣದ ವರೆಗೆ ಯಾವುದೇ ಹೇಳಿಕೆ ಸಿಕ್ಕಿಲ್ಲ. ಈ ಘೋರಕೃತ್ಯ ಎಸಗಿರುವವರ ಕುರಿತು ಅಲ್ಲಲ್ಲಿ ಕೇಳಿಬರುವ ಸುದ್ದಿಗಳು ಅವರು ವಲಸಿಗ ಕೂಲಿ ಕಾರ್ಮಿಕರು ಎಂದು. ನಿಜವಿದ್ದರೆ ಅವರೂ ಶಿಕ್ಷಾರ್ಹರೆ, ಅಲ್ಲಿ ಯಾವ ವಿನಾಯಿತಿ ರಿಯಾಯಿತಿಗಳ ಮಾತಿಲ್ಲ. ಆದರೆ, ನಿಜವಾದ ತನಿಖೆ ನಡೆದು ಸತ್ಯವೇ ಹೊರಬೀಳುವಂತೆ ಆಗದಿದ್ದರೆ. ಯಾರೂ ಆರೋಪಿಗಳಾಗಿ ಬಿಡಬಹುದು. ಹೈದ್ರಾಬಾದಿನಲ್ಲಿ ಆದಂತೆ ಇಲ್ಲೂ ಆಗಬಹುದು. ಆ ಪ್ರಕರಣದಲ್ಲಿ ಯುವತಿಯನ್ನು ಅತ್ಯಾಚಾರ ಮಾಡಿ ಸುಟ್ಟು ಹಾಕಿದ ಘಟನೆ ಮತ್ತು ಆರೋಪಿಗಳೆಂದು ಬಂಧಿಸಲ್ಪಟ್ಟವರು ಕೈಕೋಳ ಹಾಕಿಸಿಕೊಂಡು ಬಿಗಿ ಪೋಲೀಸ್ ಪಹರೆಯಲ್ಲಿ ಸ್ಥಳ ಪರಿಶೀಲನೆಗೆ ಹೋಗುವಾಗ ಪೋಲೀಸರ ಮೇಲೆ ದಾಳಿ ಮಾಡಿದರಂತೆ. ಆದ್ದರಿಂದ ಸಶಸ್ತ್ರ ಪೋಲೀಸ್ ಪಡೆ ಅವರನ್ನು ಎನ್ ಕೌಂಟರ್ ಮಾಡಿ ಸಾಯಿಸಿಬಿಟ್ಟಿತು. ಇದು ಹೇಗೆ ಸಾಧ್ಯ? ಎಂಬ ಶಾಶ್ವತ ಗುಮಾನಿಯನ್ನು ಉಳಿಸಿಬಿಡಬಹುದಾದ ಸಾಧ್ಯತೆಗಳೂ ಇವೆಯಲ್ಲವೇ?

ಅತ್ಯಾಚಾರದಂಥಹ ಆರೋಪಿಗಳ ಸಂದರ್ಭದಲ್ಲಿ ಕೂಡಾ ವರ್ಗ, ಜಾತಿ ಧರ್ಮಗಳು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಆರೋಪಿ 'ಘನತೆವೆತ್ತ' ಸ್ಥಾನದಲ್ಲಿದ್ದರೆ, ಮಠಾಧಿಪತಿಯಾಗಿದ್ದರೆ, ಸಚಿವ ಶಾಸಕ ಸಂಸದ ಮುಂತಾದ 'ಪ್ರತಿಷ್ಠಿತ' ಸ್ಥಾನದಲ್ಲಿದ್ದರೆ ಆಗ ನ್ಯಾಯದ ಘಂಟೆ ಒಮ್ಮೊಮ್ಮೆ ಕ್ಷೀಣವಾಗಿ ಬಡಿದುಕೊಳ್ಳಬಹುದೇನೋ, ಇನ್ನು ದೌರ್ಜನ್ಯ ನಡೆದಿದ್ದು ಯಾರ ಮೇಲೆ ಎಂಬುದೂ ಕೂಡಾ ಅಷ್ಟೇ ಮುಖ್ಯವಾಗುತ್ತದೆ. ಹಾಗಾಗಿ ಇಲ್ಲಿಯೂ ವರ್ಗ ಹಿತಾಸಕ್ತಿಯ ಸಂದರ್ಭಗಳು ಬಹಳ ಗಾಢವಾಗಿ ನೆಲೆಯೂರಿದೆ ಎಂಬುದನ್ನೂ ಗಮನಿಸಲೇಬೇಕು.

2013 ರಲ್ಲಿ ಬಂದ ಜಸ್ಟೀಸ್ ವರ್ಮಾ ಸಮಿತಿಯ ಶಿಫಾರಸಿನಂತೆ 2018ರಲ್ಲಿ ಕರ್ನಾಟಕ ರಾಜ್ಯದಲ್ಲಿ 'ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ಸಮಿತಿ' ಉಗ್ರಪ್ಪ ನೇತೃತ್ವದಲ್ಲಿ 2018 ರ ಮಾರ್ಚಿ 23 ರಂದು ಅಂದಿನ ಸರ್ಕಾರಕ್ಕೆ ಕರ್ನಾಟಕದಲ್ಲಿ ನಿಶ್ಚಯವಾಗಿಯೂ ದೌರ್ಜನ್ಯಗಳನ್ನು ನಿಯಂತ್ರಿಸಲು ಅಗತ್ಯವಾದ 135 ಪ್ರಮುಖ ಅಂಶಗಳನ್ನೊಳಗೊಂಡ ವರದಿಯನ್ನು ಸಲ್ಲಿಸಿದೆ. ಅಂದಿನಿಂದ ಇಂದಿನವರೆಗೆ ಆ ವರದಿ ಧೂಳು ತಿನ್ನುತ್ತ ವಿಧಾನಸೌಧದ ಯಾವ ಮೂಲೆಯಲ್ಲಿ ಬಿದ್ದಿದೆಯೋ. . ಯಾರಿಗೂ ತಿಳಿದಿಲ್ಲ.

ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ನಿಯಂತ್ರಿಸುವುದು ಕೇವಲ ಬಾಹ್ಯೋಪಚಾರದ ಘೋಷಣೆಗಳಿಂದ ಸಾಧ್ಯವಿಲ್ಲ. ಅದಕ್ಕೊಂದು ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ. ಅದೇ ಒಂದು ದೊಡ್ಡ ಕೊರತೆಯಾಗಿರುವ ಈ ದೇಶದಲ್ಲಿ ಅದರ ವಿರುದ್ಧ ಪ್ರತಿರೋಧದ ದೊಡ್ಡ ಕೂಗಿನ ಬದಲು ಕ್ಷೀಣ ಪ್ರತಿಕ್ರಿಯೆ ಬರಲಾರಂಭಿಸಿರುವುದು ಒಳ್ಳೆಯ ಸೂಚನೆಯಲ್ಲ. ಸಿಡಿಯದೇ ಒಡೆಯಲಾರದು, ಒಡೆಯದಿದ್ದರೆ ಕಟ್ಟಲೂ ಆಗದು. ■





ಕಾನ್ಪುರ



ಅಜ್ಮೇರ್



ಇಂದೋರ್

ಭಾರತದಲ್ಲಿ ತಾಲಿಬಾನಿಗಳ ಪ್ರತಿಬಿಂಬಗಳು

ಮುಸ್ಲಿಮರ ವಿರುದ್ಧ ದಿನನಿತ್ಯದ ಹಿಂಸಾಚಾರ ಒಂದು ಕಳವಳಕಾರೀ ನಮೂನೆಯನ್ನು ತೋರಿಸುತ್ತಿದೆ. ಆಗಸ್ಟ್ ತಿಂಗಳಲ್ಲಿ ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ರಾಜಸ್ತಾನದ ಕೆಲವು ನಗರಗಳಲ್ಲಿ, ಸಣ್ಣ ಪಟ್ಟಣಗಳ ಬೀದಿಗಳಲ್ಲಿ ಮುಸ್ಲಿಮರ ವಿರುದ್ಧ ಅಕಾರಣ ಹಿಂಸಾಚಾರದ ಕನಿಷ್ಟ ನಾಲ್ಕು ಪ್ರಕರಣಗಳು ದಾಖಲಾಗಿವೆ. ಇಂತಹ ದಾಳಿಗಳಿಗೆ ಗುರಿಯಾಗಿರುವವರು ಬಡ ಮುಸ್ಲಿಮರೇ, ಬೀದಿ ಮಾರಾಟಗಾರರು, ರಿಕ್ಷಾ ಚಾಲಕರು ಮುಂತಾದವರು, ಭಿಕ್ಷುಕರು ಕೂಡ.

ಇಂತಹ ಒಂದು ಘಟನೆಯಲ್ಲಿ, ರಾಜಸ್ತಾನದ ಸಿಕಾರ್ ಜಿಲ್ಲೆಯಲ್ಲಿ ಒಬ್ಬ 52 ವರ್ಷದ ಆಟೋ ರಿಕ್ಷಾ ಚಾಲಕನನ್ನು ಇಬ್ಬರು ಯುವಕರು ಕಾರಣವಿಲ್ಲದೆ ಕೆಟ್ಟದಾಗಿ ಥಳಿಸಿದರು. 'ಮೋದಿ ಜಿಂದಾಬಾದ್', 'ಜೈಶ್ರೀರಾಮ್' ಹೇಳಲು ಅವನು ನಿರಾಕರಿಸಿದಾಗ ಥಳಿಸಲಾರಂಭಿಸಿದರು. ಆತ ಪಾಕಿಸ್ತಾನಕ್ಕೆ ಹೋಗುವ ವರೆಗೆ ಥಳಿಸುವುದನ್ನು ನಿಲ್ಲಿಸುವುದಿಲ್ಲ ಎಂದು ಅವರು ಬೆದರಿಸಿದರು. ಮುರಿದ ಹಲ್ಲು, ವಿಪರೀತ ಗಾಯಗಳಿಂದಾಗಿ ಆತನನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು.

ಕಾನ್ಪುರದಲ್ಲಿ ಆಗಸ್ಟ್ 2ನೇ ವಾರದಲ್ಲಿ, ಒಂದು ಗುಂಪು ಒಬ್ಬ ಮುಸ್ಲಿಂ ಇ-ರಿಕ್ಷಾ ಚಾಲಕನ್ನು ಥಳಿಸಲಾರಂಭಿಸಿದರು, ಆತ 'ಜೈಶ್ರೀರಾಮ್' ಎನ್ನುವಂತೆ ಬಲವಂತ ಮಾಡಿದರು. ತನ್ನ ತಂದೆಯನ್ನು ಬಿಟ್ಟು ಬಿಡಿ ಎಂದು ಆತನ ಮಗಳು ಅಳುತ್ತಾ ಕೈಮುಗಿದು ಬೇಡಿಕೊಳ್ಳುತ್ತಿದ್ದರೂ ಲೆಕ್ಕಿಸದೆ ಆತನನ್ನು ಬೀದಿಯಲ್ಲಿ ಎಳಕೊಂಡು ಹೋದರು.



ಇಂದೋರಿನಲ್ಲಿ, ಆಗಸ್ಟ್ 3ನೇ ವಾರದಲ್ಲಿ, ಒಬ್ಬ ಮುಸ್ಲಿಂ ಬಳೆ ಮಾರಾಟಗಾರ ತಸ್ಲಿಮ್ ಅಲಿ ಎಂಬಾತನ ಮೇಲೆ ಎರಗಿ ಹಲ್ಲೆ ಮಾಡಲಾಯಿತು. ರಕ್ಷಾಬಂಧನ್ ದಿನ ಹಿಂದು ಪ್ರದೇಶದಲ್ಲಿ ಬಳೆ ಮಾರುತ್ತಿದ್ದುದೇ ಆತನ ಅಪರಾಧವಾಗಿತ್ತು. ಸ್ಥಳೀಯ ಪೋಲಿಸ್ ಠಾಣೆಯ ಎದುರು ಮುಸ್ಲಿಂ ಸಮುದಾಯಕ್ಕೆ ಸೇರಿದವರ ಪ್ರತಿಭಟನೆಯ ನಂತರ ಈ ಘಟನೆಯ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಯಿತು. ಆದರೆ ಅದಾದ ಕೂಡಲೇ, ಒಂದು ನಂತರದ ಯೋಚನೆಯಾಗಿ, ಒಂದು ಹದಿಹರೆಯದ ಹುಡುಗಿ ತನಗೆ ಆತ ಕಿರುಕುಳ ಕೊಟ್ಟಿದ್ದಾನೆ ಎಂದು ಕೊಟ್ಟ ದೂರಿನ ಮೇಲೆ, ಆ ಬಳೆಗಾರನನ್ನು ಪೋಸ್ಕೋದ ಅಡಿಯಲ್ಲಿ ಬಂಧಿಸಲಾಯಿತು. ಅಲಿ ತಾನು ಹಿಂದು ಎಂದು ಸುಳ್ಳು ಹೇಳಿದ್ದಾನೆ, ಹುಡುಗಿಗೆ ಕಿರುಕುಳ ಕೊಟ್ಟಿದ್ದಾನೆ ಎಂದು ರಾಜ್ಯದ ಗೃಹಮಂತ್ರಿಗಳು ಹೇಳಿದ್ದಾರೆ.

ಕೊನೆಯ ಘಟನೆ ನಡೆದಿರುವುದು ಅಜ್ಮೇರಿನಲ್ಲಿ. ತನ್ನ ಇಬ್ಬರು ಮಕ್ಕಳೊಂದಿಗೆ ಭಿಕ್ಷೆಗೆ ಕುಳಿತಿದ್ದ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ ಆತನನ್ನು ಪಾಕಿಸ್ತಾನಕ್ಕೆ ಹೋಗುವಂತೆ ಹೇಳಲಾಯಿತು. ಕರುಣೆ ತೋರಿ ಎಂದು ಬೇಡಿಕೊಂಡರೂ ಕೇಳದೆ ಅವನ ಮಗನ ತಲೆಗೆ ಒದ್ದರು.

ಪ್ರತಿಯೊಂದು ಘಟನೆಯ ನಂತರವೂ ಪೋಲೀಸರು ಕೆಲವು ಅಪರಾಧಿಗಳನ್ನು ಬಂಧಿಸಿದರೂ, ಕಾನ್ಪುರದಲ್ಲಿ ಆದಂತೆ, ಅವರನ್ನು ಬಿಡುಗಡೆ ಮಾಡುವಂತೆ ಹಿಂದುತ್ವ ಪಡೆಗಳು ಅವರನ್ನು ಬಂಧಿಸಿದ ಪೋಲೀಸ್ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಸಿಕಾರ್‌ನಲ್ಲಿ ಬಂಧನದ ನಂತರ ಪ್ರತಿಭಟನೆಗಳಿಂದಾಗಿ ಅವರ ಮೇಲೆ ಹಗುರವಾದ ಆರೋಪಗಳನ್ನು ಹಾಕಿ ಜಾಮೀನಿನಲ್ಲಿ ತಕ್ಷಣವೇ ಬಿಡುಗಡೆ ಮಾಡಲಾಯಿತು. ತಾವು ಏನೇ ಮಾಡಿದರೂ ಕಾನೂನುಪಾಲಕರಿಂದ ತಪ್ಪಿಸಿಕೊಳ್ಳಬಹುದು, ಇಲ್ಲವೇ ಅವರು ಅವನ್ನು ಹಗುರವಾಗಿ ಕಾಣುವಂತೆ ಮಾಡಬಹುದು ಎಂದು ಇಂತಹ ಜನಜಂಗುಳಿಗಳಿಗೆ ಹೆಚ್ಚೆಚ್ಚು ಧೈರ್ಯ ಬರುವಂತಾಗುತ್ತಿದೆ.

ಈ ಎಲ್ಲ ಹಲ್ಲೆಗಳಲ್ಲಿ ವೀಡಿಯೋ ಮಾಡಿ ಅವನ್ನು ಪಸರಿಸಲಾಗಿದೆ.

ಅಮಾನವೀಯ!– ಕ್ರೂರ ಜನಗಳು!
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಅಫಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರ ವಹಿಸಿ ಕೊಂಡಿರುವುದನ್ನು ಬಿಜೆಪಿ ಮತ್ತು ಅದರ ಹಿಂದುತ್ವ ಪಡೆಗಳು ಮುಸ್ಲಿಮರ ವಿರುದ್ಧ ಭಾವನೆಗಳನ್ನು ಬಡಿದೆಬ್ಬಿಸಲು ಮತ್ತು ಇಸ್ಲಾಮ್-ಭೀತಿಯ ಕಾಯಿಲೆಯನ್ನು ಹರಡಿಸಲು ಒಂದು ಸುವರ್ಣಾವಕಾಶವಾಗಿ ಬಳಸಿಕೊಳ್ಳುತ್ತಿದ್ದಾರೆ. ಆದಿತ್ಯನಾಥರಂತವರು ಇದೇ ನೆಪದಲ್ಲಿ ಭಾರತದಲ್ಲಿ ತಾಲಿಬಾನ್‌ವಾದ ಹರಡುತ್ತಿದೆ ಎಂಬ ಕೂಗು ಎಬ್ಬಿಸುತ್ತಿದ್ದಾರೆ. ಈ ಮಂದಿ ಕನ್ನಡಿಯಲ್ಲಿ ತಮ್ಮ ಮುಖಗಳನ್ನು ನೋಡಿಕೊಂಡರೆ ಅವರಿಗೆ ತಾಲಿಬಾನಿನ ಪ್ರತಿಬಿಂಬವೇ ಕಾಣಬಹುದು.

ಈ ಹಿಂಸಾಚಾರದ ಕೃತ್ಯಗಳ ಪ್ರಚಾರ ಮತ್ತು ಹಲ್ಲೆಕೋರರ 'ಪರಾಕ್ರಮ'ಗಳನ್ನು ಭವ್ಯೀಕರಿಸುವುದು ಇದರ ಉದ್ದೇಶವಾಗಿರುವಂತೆ ಕಾಣುತ್ತದೆ.

ತಮ್ಮ ಹೊಟ್ಟೆ ಹೊರೆಯುವ ಕೆಲಸದಲ್ಲಿ ತೊಡಗಿರುವ ಬಡ ಮುಸ್ಲಿಮರ ಮೇಲೆ ಗುರಿಯಿಟ್ಟಿರುವ ಇಂತಹ ನಿಷ್ಕಾರಣ ಹಿಂಸಾಚಾರಗಳು, ಅತ್ತ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಸರಕಾರ ನಡೆಸುತ್ತಿರುವ ಮುಖಂಡರು ಹಿಂದುತ್ವ ಅಜೆಂಡಾವನ್ನು ಜಾರಿಗೊಳಿಸುವಲ್ಲಿ ಹೆಚ್ಚೆಚ್ಚು ಆಕ್ರಮಣಶೀಲರಾಗುತ್ತಿದ್ದಂತೆ, ನೆಲ ಮಟ್ಟದಲ್ಲಿ ಹಿಂದುತ್ವ ಸಂಘಟನೆಗಳ ಚಟುವಟಿಕೆಗಳ ಫ್ಯಾಸಿಸ್ಟ್ ತೆರನ ಕಾಯಿಲೆಯ ಲಕ್ಷಣಗಳು.

ಅಫಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರ ವಹಿಸಿಕೊಂಡಿರುವುದನ್ನು ಬಿಜೆಪಿ ಮತ್ತು ಅದರ ಹಿಂದುತ್ವ ಪಡೆಗಳು ಮುಸ್ಲಿಮರ ವಿರುದ್ಧ ಭಾವನೆಗಳನ್ನು ಬಡಿದೆಬ್ಬಿಸಲು ಮತ್ತು ಇಸ್ಲಾಮ್–ಭೀತಿಯ ಕಾಯಿಲೆಯನ್ನು ಹರಡಿಸಲು ಒಂದು ಸುವರ್ಣಾವಕಾಶವಾಗಿ ಬಳಸಿಕೊಳ್ಳುತ್ತಿದ್ದಾರೆ. ಅಲ್ಲಿ-ಇಲ್ಲಿ ಕೇಳಬರುತ್ತಿರುವ ಕೆಲವೇ ಮೂಲಭೂತವಾದಿ ಮೌಲ್ವಿಗಳ ದನಿಗಳು ಆದಿತ್ಯನಾಥರಂತವರಿಗೆ ಭಾರತದಲ್ಲಿ ತಾಲಿಬಾನ್‌ವಾದ ಹರಡುತ್ತಿದೆ ಎಂಬ ಕೂಗು ಎಬ್ಬಿಸಲು ನೆಪಗಳಾಗುತ್ತಿವೆ.

ಈ ಹಿಂದುತ್ವ ಕಟ್ಟಾಭಿಮಾನಿಗಳು ಕನ್ನಡಿಯಲ್ಲಿ ತಮ್ಮ ಮುಖಗಳನ್ನು ನೋಡಿಕೊಂಡರೆ ಅವರಿಗೆ ತಾಲಿಬಾನಿನ ಪ್ರತಿಬಿಂಬವೇ ಕಾಣಬಹುದು.

(ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ)

ಪುಟ 2 ರಿಂದ

ರಾಷ್ಟ್ರದ ಸೊತ್ತುಗಳ ಲೂಟಿಯ ದುಷ್ಟ ತಂತ್ರ–ಸಿಐಟಿಯು ಖಂಡನೆ


ಬಂಟರಿಗೆ ವಹಿಸಿಕೊಡಲಾಗುತ್ತದೆ:

26,700 ಕಿ.ಮೀ. ಹೆದ್ದಾರಿಗಳು:	ರೂ.1.6 ಲಕ್ಷ ಕೋಟಿ
400 ರೈಲ್ವೆ ನಿಲ್ದಾಣಗಳು ಮತ್ತು 150 ರೈಲುಗಳು	1.5ಲಕ್ಷ ಕೋಟಿ
42,300 ಸರ್ಕಿಟ್ ಕಿ.ಮೀ. ವಿದ್ಯುತ್ ಪ್ರಸರಣ ಲೈನ್‌ಗಳು	0.67ಲಕ್ಷ ಕೋಟಿ
5000 ಮೆ.ವಾ. ಜಲ, ಸೌರ ಮತ್ತು ಪವನ ವಿದ್ಯುತ್ ಉತ್ಪಾದನಾ ಪರಿಕರಗಳು	0.32ಲಕ್ಷ ಕೋಟಿ
8000 ಕಿ.ಮೀ.ರಾಷ್ಟ್ರೀಯ ಅನಿಲ ಪೈಪ್ ಲೈನ್‌ಗಳು	0.24ಲಕ್ಷ ಕೋಟಿ
4000 ಕಿ.ಮೀ. ಐಒಸಿ, ಹೆಚ್‌ಪಿಸಿಎಲ್. ಪೈಪ್‌ಲೈನ್‌ಗಳು	0.22ಲಕ್ಷ ಕೋಟಿ
ಬಿಎಸ್‌ಎನ್‌ಎಲ್, ಎಂಟಿಎನ್‌ಎಲ್‌ಟವರ್‌ಗಳು	0.39ಲಕ್ಷ ಕೋಟಿ
21 ವಿಮಾನ ನಿಲ್ದಾಣಗಳು ಮತ್ತು 31 ಬಂದರುಗಳು	0.34ಲಕ್ಷ ಕೋಟಿ
160 ಕಲ್ಲಿದ್ದಲು ಗಣಿಗಾರಿಕೆ ಯೋಜನೆಗಳು	0.32ಲಕ್ಷ ಕೋಟಿ
2 ಕ್ರೀಡಾಂಗಣಗಳು	0.11ಲಕ್ಷ ಕೋಟಿ

ಲಕ್ಷಾಂತರ ಕೋಟಿ ರೂ.ಗಳ ಈ ರಾಷ್ಟ್ರೀಯ ಸೊತ್ತುಗಳ ಮೌಲ್ಯ 6ಲಕ್ಷ ಕೋಟಿ ರೂ. ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಇದು ಖಾಸಗಿ ಕಾರ್ಪೊರೇಟ್‌ಗಳು ಈ ಮಹತ್ವದ ಮೂಲರಚನೆ ಸೊತ್ತುಗಳನ್ನು ಅತ್ಯಂತ ಅಗ್ಗದಲ್ಲಿ ವಹಿಸಿಕೊಳ್ಳಲೆಂದು ಬೇಕೆಂದೇ ಅಂಡರ್ ವ್ಯಾಲ್ಯುವೇಷನ್(ಕಡಿಮೆ ಮೌಲ್ಯಮಾಪನ) ಮಾಡಿರುವ ಅಂಕಿ-ಅಂಶಗಳು ಎಂದು ಸಿಐಟಿಯು ಹೇಳಿದೆ.

ಮೂಲರಚನೆಗಳ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡುವ ಬದಲು, ಈ ದೊಡ್ಡ 'ಕಾರ್ಪೊರೇಟ್'ಗಳು ಎನ್‌ಎಂಪಿ ಮೂಲಕ ಪಡೆಯಲಿರುವ ರಾಷ್ಟ್ರೀಯ ಮೂಲರಚನಾ ಸೊತ್ತುಗಳನ್ನು ಸಂಪೂರ್ಣವಾಗಿ ಹೀರಿಕೊಳ್ಳುವ ಮೂಲಕ ಅಪಾರ ಸಂಪತ್ತನ್ನು ಸೂರೆ ಮಾಡಲು ದಾರಿ ಪಡೆದುಕೊಂಡಿವೆ. ಹಿಂದಿನ ಅನುಭವಗಳು ತೋರಿಸುವಂತೆ, ಆರಂಭಿಕ ಪ್ರಕಟಣೆಯ ನಂತರ, ಹರಾಜು ಕೂಗುವವರನ್ನು ಸೆಳೆಯಲು ಇನ್ನಷ್ಟು ರಿಯಾಯ್ತಿಗಳು ಬರಲಿವೆ.

ಕೇಂದ್ರದಲ್ಲಿನ ಬಿಜೆಪಿ ಸರಕಾರದ ಇಂತಹ ರಾಷ್ಟ್ರ-ವಿರೋಧಿ ತಂತ್ರದ ವಿರುದ್ಧ ಖಂಡನೆಯನ್ನು ಒಟ್ಟಾಗಿ ವ್ಯಕ್ತಪಡಿಸಬೇಕು ಎಂದು ಕಾರ್ಮಿಕರಿಗೆ ಮತ್ತು ಜನತೆಗೆ ಸಿಐಟಿಯು ಕರೆ ನೀಡಿದೆ. ದೇಶೀ-ವಿದೇಶೀ ಗುತ್ತೇದಾರಿಗಳು ಅವರ ಮುಂದೆ ತಲೆಬಾಗಿಸುವ ಕೇಂದ್ರದಲ್ಲಿನ ಸರಕಾರದ ನೆರವಿನಿಂದ ಮಾಡಲಿರುವ ನಮ್ಮ ರಾಷ್ಟ್ರೀಯ ಸೊತ್ತುಗಳ ದರೋಡೆಯಿಂದ ಅವನ್ನು ಕಾಪಾಡಿಕೊಳ್ಳಲು ದೃಢ ಹೋರಾಟ ನಡೆಸಬೇಕು ಎಂದು ಅದು ಹೇಳಿದೆ.



ಈ ಮಾರಾಟವನ್ನು ತಡೆಯಬೇಕು

ಇದು ಯೋಜನೆಯ ಹೆಸರಿನಲ್ಲಿ ಒಂದು ಹಗರಣ

ಹೊಸ ಮೂಲಸೌಕರ್ಯ ಪರಿಯೋಜನೆಗಳಲ್ಲಿ ಹೂಡಿಕೆಗಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸಲಿಕ್ಕೆಂದು ಸರಕಾರ ಸಮರ್ಥಿಸಿಕೊಳ್ಳುವ ಈ ನಾಣ್ಯೀಕರಣ ಪ್ರಕ್ರಿಯೆಯು, ದೊಡ್ಡ ಉದ್ಯಮಪತಿಗಳ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ, ಅವರು ಗ್ರಾಹಕರಿಂದ ಅಥವಾ ಸರ್ಕಾರದ ಬೊಕ್ಕಸದಿಂದ ಭಾರಿ ಪ್ರತಿಫಲಗಳನ್ನು ಗಳಿಸಿಕೊಳ್ಳುವ ಒಂದು ಪರಿಯೋಜನೆಯಲ್ಲದೆ ಬೇರೇನೂ ಅಲ್ಲ. ಸಂಪತ್ತಿನ ಪಿರಮಿಡ್‌ನ ಶಿಖರದಲ್ಲಿರುವವರಿಗೆ ಆದಾಯ ಮತ್ತು ಸಂಪತ್ತನ್ನು ವರ್ಗಾಯಿಸುವಂತೆ ಮಾಡುವ ಇದು ಯೋಜನೆ ಎಂದು ಪ್ರದರ್ಶಿಸುವ ಒಂದು ಹಗರಣ



*** ಪ್ರಕಾಶ್ ಕಾರಟ್**

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ 'ಕುತ್ತು ತಪ್ಪಿಸಿದ ಆಸ್ತಿಗಳ ನಾಣ್ಯೀಕರಣ' ಎಂಬ ಪಾರಿಭಾಷಿಕ ಮಾತುಗಳ ವೇಷ ತೊಡಿಸಿ ಭಾರತದ ಸಾರ್ವಜನಿಕ ವಲಯವನ್ನು ಮಾರಾಟ ಮಾಡುವ ತನ್ನ ಯೋಜನೆಯನ್ನು ಪ್ರಕಟಿಸಿದೆ. ರಸ್ತೆಗಳು, ಬಂದರುಗಳು, ವಿಮಾನ ನಿಲ್ದಾಣಗಳು, ರೈಲ್ವೆ ಹಳಿಗಳು ಹಾಗೂ ಸ್ಟೇಷನ್‌ಗಳಿಂದ ಹಿಡಿದು ಇಂಧನ ಪೈಪ್‌ಲೈನ್, ದೂರಸಂಪರ್ಕ ಟವರ್, ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಹಾಕುವಿಕೆ, ಗೋದಾಮುಗಳು ಮತ್ತು ಕ್ರೀಡಾಂಗಳ ವರೆಗೆ ದೇಶದ ಎಲ್ಲ ಬಗೆಯ ಆಸ್ತಿಗಳನ್ನು ದೊಡ್ಡ ದೊಡ್ಡ ಖಾಸಗಿ ಹೂಡಿಕೆದಾರರಿಗೆ ಹಸ್ತಾಂತರಿಸುವ ಯೋಜನೆ ಇದು. ಇದಕ್ಕೆ ಪ್ರತಿಯಾಗಿ, 2025ಕ್ಕೆ ಅಂತ್ಯವಾಗುವ ಹಣಕಾಸು ವರ್ಷದವರೆಗೆ ನಾಲ್ಕು ವರ್ಷಗಳ ಅವಧಿಯಲ್ಲಿ ಸುಮಾರು ಆರು ಲಕ್ಷ ಕೋಟಿ ರೂಪಾಯಿ ಹಣವನ್ನು ಮುಂಗಡವಾಗಿ ಅಥವ ಕಂತುಗಳಲ್ಲಿ ಸರ್ಕಾರ ಪಡೆಯಲಿದೆ. ಆ ಹಣವನ್ನು ಹೊಸ ಮೂಲಸೌಕರ್ಯಗಳನ್ನು ಸೃಷ್ಟಿಸಲು ಬಳಸಲಾಗುವುದೆಂದು ಸರ್ಕಾರ ಆಶ್ವಾಸನೆ ನೀಡಿದೆ.

ಇದು ಖಾಸಗೀಕರಣ ಅಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಾದಿಸುತ್ತಾರೆ. ಮೂಲಸೌಕರ್ಯ ಕ್ಷೇತ್ರದಲ್ಲಿ ಈಗ ಅಸ್ತಿತ್ವದಲ್ಲಿರುವ ಮತ್ತು ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಕ್ಷೇತ್ರದ ಮೂಲರಚನೆಗಳ ಯೋಜನೆಗಳ ವರಮಾನಗಳ ಹರಿವಿನ ಹಕ್ಕುಗಳನ್ನು ತಾತ್ಕಾಲಿಕವಾಗಿ ವರ್ಗಾಯಿಸುವುದಷ್ಟೇ ಈ ಯೋಜನೆಯ ಉದ್ದೇಶ. ಖಾಸಗಿ ವಲಯದವರಿಗೆ ನಿರ್ದಿಷ್ಟ ಅವಧಿಗೆ ಅದನ್ನು ವರ್ಗಾಯಿಸಲಾಗುತ್ತದೆ, ' ಮಾಲಿಕತ್ವ ಸರ್ಕಾರದ ಬಳಿಯೇ ಇರುತ್ತದೆ; ಆದರೆ ಬಳಕೆಯ ಹಕ್ಕುಗಳು ಮತ್ತು ವರಮಾನಗಳನ್ನು ಹೂಡಿಕೆದಾರರಿಗೆ ನಿರ್ದಿಷ್ಟ ಶುಲ್ಕಕ್ಕೆ ವಹಿಸಲಾಗುತ್ತದೆ ಎಂದವರು ಹೇಳುತ್ತಾರೆ.

ಇಲ್ಲಿ ನಾಲ್ಕು ವಿಚಾರಗಳನ್ನು ಬಹಳ ಅವರ ಅನುಕೂಲದಂತೆ ಬದಿಗೆ ಸರಿಸಲಾಗಿದೆ. ಮೊದಲನೆಯದಾಗಿ, ಸರ್ಕಾರದ ಕೈಗಳಲ್ಲಿರುವ 'ನಿಷ್ಕ್ರಿಯ ಆಸ್ತಿಗಳ ಮೌಲ್ಯದ ಬೀಗವನ್ನು ತೆಗೆಯುವುದು' ಸರ್ಕಾರದ ಯೋಜನೆಯಾದ್ದರಿಂದ, ಒಮ್ಮೆ ನಾಣ್ಯೀಕರಿಸಿದ ಆಸ್ತಿಗಳು ಸರ್ಕಾರಕ್ಕೆ ವಾಪಸಾದಾಗ ಅವುಗಳನ್ನು ಮತ್ತೆ ಮುಂದಿನ ಸುತ್ತುಗಳ ನಾಣ್ಯೀಕರಣಕ್ಕೆ ಮಾರುಕಟ್ಟೆಗೆ ಹಿಂದಿರುಗಿಸಲಾಗುತ್ತದೆ. ಸರ್ಕಾರ ತಾನೇ ಮಾಲಿಕ ಎಂದು ಭಾವಿಸಬಹುದು. ಆದರೆ ಅದು ಎಂದಿಗೂ ಈ ಆಸ್ತಿಗಳನ್ನು ನಿರ್ವಹಿಸುವುದಿಲ್ಲ ಮತ್ತು ಅವುಗಳು ಕೊಡುವ ಸೇವೆಗಳನ್ನು ಒದಗಿಸುವುದಿಲ್ಲ. ಅದು ಈ ಆಸ್ತಿಗಳ ಕಲ್ಪಿತ ಮೌಲ್ಯಗಳನ್ನು ನಗದಾಗಿ ಪಡೆಯುತ್ತದೆ ಅಷ್ಟೇ. ಈ ಹಿಂದಿನ ಅನುಭವದಿಂದ ಹೇಳುವುದಾದರೆ, ಈ ಮೌಲ್ಯವನ್ನು ಹೂಡಿಕೆದಾರರನ್ನು ಆಕರ್ಷಿಸುವುದಕ್ಕಾಗಿ ಕೆಳಮಟ್ಟದಲ್ಲೇ ಇಡಲಾಗುತ್ತದೆ. ನಿರೀಕ್ಷಿತ ಮುಂಗಡ ಪಾವತಿಯನ್ನು ಬಿಡ್ಡಿಂಗ್ ಆರಂಭಕ್ಕೂ ಮುಂಚೆಯೇ ಪ್ರಕಟಿಸಿರುವುದರಿಂದ ನಿಜವಾದ ಮಾರಾಟ ಬೆಲೆ ತುಂಬಾ ಹೆಚ್ಚಾಗಿರುವ ಸಂಭವವಿಲ್ಲ.

ಎರಡನೆಯದಾಗಿ, ಖಾಸಗಿ ವಲಯ ಮೂಲಸೌಕರ್ಯಗಳನ್ನು ತಾನು ಹೊಂದಿ, ನಿರ್ವಹಿಸುವ ಮತ್ತು ನಡೆಸುವ ಅವಧಿಯಲ್ಲಿ ಸೇವೆಗಳ ಮಾರಾಟದಿಂದ ಬರುವ ಆದಾಯಗಳು ತನ್ನ ಹೂಡಿಕೆಯನ್ನು ತುಂಬಿಕೊಂಡು, ಅದಕ್ಕೆ ಆಕರ್ಷಕ ಪ್ರತಿಫಲವೂ ಬರುವ ಬಗ್ಗೆ ಖಾತರಿ ಬಯಸುತ್ತದೆ. ಸರ್ಕಾರವೇ ಮಾಲಿಕನಾಗಿ ಉಳಿದರೂ, ಬೆಲೆ ವಾಣಿಜ್ಯ ದೃಷ್ಟಿಯಿಂದಲೇ ನಿಗದಿಯಾಗಬೇಕು ಹಾಗೂ ಬರುವ ಪ್ರತಿಫಲಗಳು ಆಕರ್ಷಕವಾಗಿರಬೇಕು. ಇದೊಂದು ಸಮಸ್ಯೆಯಾಗುವ ಸಂಭವವಿದೆ. ಒಂದು ಧನಾತ್ಮಕ ನಿವ್ವಳ ವರಮಾನಗಳ ಹರಿವು ಇರಬಹುದಾದ ಕ್ಷೇತ್ರಗಳಲ್ಲಿಯೂ ಅದು ಖಾಸಗಿ ವಲಯದ ನಿರೀಕ್ಷೆಗೆ ತಕ್ಕಷ್ಟಿರಲಾರದು. ಆಗ ಬಳಕೆದಾರರಿಂದ ಹೆಚ್ಚಿನ ಬಳಕೆ ಶುಲ್ಕಗಳ ವಸೂಲಿ ಬೇಕಾಗುತ್ತದೆ, ಇಲ್ಲವೇ ಆ ಅಂತರವನ್ನು ತುಂಬಲು ಸರಕಾರದಿಂದ ಮೊತ್ತದ ವರ್ಗಾವಣೆ ನಡೆಯಬೇಕಾಗುತ್ತದೆ. ವರಮಾನದ ಹರಿವು ಇಲ್ಲದಿರುವಲ್ಲಿ ಅಥವಾ ಸೀಮಿತವಾಗಿರುವಲ್ಲಿ ಸರ್ಕಾರದ ಇಂತಹ ವಂತಿಗೆಗಳು ಗಣನೀಯವಾಗಿ ಹೆಚ್ಚಿರಬೇಕಾಗುತ್ತದೆ. ಸರ್ಕಾರಕ್ಕೆ ಸಂಪನ್ಮೂಲ ಕ್ರೋಡೀಕರಿಸಲು ನೆರವಾಗಬೇಕಾದ ಒಂದು ಪ್ರಕ್ರಿಯೆಯೇ ದೊಡ್ಡ ಮೊತ್ತಗಳನ್ನು ಹೀರುವಂತಾಗಬಹುದು.

ಮೂರನೆಯದಾಗಿ, ಹೆಚ್ಚು ಲಾಭವನ್ನು ಖಾತರಿಪಡಿಸುವ ಸಲುವಾಗಿ ವೆಚ್ಚ ಕಡಿಮೆ ಮಾಡಲು ತನಗೆ ಸ್ವಾತಂತ್ರ್ಯವಿರಬೇಕೆಂದು ಖಾಸಗಿ ಕ್ಷೇತ್ರ ಒತ್ತಾಯಿಸುತ್ತದೆ. ವೇತನ ಕಡಿತ ಹಾಗೂ ರಿಟ್ರೆಂಚ್‌ಮೆಂಟ್ ಅಥವಾ ಇವೆರಡೂ ಸೇರಿದಂತೆ ಕಾರ್ಮಿಕ ವೆಚ್ಚದಲ್ಲಿ ಇಳಿಕೆ ಈ ವೆಚ್ಚ ಇಳಿಕೆಯ ಕ್ರಮದಲ್ಲಿ ಸೇರಿರುತ್ತದೆ. ಸಂಘಟಿತ ಕಾರ್ಮಿಕ ಮಾರುಕಟ್ಟೆಗೆ ಒಂದು ಮಾನದಂಡ ಸ್ಥಾಪಿಸಿದ್ದ ಸಾರ್ವಜನಿಕ ವಲಯದ ಪಾತ್ರವನ್ನು ಇದು ದುರ್ಬಲಗೊಳಿಸಬಹುದು.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್, ವಾರ್ತಾಭಾರತಿ

ಅಂತಿಮವಾಗಿ, ಆಸ್ತಿಗಳ ಖಾಸಗಿ ನಿರ್ವಾಹಕರು ಸ್ವೀಕಾರಾರ್ಹ ಗುಣಮಟ್ಟದ ಸೇವೆಯನ್ನು ಒದಗಿಸುವುದನ್ನು ಸರ್ಕಾರ ಹೇಗೆ ಖಾತರಿಪಡಿಸುತ್ತದೆ ಎನ್ನುವುದಕ್ಕೆ ಯಾವುದೇ ಸ್ಪಷ್ಟತೆಯಿಲ್ಲ. ಈ ಉದ್ದೇಶಕ್ಕಾಗಿ ಒಂದು ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವುದು ದುಬಾರಿ ಹಾಗೂ ಸಮಯ ತಿನ್ನುವ ಪ್ರಕ್ರಿಯೆಯಾಗಬಹುದು. ಇದರಿಂದಾಗಿ ಹೆಚ್ಚು ದುಬಾರಿ ಸೇವೆಗಳ ಗುಣಮಟ್ಟದಲ್ಲಿ ಕುಸಿತವಾಗುತ್ತದೆ ಹಾಗೂ ನಿರ್ಲಕ್ಷ್ಯವೂ ಉಂಟಾಗಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ಹೊಸ ಮೂಲಸೌಕರ್ಯ ಪರಿಯೋಜನೆಗಳಲ್ಲಿ ಹೂಡಿಕೆಗಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸಲಿಕ್ಕೆಂದು ಸರಕಾರ ಸಮರ್ಥಿಸಿಕೊಳ್ಳುವ ಈ ನಾಣ್ಯೀಕರಣ ಪ್ರಕ್ರಿಯೆಯು, ದೊಡ್ಡ ಉದ್ದಿಮೆದಾರರ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ, ಅವರು ಗ್ರಾಹಕರಿಂದ ಅಥವಾ ಸರ್ಕಾರದ ಬೊಕ್ಕಸದಿಂದ ಭಾರಿ ಪ್ರತಿಫಲಗಳನ್ನು ಗಳಿಸಿಕೊಳ್ಳುವ ಒಂದು ಪರಿಯೋಜನೆಯಲ್ಲದೆ ಬೇರೇನೂ ಅಲ್ಲ. ಸಂಪತ್ತಿನ ಪಿರಮಿಡ್‌ನ ಶಿಖರದಲ್ಲಿರುವವರಿಗೆ ಆದಾಯ ಮತ್ತು ಸಂಪತ್ತನ್ನು ವರ್ಗಾಯಿಸುವಂತೆ ಮಾಡುವ ಒಂದು ಯೋಜನೆ ಇದಾಗಿದೆ.

ಆಘಾತಕಾರೀ ಸಂಗತಿಯೆಂದರೆ, ಆಯ್ದ ಉದ್ಯಮಪತಿಗಳನ್ನು ಕೊಬ್ಬಿಸಲು ಸಾರ್ವಜನಿಕ ಸಂಪತ್ತನ್ನು ಅಡವಿಡುವ ಈ ಹಗರಣಕಾರೀ ಯೋಜನೆಯು ಹೊಸ ಆಸ್ತಿಗಳ ಸೃಷ್ಟಿಗೆ ಯಾವುದೇ ಗಮನಾರ್ಹ ಕೊಡುಗೆಗಳನ್ನು ನೀಡುವುದಿಲ್ಲ. ತಥಾಕಥಿತ 'ನ್ಯಾಷನಲ್ ಇನ್‌ಫ್ರಾಸ್ಟ್ರಕ್ಚರ್ ಪೈಪ್‌ಲೈನ್'(ರಾಷ್ಟ್ರೀಯ ಮೂಲಸೌಕರ್ಯ ಕ್ರಮ ಸರಣಿ)ನಲ್ಲಿ ಸೇರಿರುವ ಪ್ರಾಜೆಕ್ಟ್‌ಗಳಲ್ಲಿ ಐದು ವರ್ಷಗಳಲ್ಲಿ 111 ಲಕ್ಷ ಕೋಟಿ ರೂಪಾಯಿಗಳನ್ನು ಹೂಡಲಾಗುತ್ತದೆ ಎಂದು ಸರ್ಕಾರ ಕೊಚ್ಚಿಕೊಳ್ಳುತ್ತಿದೆ. ಈಗ ಪ್ರಕಟಿಸಿರುವ ಆಸ್ತಿ ನಾಣ್ಯೀಕರಣದಿಂದ ಬರುವಂಥ 6 ಲಕ್ಷ ಕೋಟಿ ರೂಪಾಯಿಯು 111 ಲಕ್ಷ ಕೋಟಿಯ ಕೇವಲ ಐದು ಶೇಕಡದಷ್ಟಾಗುತ್ತದೆ.

ಮೋದಿ ಸರ್ಕಾರ, ಮುಂಬರುವ ಐದು ವರ್ಷಗಳಲ್ಲಿ ಯೋಜಿತ ಮೂಲಸೌಕರ್ಯ ಹೂಡಿಕೆಗಳ ಕೇವಲ ಐದು ಶೇಕಡಾದಷ್ಟನ್ನು ಮಾತ್ರ ಪಡೆಯಲು, ಹಲವು ದಶಕಗಳಿಂದ ಸಾರ್ವಜನಿಕ ಹಣದಿಂದ ಸೃಷ್ಟಿಸಿದ ಸಂಪತ್ತನ್ನು ದೊಡ್ಡ ಉದ್ಯಮಪತಿಗಳಿಗೆ ಹಸ್ತಾಂತರಿಸುವುದನ್ನು ಸಮರ್ಥಿಸಿಕೊಳ್ಳುತ್ತಿದೆ. ಇದೊಂದು ಯೋಜನೆ ಎಂದು ಪ್ರದರ್ಶಿಸುವ ಹಗರಣವಲ್ಲದೆ ಇನ್ನೇನೂ ಅಲ್ಲ.


ಅನು: ವಿಶ್ವ




ವಿಮಾನ ಈಗಲೂ ನಮ್ಮದೇ, ಅವರು ಪೈಲಟ್‌ಗಳಷ್ಟೇ
ವ್ಯಂಗ್ಯಚಿತ್ರ: ಸುರೇಂದ್ರನ್

> ಸರ್ಕಾರ ತಾನೇ ಮಾಲಿಕ ಎಂದು ಭಾವಿಸಬಹುದು. ಆದರೆ ಅದು ಎಂದಿಗೂ ಈ ಆಸ್ತಿಗಳನ್ನು ನಿರ್ವಹಿಸುವುದಿಲ್ಲ ಮತ್ತು ಅವುಗಳು ಕೊಡುವ ಸೇವೆಗಳನ್ನು ಒದಗಿಸುವುದಿಲ್ಲ. ಅದು ಈ ಆಸ್ತಿಗಳ ಕಲ್ಪಿತ ಮೌಲ್ಯಗಳನ್ನು ನಗದಾಗಿ ಪಡೆಯುತ್ತದೆ ಅಷ್ಟೇ. ಈ ಹಿಂದಿನ ಅನುಭವದಿಂದ ಹೇಳುವುದಾದರೆ, ಈ ಮೌಲ್ಯವನ್ನು ಹೂಡಿಕೆದಾರರನ್ನು ಆಕರ್ಷಿಸುವುದಕ್ಕಾಗಿ ಕೆಳಮಟ್ಟದಲ್ಲೇ ಇಡಲಾಗುತ್ತದೆ.

> ಮೋದಿ ಸರ್ಕಾರ, ಮುಂಬರುವ ಐದು ವರ್ಷಗಳಲ್ಲಿ ಯೋಜಿತ ಮೂಲಸೌಕರ್ಯ ಹೂಡಿಕೆಗಳ ಕೇವಲ ಐದು ಶೇಕಡಾದಷ್ಟನ್ನು ಮಾತ್ರ ಪಡೆಯಲು, ಹಲವು ದಶಕಗಳಿಂದ ಸಾರ್ವಜನಿಕ ಹಣದಿಂದ ಸೃಷ್ಟಿಸಿದ ಸಂಪತ್ತನ್ನು ದೊಡ್ಡ ಉದ್ಯಮಪತಿಗಳಿಗೆ ಹಸ್ತಾಂತರಿಸುವುದನ್ನು ಸಮರ್ಥಿಸಿಕೊಳ್ಳುತ್ತಿದೆ.



ವ್ಯಂಗ್ಯಚಿತ್ರ ಕೃಪೆ:
ಮಂಜುಲ್, ಫಸ್ಟ್ ಪೋಸ್ಟ್







ಸ್ವಾತಂತ್ರ್ಯ–75 ಮತ್ತು ಸ್ವಾವಲಂಬನೆ



ಸ್ವಾತಂತ್ರ್ಯಾನಂತರದ ಕಳೆದ 74 ವರ್ಷಗಳಲ್ಲಿ ನಮ್ಮ ಗಣತಂತ್ರದ ಸಂಸ್ಥಾಪಕರ ಮತ್ತು ಸ್ವಾತಂತ್ರ್ಯ ಚಳುವಳಿಯ ಕನಸುಗಳಿಗೆ ಸಂಬಂಧಪಟ್ಟಂತೆ ಸಾಮೂಹಿಕ ಸಾಧನೆಗಳನ್ನು, ದೌರ್ಬಲ್ಯಗಳನ್ನು ಹಾಗೂ ವೈಫಲ್ಯಗಳನ್ನು ದೇಶ ಚರ್ಚೆ ಮಾಡುತ್ತಿದೆ. ಈ ಲೇಖನವು ದೇಶದ ಎರಡು ಸ್ಥಾಪನಾ ಆಶಯಗಳನ್ನು ಚರ್ಚೆ ಮಾಡಲು ಬಯಸುತ್ತದೆ; ಅದಕ್ಕೆ ಸಲ್ಲಬೇಕಾದ ಗಮನ ಯಾವಾಗಲೂ ಸಿಗುತ್ತಿಲ್ಲ ಅಥವಾ ಬಹಳ ಮಟ್ಟಿಗೆ ಕಾಟಾಚಾರದಂತೆ ಅದರ ಬಗ್ಗೆ ಹೇಳಲಾಗುತ್ತದೆ. ಆದರೆ, ವಿಶೇಷವಾಗಿ ಈಗ ನಾವಿರುವ ಈ ಜ್ಞಾನದ ಯುಗವೆಂದು ಕರೆಯಲಾಗುತ್ತಿರುವ 22ನೇ ಶತಮಾನದಲ್ಲಿ ಎರಡೂ ಆಶಯಗಳು ನಿರ್ಣಾಯಕವಾದವು ಮತ್ತು ಭಾರತದ ಭವಿಷ್ಯವನ್ನು ನಿರ್ಧರಿಸಬಹುದು ಕೂಡ. ಆದರೆ ಅದನ್ನು ನಾವು ಒಪ್ಪಿಕೊಳ್ಳುತ್ತಿಲ್ಲ.

ಮೂಲ: ರಘು
ಅನುವಾದ: ಟಿ. ಸುರೇಂದ್ರ ರಾವ್



ಭಾರತದ ಅಭಿವೃದ್ಧಿಗೆ ಅತ್ಯವಶ್ಯವಾದುದೆಂದು, ನಾವು ಕಲ್ಪನೆ ಮಾಡಿದ ಕಲ್ಯಾಣ ರಾಜ್ಯದ ನಿರ್ಮಾಣಕ್ಕಾಗಿ, ಮತ್ತು ಹಲವಾರು ರೀತಿಯಲ್ಲಿ ಜನರಿಗೆ ಸವಲತ್ತುಗಳನ್ನು ಒದಗಿಸುವ ಸಲುವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ, ಅದರಲ್ಲೂ ವಿಶೇಷವಾಗಿ ಉದ್ದಿಮೆಗಳಿಗೆ ಸಂಬಂಧಿಸಿದ, ಸ್ವಾವಲಂಬನೆಯ ಮಹತ್ವವನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ತಿಳಿಯಲಾಗಿತ್ತು. ನಂತರದ ದಶಕಗಳಲ್ಲಿ, ಬೇರೆ ಬೇರೆ ವ್ಯಾಖ್ಯಾನಕಾರರು ತಮ್ಮ ಒಲವಿಗೆ ತಕ್ಕಂತೆ ಮತ್ತು ಆ ವಿಚಾರವನ್ನು ವಿರೋಧಿಸುತ್ತಾರೋ ಅಥವಾ ಪ್ರೋತ್ಸಾಹಿಸುತ್ತಾರೋ ಎನ್ನುವುದರ ಮೇಲೆ ಆ ಪದಕ್ಕೆ ಹಲವಾರು ಅರ್ಥಗಳನ್ನು ನೀಡಿದರು. ಪದಕ್ಕೆ ಅರ್ಥ ನೀಡುವ ಆ ಚರ್ಚೆಗಳಿಗೆ ಹೋಗದೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಸ್ವಾವಲಂಬನೆಯು ದೇಶದ ಆರ್ಥಿಕತೆಯ "ಜೀವಾಳ" ಕ್ಷೇತ್ರಗಳು ಹಾಗೂ ಆಯಕಟ್ಟಿನ ವಲಯಗಳಾದ ಅಂತರಿಕ್ಷ, ಅಣುಶಕ್ತಿ ಮತ್ತು ರಕ್ಷಣೆಯ ಬೆಳವಣಿಗೆ ಮತ್ತು ಸಾರ್ವಜನಿಕ ಉದ್ದಿಮೆಗಳ ಬೆಳವಣಿಗೆಗಳಲ್ಲಿ ದೇಶೀಯ ಸಾಮರ್ಥ್ಯ ಬೆಳೆಸುವುದನ್ನು ಒಳಗೊಂಡಿರಬೇಕೆಂದು ಆಲೋಚಿಸಲಾಗಿತ್ತು. ನೂತನ ಸ್ವತಂತ್ರ ದೇಶದ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಉಳಿಸಿಕೊಳ್ಳಲು, ಜಾಗತಿಕ ಶಕ್ತಿಗಳ ಒತ್ತಡ ಹಾಗೂ ಆಮಿಷಗಳಿಂದ ಮುಕ್ತವಾಗಿರಲು ಈ ಗುರಿಗಳು ಅತ್ಯಂತ ನಿರ್ಣಾಯಕವಾದವು ಎಂದು ಗ್ರಹಿಸಲಾಗಿತ್ತು. ಈ ನೀತಿಗಳ ಅನುಸರಣೆಯ ಭಾಗವಾಗಿ ಮುಂಚೂಣಿ ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಧಾನ ಸಂಶೋಧನಾ ಸಂಸ್ಥೆಗಳನ್ನು, ಐಐಟಿ, ಐ.ಐ.ಎಸ್.ಸಿ ಮತ್ತು ಎ.ಐ.ಐ.ಎಂ.ಎಸ್ ಅಂತಹ ಉನ್ನತ ಶೈಕ್ಷಣಿಕ ಸಂಸ್ಥೆಗಳನ್ನು, ಮತ್ತು ಸಿ.ಎಸ್.ಐ.ಆರ್ ಅಡಿಯಲ್ಲಿ ಕೈಗಾರಿಕಾ ಸಂಶೋಧನಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಯಿತು.

ಈ ನೀತಿಗಳು ನೀಡಿದ ಆಶ್ವಾಸನೆಯನ್ನೆಲ್ಲಾ ಈಡೇರಿಸಲಾಯಿತು, ಅಥವಾ ಭಾರತೀಯ ಜನಸಮುದಾಯದ ಏಳ್ಗೆಗೆ ಇತರ ಆದ್ಯತೆಗಳಾದ ಉಚಿತ ಮತ್ತು ಸಾರ್ವತ್ರಿಕ ಶಾಲಾ ಶಿಕ್ಷಣ ಮತ್ತು ಪರಿಣಾಮಕಾರಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಗುರಿಯನ್ನು ಮುಟ್ಟುವುದರಲ್ಲಿ ವಿಫಲವಾಗಲಿಲ್ಲ ಎಂದು ಯಾರೂ ವಾದಿಸುತ್ತಿಲ್ಲ. ಎಡಪಂಥೀಯರಂತೂ ಖಂಡಿತಾ ಹೀಗೆ ವಾದಿಸುವುದಿಲ್ಲ. ಇವಾವುದನ್ನೂ ಇವತ್ತಿನವರೆಗೂ, 74 ವರ್ಷಗಳ ಸ್ವಾತಂತ್ರ್ಯಾನಂತರವೂ ಸಾಧಿಸಲಾಗಿಲ್ಲ. ಅದೇ ಸಮಯದಲ್ಲಿ, ನಿರಾಕರಿಸಲಾಗದ್ದೇನೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವಾವಲಂಬನೆ ಮತ್ತು 1947ರ ನಂತರದ ಮೊದಲ ದಶಕಗಳಲ್ಲಿನ ಔದ್ಯಮಿಕ ತಳಪಾಯವು ದೇಶವನ್ನು ಮುಂದಕ್ಕೊಯ್ದು ಹೊಸತಾಗಿ ಸ್ವತಂತ್ರಗೊಂಡ ದೇಶಗಳಲ್ಲಿ ಮುಂಚೂಣಿ ಸ್ಥಾನವನ್ನು ನೀಡಿತು ಮತ್ತು ಈ ಸಮಕಾಲೀನ ಕಾಲದಲ್ಲೂ ಕೂಡ ಬಹುಮಟ್ಟಿಗೆ ಅದೇ ಸ್ಥಾನವನ್ನು ಉಳಿಸಿಕೊಂಡಿದೆ ಎನ್ನುವುದು. ಪ್ರಶ್ನೆ ಇರುವುದು, ಇವತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವಾವಲಂಬನೆ ಎಷ್ಟು ಪ್ರಸ್ತುತವಾಗಿದೆ ಮತ್ತು ಆ ಸಂಬಂಧದಲ್ಲಿ ಭಾರತದ ಸ್ಥಾನ ಏನಾಗಿದೆ, ಮತ್ತು ಇದು ಹೇಗೆ ಭಾರತದ ಬೆಳವಣಿಗೆಯ ಭವಿಷ್ಯದ ಮೇಲೆ ಪ್ರಭಾವ ಬೀರುತ್ತದೆ ಎನ್ನುವುದಾಗಿದೆ.

ಎರಡನೇ ಸ್ಥಾಪನಾ ಆಶಯವು ಆಧುನಿಕ ಭಾರತದಲ್ಲಿ ಪ್ರಜೆಗಳು ತಮ್ಮ ಶಕ್ತಿಸಾಮರ್ಥ್ಯವನ್ನು ಸಾಕಾರಗೊಳಿಸಿಕೊಳ್ಳುವ ಸಲುವಾಗಿ, ಜವಾಹರ್ ಲಾಲ್ ನೆಹರೂರವರು ತಮ್ಮ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಹೇಳಿದಂತೆ "ಆಲೋಚನೆಯ ವೈಯಕ್ತಿಕ ಮತ್ತು ಸಾಮಾಜಿಕ ಪ್ರಕ್ರಿಯೆಯಲ್ಲಿ ಹಾಗೂ ಕಾರ್ಯ ನಿರ್ವಹಿಸುವಲ್ಲಿ ಸಾಕ್ಷ್ಯಾಧಾರದ ತಾರ್ಕಿಕ ವಿಧಾನಗಳನ್ನು ಮತ್ತು ವಿಮರ್ಶನಶೀಲ ಚಿಂತನೆಗಳ ವೈಜ್ಞಾನಿಕ ವಿಧಾನಗಳನ್ನು" ಬಳಸುವಂತಹ "ವೈಜ್ಞಾನಿಕ ಮನೋಭಾವ"ವನ್ನು ತುಂಬಿಕೊಳ್ಳುವ ಅವಶ್ಯಕತೆ ಇದೆ. ಸಂವಿಧಾನದ ನಿರ್ದೇಶಕ ತತ್ವಗಳ 51ಎ(ಹೆಚ್) ಅನುಚ್ಛೇದವು ಅದನ್ನು ಹೀಗೆ ವಿವರಿಸುತ್ತದೆ: "ಅನ್ವೇಷಣೆಯ ಮತ್ತು ಸುಧಾರಣೆಯ ಮನೋಭಾವ." ಸ್ಥಳಾಭಾವದ ಮಿತಿಯಿಂದಾಗಿ ವೈಜ್ಞಾನಿಕ ಮನೋಭಾವ ಕುರಿತು ಈಗ ವಿವರಿಸಲಾಗುತ್ತಿಲ್ಲ, ಇಲ್ಲಿ ಸ್ವಾವಲಂಬನೆಯ ಬಗ್ಗೆ ಮಾತ್ರ ಮಾತನಾಡೋಣ.

ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವಾವಲಂಬನೆ: ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತ

ಪುನರುಚ್ಚರಿಸಬೇಕೆಂದರೆ ಕೊನೇ ಪಕ್ಷ ಸ್ವಾತಂತ್ರ್ಯಾನಂತರದ ಮೊದಲ ಮೂರು ದಶಕಗಳಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವಾವಲಂಬನೆಯ ಅನುಸರಣೆಯು ಸಾರ್ವಜನಿಕ ವಲಯದ ನಾಯಕತ್ವದಲ್ಲಿ ಪ್ರಮುಖ ಕ್ಷೇತ್ರಗಳಲ್ಲಿ ಪ್ರಭಾವಶಾಲಿ ಔದ್ಯಮಿಕ ಅಡಿಪಾಯಕ್ಕೆ ಮತ್ತು ಮೂಲ, ಅನ್ವಯಿಕ ಹಾಗೂ ಔದ್ಯಮಿಕ ಸಂಶೋಧನೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದ ಉನ್ನತ ಶಿಕ್ಷಣದಲ್ಲಿ ಉತ್ತಮ ನೆಲೆಗೆ ಕಾರಣವಾಯಿತು. "ಸಮಾಜವಾದಿ" ಪಥವನ್ನು ಪ್ರೋತ್ಸಾಹಿಸಲು ಮತ್ತು ಖಾಸಗಿ ವಲಯವನ್ನು ದಮನ ಮಾಡಲು ಸಾರ್ವಜನಿಕ ವಲಯದ ಪ್ರಾಬಲ್ಯವನ್ನು ಸೈದ್ಧಾಂತಿಕವಾಗಿ ಮುನ್ನೆಲೆಗೆ ತರಲಾಗಿದೆ ಎಂಬ ಗ್ರಹಿಕೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ವರ್ಷಗಳಿಂದ ಉದ್ದೇಶಪೂರ್ವಕವಾಗಿ ಹರಡಿದ್ದರು. ಆದರೆ ಸತ್ಯ ಸಂಗತಿ ಏನೆಂದರೆ, ಭಾರತದ ಖಾಸಗಿ ವಲಯದ ನೇತಾರರು ತಮ್ಮ ಪ್ರಖ್ಯಾತ 1948ರ ಬೊಂಬಾಯಿ ಯೋಜನೆ(ಬಾಂಬೆ ಪ್ಲಾನ್)ಯ ಅಡಿಯಲ್ಲಿ, ಸರ್ಕಾರವು ಮುಖ್ಯವಾದ ಉದ್ಯಮಗಳನ್ನು ಸ್ಥಾಪಿಸಿ ನಡೆಸಬೇಕು, ಏಕೆಂದರೆ ಖಾಸಗಿ ವಲಯದ ಬಳಿ ಬಂಡವಾಳವಾಗಲೀ ಮತ್ತು ಅವುಗಳನ್ನು ನಡೆಸುವ ಸಾಮರ್ಥ್ಯವಾಗಲಿ ಇಲ್ಲ ಮತ್ತು ತಾವು (ಖಾಸಗಿ ವಲಯದವರು) ಗ್ರಾಹಕ ವಸ್ತುಗಳು ಹಾಗೂ ಲಘು ಎಂಜನೀಯರಿಂಗ್ ಉದ್ಯಮವನ್ನು ಕೇಂದ್ರೀಕರಿಸಿ ಕೆಲಸ ಮಾಡುತ್ತೇವೆ ಎಂದಿದ್ದರು.

1970 ರ ಹೊತ್ತಿಗೆ, ಸಾರ್ವಜನಿಕ ವಲಯದ ಘನ ಕೈಗಾರಿಕೆಗಳು ಆರ್ಥಿಕತೆಗೆ ಮತ್ತು ಬೊಕ್ಕಸಕ್ಕೆ ಗಣನೀಯ ಕೊಡುಗೆ ನೀಡಿದವಾದರೂ, ಅದೇ ಸಮಯದಲ್ಲಿ ಅವು ಹಲವಾರು ಕ್ಷೇತ್ರಗಳ ತಾಂತ್ರಿಕ ಜ್ಞಾನದಲ್ಲಿ ಸ್ಥಗಿತತೆಯನ್ನು ಎದುರಿಸುತ್ತಿದ್ದವು, ಹಾಗೂ ಇವು ಸ್ಪರ್ಧಾತ್ಮಕತೆಗೆ ಮತ್ತು ಭವಿಷ್ಯದಲ್ಲಿ ಕೊಡುಗೆಯ ಸಾಮರ್ಥ್ಯಕ್ಕೆ ಅಡ್ಡಿಯುಂಟುಮಾಡಿದ್ದವು. ಇದಕ್ಕಾಗಿ ಕೆಲವರು ಸಾರ್ವಜನಿಕ ವಲಯದ ಉದ್ಯಮಗಳನ್ನು ದೂಷಿಸಬಹುದು. ಆದರೆ ಸಾರ್ವಜನಿಕ ವಲಯದ ಉದ್ಯಮಗಳಿಗೆ ಆಧುನೀಕರಣಕ್ಕಾಗಿಯಾಗಲಿ, ಮೇಲ್ದರ್ಜೆಗೆ ಏರಿಸುವ ಬಗ್ಗೆಯಾಗಲಿ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗೆ ಹಣ ಹೂಡುವುದಕ್ಕಾಗಲೀ ತಮ್ಮದೇ ದಾರಿಯನ್ನು ಕಂಡುಕೊಳ್ಳಲು ಸ್ವಯಮಾಧಿಕಾರ ಇರಲಿಲ್ಲ, ಮತ್ತು ಈಗಲೂ ಇಲ್ಲ – ಎಂಬುದು ನಮಗೆ ಗೊತ್ತಿರಬೇಕು. ಆಟೋಮೊಬೈಲ್ಸ್, ದ್ವಿಚಕ್ರವಾಹನಗಳು, ಬಾಳಿಕೆ ಬರುವ ಗ್ರಾಹಕ ವಸ್ತುಗಳು ಇತ್ಯಾದಿಗಳ ಖಾಸಗಿ ವಲಯದ ಉದ್ದಿಮೆಗಳು ಸಹ ತಮ್ಮ ಕ್ಷೇತ್ರಗಳಲ್ಲಿ ವಿದೇಶಿ ಪಾಲುದಾರರೊಂದಿಗಿನ ತಮ್ಮ ಮೂಲ ಸಹಯೋಗಗಳ ಆಚೆ ಹೋಗುವ ಪ್ರಯತ್ನ ಮಾಡಲಿಲ್ಲ, ದಶಕಗಳ ಕಾಲ ಅದೇ ಹಳೆಯ ತಾತನ ಕಾಲದ ಮಾದರಿಗಳೊಂದಿಗೆ ಪೂರ್ಣ ರಕ್ಷಿತ ಮಾರುವವರ ಮಾರುಕಟ್ಟೆಯ ತೃಪ್ತಿಕರ ವಾತಾವರಣದಲ್ಲಿ ಹಾಗೆಯೇ ಉಳಿದರು, ಮತ್ತು ತಮ್ಮದೇ ಆದ ಸ್ವಾಯತ್ತತೆ ಪಡೆಯುವ ಅಗತ್ಯವನ್ನು ಕಾಣಲಿಲ್ಲ. ಖಾಸಗಿ ವಲಯದ ಘಟಕಗಳು ತಮಗಾಗಲೀ ಅಥವಾ ದೇಶಕ್ಕಾಗಲೀ ಸ್ವಾವಲಂಬನೆಯ ಅಗತ್ಯವನ್ನು ಕಾಣಲೇ ಇಲ್ಲ ಮತ್ತು ಹಾಗಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ದೂರದ ಮಾತಾಗಿಯೇ ಉಳಿಯಿತು.

ಬದಲಾದ ಗುರಿಗಳು, ಹುಸಿ ಕಥಾನಕಗಳು

1980 ಮತ್ತು 90ರ ಹೊತ್ತಿಗೆ, ಸಾರ್ವಜನಿಕ ವಲಯದ ನೇತೃತ್ವದಲ್ಲಿನ ಸ್ವಾವಲಂಬೀ ಅಭಿವೃದ್ಧಿಯ ಆರಂಭದ ಗುರಿ ಮತ್ತು ವೇಗ ಶಕ್ತ್ಯುತ್ಸಾಹವನ್ನು ಕಳೆದುಕೊಂಡಿತ್ತು. ಏಕೆಂದರೆ, ಐಎಂಎಫ್, ವಿಶ್ವಬ್ಯಾಂಕ್ ಮತ್ತಿತರ ಅಂತರ್‍ರಾಷ್ಟ್ರೀಯ ಶಕ್ತಿಯುತ ಸಂಸ್ಥೆಗಳು ರೂಪಿಸಿದ ನವ–ಉದಾರವಾದಿ ಆರ್ಥಿಕ ಚೌಕಟ್ಟಿನ ಪ್ರಭಾವಕ್ಕೆ ಒಳಗಾದ ಸರ್ಕಾರದ ಪ್ರಭಾವಿ ಶಕ್ತಿಗಳು ವಿದೇಶಿ ಹೂಡಿಕೆಗಳನ್ನು ಬರಮಾಡಿಕೊಳ್ಳಲು, ಸಾರ್ವಜನಿಕ ಉದ್ದಿಮೆಗಳಲ್ಲಿನ ತಮ್ಮ ಪಾಲನ್ನು ಹಿಂತೆಗೆದುಕೊಳ್ಳಲು ಮತ್ತು ಕ್ರಮೇಣವಾಗಿ ಸಾರ್ವಜನಿಕ ಸೇವೆಗಳಿಂದ, ಸಾಮಾಜಿಕ ವಲಯದಿಂದ ಮತ್ತು ಹಲವಾರು ಔದ್ಯಮಿಕ ವಲಯದಿಂದ ಸರ್ಕಾರ ಹಿಂದೆ ಸರಿಯಲು ಪ್ರಾರಂಭಿಸಿದವು. 1990 ರಲ್ಲಿ ನವ–ಉದಾರವಾದಿ ನೀತಿಗಳನ್ನು ಸರ್ಕಾರವೇ ಪೂರ್ತಿಯಾಗಿ ಅಪ್ಪಿಕೊಂಡಾಗ ಈ ಪ್ರವೃತ್ತಿಗಳು ಪರಾಕಾಷ್ಠೆಯನ್ನು ತಲುಪಿದವು; ದೇಶೀಯ ಖಾಸಗಿ ವಲಯ ಮತ್ತು ವಿದೇಶಿ ಕಾರ್ಪೊರೇಷನ್ನುಗಳ "ಮೃಗೀಯ ಸಹಜ ಪ್ರವೃತ್ತಿಗಳನ್ನು" ಸ್ವೇಚ್ಛೆಯಾಗಿ ಬಿಟ್ಟುಬಿಡುವ ಗುರಿಯನ್ನು ಸರ್ಕಾರವೇ ಘೋಷಿಸಿತು; ನಿಯಂತ್ರಣಗಳನ್ನು ತೆಗೆದುಹಾಕಿ ಆರ್ಥಿಕತೆಯ ಬಹುಪಾಲು ಎಲ್ಲಾ ವಲಯಗಳನ್ನು ಅವರಿಗೆ ತೆರೆದಿಟ್ಟು ಅಸಂಖ್ಯಾತ ಉತ್ತೇಜಕ ಸವಲತ್ತುಗಳನ್ನು ನೀಡಲಾಯಿತು.

ಆದರೆ, ನೈಜ ಆರ್ಥಿಕತೆಯಲ್ಲಿ ಬೇರೆಯದೇ ಕಥೆ ಪ್ರಕಟವಾಯಿತು. ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ನೌಕರರಿಗೆ ಹೆಚ್ಚಿಸಿದ ಸಂಬಳ ಮತ್ತು ಬ್ಯಾಂಕುಗಳ ಉದಾರ ಸಾಲಗಳಿಂದ ಉತ್ತೇಜನ ಪಡೆದು ಬಾಳಿಕೆ ಬರುವ ಗ್ರಾಹಕ ವಸ್ತುಗಳಲ್ಲಿ ಉತ್ಕರ್ಷ ಉಂಟಾಯಿತು. ವಿದೇಶಿ ಕಂಪನಿಗಳು ದೊಡ್ಡ ರೀತಿಯಲ್ಲಿ ಭಾರತೀಯ ಮಾರುಕಟ್ಟೆಗೆ ಲಗ್ಗೆ ಇಟ್ಟವು, ಹಾಗೆಯೇ ಭಾರತೀಯ ಕಂಪನಿಗಳು ತಮ್ಮ ಉತ್ಪನ್ನಗಳ ಶ್ರೇಣಿ ಮತ್ತು ಗುಣಮಟ್ಟಗಳನ್ನು ವೃದ್ಧಿಸುವ ಸಲುವಾಗಿ ವಿದೇಶಿ ಕಂಪನಿಗಳೊಂದಿಗೆ ಸಹಯೋಗಕ್ಕಾಗಿ ಧಾವಿಸಿದವು. ಆದರೂ, ಸ್ವಾವಲಂಬನೆಯಲ್ಲಿ ಕೆಲವು ಲಾಭ ಸಿಕ್ಕಿತು. ಮತ್ತು ಭಾರತೀಯ ಉದ್ಯಮಗಳ, ಮುಖ್ಯವಾಗಿ ಖಾಸಗಿ ವಲಯದಲ್ಲಿ ಸ್ವಯಮಾಧಿಕಾರದ ಸಾಮರ್ಥ್ಯದಲ್ಲಿ ಹೆಚ್ಚಳವಾಯಿತು. ವಿದೇಶಿ ಛಾಪುಗಳು(ಬ್ರ್ಯಾಂಡ್ಸ್) ಭಾರತದಲ್ಲಿ ಹೆಸರು ಮಾಡಿದವು, ಹಲವಾರು ಭಾರತೀಯ ಕಂಪನಿಗಳು ಹಣ

ಪುಟ 10 ಕ್ಕೆ

ಬ್ಯಾಂಕ್ ನೌಕರರ ಮುಖಂಡ ರೆಡ್ಡಿ ನಿಧನ



ಬ್ಯಾಂಕಿಂಗ್ ರಂಗದ ನೌಕರರ ನಡುವೆ ಹೋರಾಟಗಾರರಾಗಿ, ಸಂಘಟಕರಾಗಿ ಬೆಳೆದ ರೆಡ್ಡಿ ಅವರು ಅಲ್ಪ ಕಾಲದ ಅನಾರೋಗ್ಯದಿಂದ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಬ್ಯಾಂಕ್ ನೌಕರರ ಚಳುವಳಿಯಲ್ಲಿ ಮುಖ್ಯ ಪಾತ್ರವಹಿಸಿದ್ದ ಅವರು ವೈಶ್ಯ ಬ್ಯಾಂಕ್ ನೌಕರರ ಸಂಘದ (ಈಗ ಕೋಟಕ್ ಮಹಿಂದ್ರಾ ಬ್ಯಾಂಕ್) ಪ್ರಧಾನ ಕಾರ್ಯದರ್ಶಿಯಾಗಿ 40 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಪ್ರದೇಶ ಬ್ಯಾಂಕ್ ನೌಕರರ ಸಂಘದ ಪದಾಧಿಕಾರಿಯಾಗಿ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ (ಎಐಬಿಇಎ) ಕೇಂದ್ರ ಸಮಿತಿ ಸದಸ್ಯರಾಗಿದ್ದರು.

ಪ್ರಗತಿಪರ, ಜನಪರ ಚಳುವಳಿಗಳಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದ ರೆಡ್ಡಿ ಅವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊರಗುತ್ತಿಗೆ, ಕಾಂಟ್ರಾಕ್ಟ್, ದಿನಗೂಲಿ ನೌಕರರಿಗೆ ನ್ಯಾಯ ದೊರಕಿಸಿಕೊಡಲು ಹಲವಾರು ಕಾನೂನು ಹೋರಾಟಗಳನ್ನು ನಡೆಸಿದ್ದಾರೆ.

ರೆಡ್ಡಿಯವರ ನಿಧನದಿಂದ ಕರ್ನಾಟಕದ ಬ್ಯಾಂಕ್ ನೌಕರರ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಅವರ ನಿಧನದಿಂದ ಬ್ಯಾಂಕ್ ನೌಕರರ ಚಳುವಳಿಯ ಹಿರಿಯ ಕೊಂಡಿ ಕಳಚಿ ಕೊಂಡಂತಾಗಿದೆ ಎಂದು ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ ಕರ್ನಾಟಕ ಘಟಕದ ಪ್ರಧಾನ ಕಾರ್ಯಶಿ ಎಂ.ರತ್ನಾಕರ ಶೆಣೈ ಸಂತಾಪ ಸೂಚಿಸಿದ್ದಾರೆ.

ಕಾರಿಡಾರ್ ರಸ್ತೆಗೆ ಭೂಸ್ವಾದೀನ: ನ್ಯಾಯ ಸಮ್ಮತ ಪರಿಹಾರಕ್ಕೆ ಸಂತ್ರಸ್ತರ ಪ್ರತಿಭಟನೆ

ಬೆಂಗಳೂರು–ಚೆನ್ನೈ ಕಾರಿಡಾರ್ ರಸ್ತೆಗೆ ಜಿಲ್ಲೆಯಲ್ಲಿ ಭೂಸ್ವಾದೀನ ಪಡಿಸಿಕೊಂಡಿರುವ ಜಮೀನುಗಳಿಗೆ ನ್ಯಾಯ ಸಮ್ಮತವಾದ ಪರಿಹಾರ ನೀಡುವಂತೆ ಒತ್ತಾಯಿಸಿ ಜಮೀನು ಸಂತ್ರಸ್ತರ ಹೋರಾಟ ಸಮಿತಿ ಹಾಗೂ ಕೆಪಿಆರ್ ಎಸ್ ವತಿಯಿಂದ ಜಿಲ್ಲಾಧಿಕಾರಿ ಕಛೇರಿ ಮುಂದೆ ಮಂಗಳವಾರ ಪ್ರತಿಭಟನೆ ನಡೆಸಿದರು.

ರೈತರ ಜಮೀನನ್ನು ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ರಸ್ತೆ ನಿರ್ಮಾಣಕ್ಕಾಗಿ ಜಿಲ್ಲೆಯ ಐದು ತಾಲ್ಲೂಕುಗಳ ಪೈಕಿ ಐದು ತಾಲ್ಲೂಕುಗಳಲ್ಲಿ ಸರಿಸುಮಾರು 65 ಗ್ರಾಮಗಳ ನೂರಾರು ರೈತರ ಜಮೀನುಗಳನ್ನು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕೇಂದ್ರ ಸರ್ಕಾರದ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ 2016 ರಲ್ಲಿ ಜಮೀನುಗಳನ್ನು ವಶಪಡಿಸಿಕೊಂಡಿರುವ ಆದೇಶ ಮಾಡಿದ್ದಾರೆ ಭೂಸ್ವಾಧೀನ ಕಾಯ್ದೆ 2013 ಜಾರಿಯಲ್ಲಿ ಇದ್ದರೂ ಸಹ ಇದರ ಅಡಿಯಲ್ಲಿ ಭೂಸ್ವಾಧೀನಕ್ಕೆ ಹೋಗದೇ ಹಳೆಯ ರೈತ ವಿರೋಧಿ ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ರೈತರ ಜಮೀನಿಗೆ ಮಾರುಕಟ್ಟೆ ದರ" ನಿಗದಿಪಡಿಸುವ ಬದಲು ರಾಜ್ಯ ಸರ್ಕಾರದ ಮಾರ್ಗಸೂಚಿ ದರ ಆಧಾರದಲ್ಲಿ ಪರಿಹಾರ ನೀಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು

ಹೊರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕೊಳತೂರು ಗ್ರಾಮದ ಜಮೀನಿಗೆ ಮಾರ್ಗಸೂಚಿ ದರ ಒಂದ ಎಕರೆಗೆ 1.10 ಕೋಟಿ ರೂ. ನಿಗದಿಯಾಗಿದ್ದು, ಕೋಲಾರ ಜಿಲ್ಲೆಯ ಅನೇಕ ಗ್ರಾಮಗಳ ಜಮೀನಿಗೆ ಮಾರ್ಗಸೂಚಿ ದರ ಒಂದು ಎಕರೆಗೆ ಕೇವಲ 1 ಲಕ್ಷ ದಿಂದ 3–4 ಲಕ್ಷ ರೂ.ಗಳಾಗಿದೆ. ಇದು ಸಾಲದೂ ಎಂಬಂತೆ ಪಿ – ನಂಬರ್ ಜಮೀನುಗಳಿಗೆ ಮತ್ತು ಬಗರ್ ಹುಕ್ಕುಂ ಸಾಗುವಳಿ ಭೂಮಿಗೆ ಪರಿಹಾರ ನಿರಾಕರಿಸಲಾಗುತ್ತಿದೆ ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಸರಕಾರವೇ ಕಡಿಮೆ ಪರಿಹಾರ ಸಿಗುವ ಗ್ರಾಮಗಳ ರೈತರಿಗೆ ನ್ಯಾಯಸಮ್ಮತವಾದ ಪರಿಹಾರವನ್ನು ನಿಗದಿ ಮಾಡುವ ಮಾನದಂಡಗಳನ್ನು ರೂಪಿಸಿ ಗ್ರಾಮದಿಂದ ಗ್ರಾಮಕ್ಕೆ ಜಮೀನಿನ ದರಗಳಲ್ಲಿ ಇರುವ ಅಗಾದ ಅಂತರವನ್ನು ಸರಿಪಡಿಸಬೇಕು.

ಪಿ – ನಂಬರ್ ಗಳು ಮತ್ತು ಇನಾಮ್ತಿ ಜಮೀನುಗಳ ಸಮಸ್ಯೆಗಳನ್ನು ಬಗೆಹರಿಸಿ ಸಂತ್ರಸ್ಥ ರೈತರಿಗೆ ಪರಿಹಾರ ನೀಡಬೇಕು. ಬಗರ್ ಹುಕ್ಕುಂ ಸಾಗುವಳಿ ಭೂಮಿಗೆ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಭೂಸ್ವಾಧೀನ ಸಂದರ್ಭದಲ್ಲಿ ನೀಡಿರುವ ಮಾದರಿಯ ಪರಿಹಾರ ನೀಡಬೇಕು ಮರ ಗಿಡಗಳು, ಪಂಪ್‌ಹೌಸ್, ಪೈಪ್ ಲೈನ್, ತೆರೆದ ಬಾವಿಗಳು, ಕೋಳಿ ಫಾರಂಗಳಿಗೆ ಮತ್ತು ಬೋರ್‌ವೆಲ್‌ಗಳಿಗೆ ತಾರತಮ್ಯವಿಲ್ಲದೇ ನ್ಯಾಯಸಮ್ಮತವಾದ ಮೌಲ್ಯಗಳನ್ನು ನಿಗದಿ ಮಾಡಬೇಕು. ಅದಲು ಬದಲು ಆಗಿರುವ ಮನೆ ಮತ್ತು ಇತರೆ ಮಾಲ್ಕಿಗಳನ್ನು ಸರಿಪಡಿಸಬೇಕು ಎಂದರು.

ಭೂಮಿಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ರೈತರಿಗೆ ಪರಿಹಾರದ ಜೊತೆಗೆ ಪರ್ಯಾಯ ಕೃಷಿ ಭೂಮಿಯನ್ನು ನೀಡಬೇಕು. ಎಕ್ಸ್ ಪ್ರೆಸ್ ಹವೈ ನಿರ್ಮಾಣವಾಗುವ ಸಂದರ್ಭದಲ್ಲಿ ಸರ್ವೀಸ್ ರಸ್ತೆಗಳನ್ನು ಅಳಡಿಸಲು ಮತ್ತು ಅಗತ್ಯ ಇರುವ ಕಡೆಗಳಲ್ಲಿ ಕೆಳ ಸೇತುವೆ, ಮೇಲ್ಸತುವೆ ನಿರ್ಮಾಣ ಮಾಡಬೇಕು. ಈ ರಸ್ತೆಗಾಗಿ ಸಾವಿರಾರು ಗಿಡ ಮರಗಳು ನಾಶವಾಗಲಿದೆ. ಇದಕ್ಕೆ ಪರ್ಯಾಯವಾಗಿ ಹೆದ್ದಾರಿ ಪ್ರಾಧಿಕಾರ ಮರ ಬೆಳೆಸಲು ಅದ್ಯತೆ ನೀಡಬೇಕು ಐತಾಂಡಹಳ್ಳಿ ಗ್ರಾಮದಲ್ಲಿ ಜಂಕ್ಷನ್‌ಗಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ಪರ್ಯಾಯವಾಗಿ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದರು.

ಹೋರಾಟದ ನೇತೃತ್ವವನ್ನು ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ಶ್ರೀನಿವಾಸ್, ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಟಿ.ಎಂ. ವೆಂಕಟೇಶ್, ಸಿಐಟಿಯು ಜಿಲ್ಲಾ ಮುಖಂಡ ಗಾಂಧಿನಗರ ನಾರಾಯಣಸ್ವಾಮಿ, ಮುಖಂಡರಾದ ಕೆ.ಎನ್. ಮುನಿವೆಂಕಟೇಗೌಡ, ಎಂ. ಬಾಬು, ಗಂಗಮ್ಮ, ಎನ್ ಎನ್ ಶ್ರೀರಾಮ್, ವಿ.ನಾರಾಯಣರೆಡ್ಡಿ, ದೇವರಾಜ್, ಕಲಾವಿದ ಸ್ವಾಮಿ, ಗೋವಿಂದಪ್ಪ, ವಿ. ರಮೇಶ್, ಅಮರೇಶ್, ಜಿ.ಎಂ. ವೆಂಕಟೇಶ್, ಅಪ್ಪಾಜಿಗೌಡ, ರೈತರು ಇದ್ದರು. ●

ಉದ್ಯೋಗ ಖಾತ್ರಿ ಕೆಲಸದ ಬಾಕಿ ಹಣ ಬಿಡುಗಡೆಗೆ ಅಗತ್ಯ ಕ್ರಮ ವಹಿಸಲು ಒತ್ತಾಯ

ಕೋವಿಡ್ ಸಂಕಷ್ಟದಲ್ಲಿಯೂ ತಮ್ಮ ಹೊಟ್ಟೆಪಾಡಿಗಾಗಿ ಉದ್ಯೋಗ ಖಾತ್ರಿ ಕೆಲಸ ನಿರ್ವಹಿಸಿದ ರಾಜ್ಯದ ಲಕ್ಷಾಂತರ ಜನ ಕೂಲಿಕಾರರು, ಬಡ ರೈತರು, ಮಹಿಳೆಯರು, ದಲಿತರುಗಳಿಗೆ ಅವರ ದುಡಿಮೆಯ ಬಾಕಿ ವೇತನ ಕಳೆದ ಎರಡು ತಿಂಗಳಿಂದ ಬಿಡುಗಡೆ ಮಾಡದೇ ಸತಾಯಿಸಲಾಗುತ್ತಿರುವುದು ತೀವ್ರ ಖಂಡನೀಯವಾಗಿದೆ. ಈ ಬಡವರಿಗೆ ಸಮಯಕ್ಕೆ ಕೂಲಿ ಹಣವನ್ನು ನೀಡದಿದ್ದರೇ ಅವರು ಕೋವಿಡ್ ಸಂಕಷ್ಟವನ್ನು ಎದುರಿಸುವ ಬಗೆಯಾದರೂ ಹೇಗೆ? ಜನತೆಗೆ ಅಗತ್ಯ ಕೋವಿಡ್ ಪರಿಹಾರ ನೀಡದಿದ್ದರೂ, ಅವರು ದುಡಿದ ಕೂಲಿ ಹಣವನ್ನು ನೀಡದೇ ಕೋವಿಡ್ ಸಂಕಷ್ಟದಲ್ಲಿ ಉದಾಸೀನ ಮಾಡುತ್ತಿರುವುದು ಬೇಸರದ ವಿಚಾರವಾಗಿದೆ. ಅದೇ ರೀತಿ, ಕೂಲಿ ಮೊತ್ತವನ್ನು ಕೃಷಿ ರಂಗದ ಕನಿಷ್ಠ ವೇತನದಂತೆ 424 ರೂಗಳಿಗೆ ಹೆಚ್ಚಿಸಲು ಕೇಳುತ್ತಿದ್ದರೂ ಸರಕಾರ ವೇತನ ತಾರತಮ್ಯ ಮುಂದುವರೆಸುವ ಜಾಣ ಕಿವುಡುತನ ತೋರುತ್ತಿದೆ. ಇದೆಲ್ಲಾ ಸರಕಾರಗಳ ಜನ ವಿರೋಧಿ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಈ ತಕ್ಷಣವೇ ರಾಜ್ಯ ಸರಕಾರ ಯಾವುದೇ ಬೇರೆ ನೆಪಗಳನ್ನು ಹೇಳದೇ, ಬಾಕಿ ಕೂಲಿ ಹಣವನ್ನು ತಡ ದಂಡ ಸಮೇತ ಒದಗಿಸಲು ಅಗತ್ಯ ಕ್ರಮಕೈಗೊಳ್ಳಬೇಕು.

ಈಗಾಗಲೇ, ರಾಜ್ಯದ ಹಾಗೂ ದೇಶದ ಜನತೆ ಮತ್ತು ನಮ್ಮ ಸಂಘಟನೆಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಸಂವಿಧಾನ ವಿರೋಧಿಯಾದ ಮತ್ತು ಜಾತಿ ದ್ವೇಷವನ್ನು ಉತ್ತೇಜಿಸುವ, ಜಾತಿ ಆಧಾರಿತ ಉದ್ಯೋಗ ಖಾತ್ರಿ ಕೂಲಿ ನೀಡುವ ಆದೇಶವನ್ನು ವಾಪಾಸು ಪಡೆಯುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದ್ದರೂ, ಎರಡೂ ಸರಕಾರಗಳು ಜನತೆಯನ್ನು ವಿಭಜಿಸಿ ಆಳುವ ಸಂವಿಧಾನ ವಿರೋಧಿಯಾದ ಅದೇ ಆದೇಶವನ್ನು ಜಾರಿಗೊಳಿಸುತ್ತಿರುವುದು ನಾಚಿಕೆಗೇಡಿನ ವಿಚಾರವಾಗಿದೆ.

ತಕ್ಷಣವೇ, ಆ ಆದೇಶವನ್ನು ವಾಪಾಸು ಪಡೆಯುವಂತೆ ಮತ್ತು ಅದನ್ನು ಜಾರಿಗೊಳಿಸುತ್ತಿರುವ ದುರುದ್ದೇಶಿತ ಕ್ರಮಗಳನ್ನು ಹಿಂಪಡೆಯುವಂತೆ ಮತ್ತು ಕೆಲಸಗಾರರ ನಡುವೆ ಸಾಮರಸ್ಯ ಮೆರೆಯುವ ಹಳೆಯ ಕ್ರಮವನ್ನೇ ಮುಂದುವರೆಸಲು ಬಲವಾಗಿ ಒತ್ತಾಯಿಸಿವೆ.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕಾರ್ಯ ನಿರ್ವಹಿಸುವ ಕಾಯಕ ಬಂಧುಗಳ ಪ್ರೋತ್ಸಾಹ ಧನವು ಅತ್ಯಂತ ನಿಕೃಷ್ಟವಾಗಿದೆ. ಅದು ಅ ವರ ಹೆಚ್ಚುವರಿ ದುಡಿಮೆಯ ವೇತನವಿದ್ದು ಕೊನೆಯ ಪಕ್ಷ ಅದನ್ನು ಪ್ರೋತ್ಸಾಹ ಧನವೆನ್ನದೇ, ಹೆಚ್ಚುವರಿ ವೇತನವಾಗಿ ನೀಡಲು ಕ್ರಮವಹಿಸಬೇಕು.

ಈ ಎಲ್ಲ ಅಂಶಗಳ ಕುರಿತು ಸೂಕ್ತ ಕ್ರಮವಹಿಸಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘಗಳು ಸರ್ಕಾರವನ್ನು ಒತ್ತಾಯಿಸಿವೆ. ●

ಸ್ವಾತಂತ್ರ್ಯ–75 ಮತ್ತು ಸ್ವಾವಲಂಬನೆ.... ಪುಟ 9 ರಿಂದ


ಮಾಡಿದವು, ಆದರೆ ಕೆಲವಾದರೂ ಸ್ಥಳೀಯ ತಾಂತ್ರಿಕ ಪರಿಣತಿಯಿಂದ ಸಿದ್ಧವಾದ ಭಾರತೀಯ ಛಾಪುಗಳು ಅಥವಾ ಉತ್ಪನ್ನಗಳು ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಸರು ಮಾಡಿವೆಯೆ ಎನ್ನುವುದನ್ನು ಯೋಚಿಸಬೇಕು.

2014ರಲ್ಲಿ ಈಗಿನ ಸರ್ಕಾರ ಬಂದ ನಂತರ ಈ ಪ್ರವೃತ್ತಿ ಇನ್ನೂ ಹದಗೆಟ್ಟಿತು. ಭಾರತವನ್ನು 21ನೇ ಶತಮಾನಕ್ಕೆ ಕೊಂಡೊಯ್ಯುವ, ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಅಥವಾ ಮುಂದಿನ ಕೆಲವೇ ವರ್ಷಗಳಲ್ಲಿ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವ ಘನೋದ್ದೇಶಗಳ ಭರವಸೆಗಳನ್ನು ನೀಡಲಾಗಿದೆ. "ಆತ್ಮನಿರ್ಭರ್ ಭಾರತ" ಅಥವಾ ಸ್ವಾವಲಂಬನೆಯ ಭಾರತವನ್ನಾಗಿ ಮಾಡಲಾಗುವುದೆಂದೂ ಅಬ್ಬರದ ಪ್ರಚಾರ ಮಾಡಿದೆ ಈ ಸರ್ಕಾರ. ಆದಾಗ್ಯೂ ಈ ಸರ್ಕಾರವು ತನ್ನ ಬಹುಪಾಲು ಸಮಯವನ್ನು ಪ್ರಮುಖ ವಿದೇಶಿ ರಕ್ಷಣಾ ಕಂಪನಿಗಳನ್ನು ದೇಶದೊಳಕ್ಕೆ ಆಹ್ವಾನಿಸುವುದರಲ್ಲಿ ಕಳೆದಿದೆ. ಅಂತಿಮವಾಗಿ ಚಿತ್ರವಿಚಿತ್ರವಾದ ಗ್ರಹಿಕೆಗಳು ಮತ್ತು ಹಾರೈಕೆಯ ಆಲೋಚನೆಗಳು ಕಟು ವಾಸ್ತವವನ್ನು ಎದುರಿಸಬೇಕಾಗಿದೆ. ಯಾವ ದೇಶವೂ ಪ್ರೀತಿಗಾಗಿ ಅಥವಾ ದುಡ್ಡಿಗಾಗಿ ಉನ್ನತ ತಂತ್ರಜ್ಞಾನವನ್ನು ಬಿಟ್ಟುಕೊಡುವುದಿಲ್ಲ. ಗಣನೀಯವಾಗಿ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕವಾಗಿ ಸದೃಢರಾಗಿರುವ ದೇಶಗಳ ಅನುಭವವೂ ಇದೇ ಆಗಿದೆ. ಏಕೆಂದರೆ ಅವರು ತಮ್ಮದೇ ಆದ ದೇಶೀಯ ಪ್ರಯತ್ನಗಳ ಮೂಲಕ ಸ್ವಾಯತ್ತ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದಾರೆ.

1970 ಮತ್ತು 80 ರಲ್ಲಿ ಜಪಾನ್ ಮತ್ತು ಅದರ ಹಿಂದೆಯೇ ದಕ್ಷಿಣ ಕೊರಿಯಾ, ನಂತರ ಇತರ ಆಗ್ನೇಯ ಏಶಿಯಾದ ದೇಶಗಳು, ಮತ್ತು ಆ ನಂತರ ಚೈನಾ, ಎಲ್ಲವೂ ಸ್ಪಷ್ಟವಾಗಿ ಅರಿತುಕೊಂಡಿವೆ ಮತ್ತು ಪ್ರತ್ಯಕ್ಷ ಮಾಡಿ ತೋರಿಸಿವೆ ಕೂಡ. ಸ್ವಾವಲಂಬನೆಯ ಮೌಲ್ಯ ಮತ್ತು ಸ್ವಾಯತ್ತ ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಾಮರ್ಥ್ಯದ ಬೆಳವಣಿಗೆಗಳು ಕೇವಲ ಆರ್ಥಿಕತೆಯನ್ನು ಬೆಳೆಸಲು ಮಾತ್ರವಲ್ಲ, ಜಾಗತಿಕ ಆರ್ಥಿಕತೆಯಲ್ಲಿ ದೊಡ್ಡ ಮಟ್ಟದ ಪಾತ್ರವನ್ನು ವಹಿಸಲು ಕೂಡ ಅದು ಅಗತ್ಯವಾದ ಮೆಟ್ಟಿಲಾಗುತ್ತದೆ ಎಂಬ ಸತ್ಯವನ್ನು ಅವು ಕಂಡುಕಂಡಿವೆ. ಇವತ್ತು ಈ ದೇಶಗಳು, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹಾಗೂ ಮಾನವ ಸಂಪನ್ಮೂಲಗಳಲ್ಲಿನ ಹಣಹೂಡಿಕೆಯಿಂದ ಮತ್ತು ಬಹುಪಾಲು ದೇಶೀಯ ಪ್ರಯತ್ನಗಳಿಂದ, – ತಂತ್ರಜ್ಞಾನದಲ್ಲಿ, ಆವಿಷ್ಕಾರಗಳಲ್ಲಿ, ತಯಾರಿಕೆಯಲ್ಲಿ ಮತ್ತು ಬಾಳಿಕೆ ಬರುವ ಗ್ರಾಹಕ ವಸ್ತುಗಳ ಮೌಲ್ಯದ ಸರಣಿಯಲ್ಲಿ (ವ್ಯಾಲ್ಯೂ ಚೈನ್), ಎಲೆಕ್ಟ್ರಾನಿಕ್ಸ್, ಮೈಕ್ರೋ ಪ್ರೊಸೆಸರ್ ಚಿಪ್ಸ್, ಕಂಪ್ಯೂಟಿಂಗ್ ಸಿಸ್ಟಮ್ಸ್, ಸೆಲ್ಯುಲರ್ ಫೋನ್ಸ್ ಮತ್ತು ಸಂಪರ್ಕ ಉಪಕರಣಗಳೂ (ಕಮ್ಯುನಿಕೇಷನ್ಸ್ ಬ್ಯಾಕ್‌ಬೋನ್ಸ್), ರೊಬಾಟಿಕ್‌ಗಳು, ಉತ್ಪಾದನಾ ಯಂತ್ರಗಳಲ್ಲಿ ಮತ್ತು ಹಲವಾರು ಇತರ ವಲಯಗಳ ವಿಚಾರದಲ್ಲಿ – ಪ್ರಮುಖ ಸ್ಥಾನವನ್ನು ಹೊಂದಿವೆ. ವಿಶೇಷವಾಗಿ ಚೈನಾವು 5ಜಿ, ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್), ಉಪಕರಣಗಳ ಜಾಲ (ಇಂಟರ್ನೆಟ್ ಆಫ್ ಥಿಂಗ್ಸ್), ಸ್ವಯಂ–ಚಾಲನೆ (ಆಟೊಮೇಷನ್), ಸ್ವಯಂಚಾಲಿತ ವಾಹನಗಳು (ಅಟಾನಮಸ್ ವೆಹಿಕಲ್ಸ್), ಬ್ಯಾಟರಿ ಸ್ಟೋರೇಜ್ ಸಿಸ್ಟೆಮ್ಸ್ ಮುಂತಾದ ತಂತ್ರಜ್ಞಾನಗಳಲ್ಲಿ ಪ್ರಮುಖ ನೆಲೆ ಸಾಧಿಸುವ ಹೊಸ್ತಿಲಲ್ಲಿ ನಿಂತಿದೆ.

ಆಟೋಮೊಬೈಲ್ಸ್ ಅಥವಾ ಗೃಹಬಳಕೆಯ ಯಂತ್ರಗಳು (ವೈಟ್ ಗೂಡ್ಸ್) ನಂತಹ ವಸ್ತುಗಳು ಕೆಲವು ಬಾರಿ ಭಾರತದಲ್ಲೇ ತಯಾರಾಗಿದ್ದಾಗ್ಯೂ, ಅಥವಾ ಅವು ಸಂಪೂರ್ಣವಾಗಿ ಆಮದಾಗಿದ್ದರೂ ಅಥವಾ ಸೆಲ್ ಫೋನ್ ತರಹ ಇಲ್ಲಿ ಜೋಡಿಸಲ್ಪಟ್ಟಿದ್ದರೂ ಸಹ ಭಾರತವು ನಿಸ್ಸಂದೇಹವಾಗಿ ವಿದೇಶಿ ವಸ್ತುಗಳಿಗೆ ಒಂದು ಒಳ್ಳೆಯ ಮಾರುಕಟ್ಟೆಯಾಗಿದೆ. ಅತ್ಯಂತ ದೊಡ್ಡ ಭಾರತೀಯ ಖಾಸಗಿ ಕಾರ್ಪೋರೇಷನ್‌ಗಳು, ಕೆಲವೇ ಕೆಲವು ಒಂದು ಅಂಕಿಯವುಗಳನ್ನು ಹೊರತುಪಡಿಸಿದರೆ, ಬಹು ರಾಷ್ಟ್ರೀಯ ಕಂಪನಿಗಳ ಅಥವಾ ಇತರ ವಿದೇಶಿ ಕಂಪನಿಗಳ ಕಿರಿಯ ಪಾಲುದಾರರಾಗಿರುವವರು ಸ್ವಯಮಾಧಿಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಾಮರ್ಥ್ಯವನ್ನು ಬೆಳೆಸಿಲ್ಲ, ಜಾಗತಿಕ ಮಟ್ಟದ ಕೆಲವು ಉತ್ಪನ್ನಗಳನ್ನು ಅಥವಾ ಬ್ರ್ಯಾಂಡುಗಳನ್ನು ಮಾಡಿಲ್ಲ ಕೂಡ. ಖಾಸಗಿ ವಲಯವು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಅಥವಾ ಗಣನೀಯ ದೇಶೀಯ ಸಾಮರ್ಥ್ಯವನ್ನು ಬೆಳೆಸುವಲ್ಲಿ ಸ್ವಲ್ಪವೂ ಆಸಕ್ತಿ ಹೊಂದದಿರುವಾಗಲೂ ಸಹ, ಸರ್ಕಾರವು ಸಾರ್ವಜನಿಕ ವಲಯದಿಂದ ತನ್ನ ಪಾಲನ್ನು ಹಿಂತೆಗೆದುಕೊಳ್ಳುವ ಮತ್ತು ಖಾಸಗೀಕರಿಸುವ ಪಟ್ಟು ಹಿಡಿದಿದೆ. ಈ ಸಾರ್ವಜನಿಕ ವಲಯಗಳು ಮಾತ್ರವೇ ಭಾರತವನ್ನು ಆತ್ಮವಿಶ್ವಾಸದಿಂದ ಭವಿಷ್ಯವನ್ನು ಎದುರಿಸಲು ಸಮರ್ಥವನ್ನಾಗಿಸಲು ಅಗತ್ಯವಾದ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುವ ಔದ್ಯಮಿಕ ಶಕ್ತಿಯಾಗಿದೆ. ಮತ್ತೆ ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವಾವಲಂಬನೆಯನ್ನು ಅಪ್ಪಿಕೊಳ್ಳದೇ, ಅಗತ್ಯವಿರುವಲ್ಲಿ ದೋಷಪರಿಹಾರ ಮಾಡಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬಲಪಡಿಸದೇ, ಮತ್ತು ಬಹುವಾಗಿ ಸಂಶೋಧನೆ ಮತ್ತು ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸದಿದ್ದರೆ ಭಾರತದ ಭವಿಷ್ಯ ಉಜ್ವಲವಾಗಿ ಕಾಣಲಾರದು. ■

ತಮಿಳುನಾಡು: ಹಣಕಾಸು ಕುರಿತ ಶ್ವೇತ ಪತ್ರ ಮತ್ತು ಬಜೆಟ್



ತಮಿಳುನಾಡಿನ ಹೊಸ ಡಿಎಂಕೆ ಸರಕಾರ ಭರವಸೆ ನೀಡಿದಂತೆ ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಕುರಿತಂತೆ ಬಿಡುಗಡೆ ಮಾಡಿರುವ ಶ್ವೇತಪತ್ರ ಲಭ್ಯವಿರುವ ಸಾಮಗ್ರಿಗಳನ್ನು ಒಟ್ಟುಗೂಡಿಸುವ ಉಪಯುಕ್ತ ಕಾರ್ಯವನ್ನು ನಿರ್ವಹಿಸಿದೆ. ಪಾರದರ್ಶಕತೆಗೆ ಬದ್ಧವಾಗಿರುವ ಬಗ್ಗೆ ಅದರ ಹೇಳಿಕೆ ಮತ್ತು ಪ್ರಸ್ತುತ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಚರ್ಚೆಯನ್ನು ಉತ್ತೇಜಿಸುವ ಬಯಕೆ ಶ್ಲಾಘನೀಯ. ಆದರೂ, ಅದು ಗುರುತಿಸಿದ ಸಮಸ್ಯೆಗಳನ್ನು ಹೇಗೆ ನಿಭಾಯಿಸಬೇಕು ಎಂಬುದರ ಕುರಿತು ನಿಸ್ಸಂದಿಗ್ಧ ಮತ್ತು ದೃಢ ಸಲಹೆಗಳನ್ನು ಮುಂದಿಡದಿರುವಂತೆ ಎಚ್ಚರದಿಂದಿರಲು ಯತ್ನಿಸಿದೆ ಎಂದೇ ಭಾವಿಸಬೇಕಾಗುತ್ತದೆ. ಹಣಕಾಸು ಮೂಲಭೂತವಾದಕ್ಕೆ ಮತ್ತು ಹಣಕಾಸಿನ ಕೊರತೆಯನ್ನು ಕಡಿಮೆ ಮಾಡುವ ನವ ಉದಾರವಾದದ ಗೀಳಿಗೆ ಅದು ಬದ್ಧವಾಗಿರ ಬಯಸುವಂತೆ ಕಾಣುತ್ತದೆ.

ಡಾ. ವೆಂಕಟೇಶ ಆತ್ರೇಯ ಅನು: ರಾಮು ಎಸ್.ಕೆ.

ಕಳೆದ ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಜಯಗಳಿಸಿದ ನಂತರ, ಡಿಎಂಕೆ ಸರ್ಕಾರ ರಚನೆಯಾದ ಕೂಡಲೇ ತಮಿಳುನಾಡು ರಾಜ್ಯ ವಿಧಾನಸಭೆಗೆ ರಾಜ್ಯಪಾಲರು ಮಾಡಿದ ಭಾಷಣ, ಶಾಸಕಾಂಗ ಸಭೆಯ ಸದಸ್ಯರು ಮತ್ತು ಜನರು ತಮ್ಮ ಸರ್ಕಾರದ ಹಣಕಾಸಿನ ನೈಜ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುವ ಸಲುವಾಗಿ ಸರ್ಕಾರವು ತಮಿಳುನಾಡು ಹಣಕಾಸಿನ ಪರಿಸ್ಥಿತಿಯನ್ನು ವಿವರಿಸುವ ಒಂದು ಶ್ವೇತಪತ್ರವನ್ನು ಹೊರಡಿಸುತ್ತದೆ ಎಂದು ಸೂಚಿಸಿತು. ಆಗಸ್ಟ್ 13 ರಂದು ಬಜೆಟ್ ಅನ್ನು ವಿಧಾನಸಭೆಯಲ್ಲಿ ಮಂಡಿಸುವ ಮೊದಲು ಪಿಟಿಆರ್ ಎಂದೇ ಜನಪ್ರಿಯರಾದ, ಹಣಕಾಸು ಸಚಿವ ಪಳನಿವೇಲ್ ತ್ಯಾಗರಾಜನ್, ಆಗಸ್ಟ್ 9 ರಂದು ಚೆನ್ನೈನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶ್ವೇತಪತ್ರವನ್ನು ಬಿಡುಗಡೆ ಮಾಡುವ ಮೂಲಕ ಈ ಭರವಸೆಯನ್ನು ಈಡೇರಿಸಲಾಗಿದೆ.

ಶ್ವೇತ ಪತ್ರವು 2006–07 ಮತ್ತು 2020–2021 ರ ನಡುವೆ ತಮಿಳುನಾಡು ಸರ್ಕಾರದ ಹಣಕಾಸಿನ ಪ್ರವೃತ್ತಿಗಳನ್ನು ಪರಿಶೀಲಿಸುತ್ತದೆ. ಈ ಅವಧಿಯಲ್ಲಿ, ಡಿಎಂಕೆ 2006 ರಿಂದ 2011 ರವರೆಗೆ ಸರ್ಕಾರದಲ್ಲಿತ್ತು. ಎಐಎಡಿಎಂಕೆ 2011 ರಿಂದ 2021 ರವರೆಗೆ ಸರ್ಕಾರದಲ್ಲಿತ್ತು, ಇದರಲ್ಲಿ, ಜಯಲಲಿತಾ ಅವರು 2011 ರಿಂದ 2016 ಡಿಸೆಂಬರ್ ವರೆಗೆ ಮುಖ್ಯಮಂತ್ರಿಯಾಗಿದ್ದರು ಮತ್ತು ಆಕೆಯ ಸಾವಿನ ನಂತರ ಪಳನಿಸಾಮಿ ಮುಖ್ಯಮಂತ್ರಿಯಾಗಿದ್ದರು. ಶ್ವೇತ ಪತ್ರವು, ರಾಜ್ಯ ಹಣಕಾಸು ಮತ್ತು ಬಜೆಟ್‌ಗಳ ಮೇಲಿನ ಅಧಿಕೃತ ದತ್ತಾಂಶಗಳ ಆಧಾರದಲ್ಲಿ, 2006–2011ರ ಅವಧಿಗೆ ಹೋಲಿಸಿದರೆ 2011–2021ರ ಅವಧಿಯಲ್ಲಿ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯು ಹದಗೆಟ್ಟಿದೆ ಎಂದು ಹೇಳುತ್ತದೆ.

ತಮಿಳುನಾಡು ಸರ್ಕಾರದ ವರಮಾನ ಕೊರತೆ, ಅಂದರೆ ಅದರ ವರಮಾನ ಜಮೆಗಳು (ರಾಜ್ಯದ ಸ್ವಂತ ತೆರಿಗೆ ವರಮಾನ, ಕೇಂದ್ರ ವರ್ಗಾವಣೆ ಮತ್ತು ರಾಜ್ಯ ಸರ್ಕಾರದ ತೆರಿಗೆಯೇತರ ವರಮಾನಗಳಿಂದ ಕೂಡಿದೆ) ಮತ್ತು ಅದರ ವರಮಾನ ವೆಚ್ಚಗಳು (ಇವು ಭೌತಿಕ ಆಸ್ತಿಗಳನ್ನು ಸೃಷ್ಟಿಸದ ವೆಚ್ಚಗಳು) ಇವುಗಳ ನಡುವಿನ ವ್ಯತ್ಯಾಸವು ಒಟ್ಟು ಮೊತ್ತಗಳಲ್ಲಿಯೂ ಮತ್ತು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ(ಜಿಎಸ್‌ಡಿಪಿಯ) ಪಾಲಿನಲ್ಲಿಯೂ ಕ್ರಮೇಣ ಹೆಚ್ಚಾಗುತ್ತಿದೆ. ಶ್ವೇತ ಪತ್ರವು, 'ಜಿಎಸ್‌ಡಿಪಿಯ ಶೇಕಡಾವಾರಾಗಿ, ವರಮಾನ ಕೊರತೆಯು 2013–14ರಲ್ಲಿ 0.18 ಶೇ. ದಿಂದ 2019–20ರಲ್ಲಿ 1.95 ಶೇ.ಕ್ಕೆ ಏರಿಕೆಯಾಗಿದೆ' ಎಂದು ಟಿಪ್ಪಣಿ ಮಾಡಿದೆ. ಈ ಅಂಕಿ ಅಂಶವು ಕೋವಿಡ್ ಸಾಂಕ್ರಾಮಿಕದ ವರ್ಷ2020–2021 ರಲ್ಲಿ ಜಿಎಸ್‌ಡಿಪಿಯ 3.16 ಶೇಕಡಾಕ್ಕೆ ಹೆಚ್ಚಾಗಿದೆ. ಈ ಸಂಖ್ಯೆಗಳ ಆಧಾರದ ಮೇಲೆ ತಮಿಳುನಾಡು ಸುಸ್ಥಿರವಲ್ಲದ ಹಣಕಾಸಿನ ಪರಿಸ್ಥಿತಿಯಲ್ಲಿದೆ ಎಂದು ಶ್ವೇತ ಪತ್ರವು ಪ್ರತಿಪಾದಿಸುತ್ತದೆ. ರಾಜ್ಯಕ್ಕೆ ವಿತ್ತೀಯ ಕೊರತೆ ಸಂಖ್ಯೆಗಳನ್ನು ಎತ್ತಿ ತೋರಿಸುವ ಮೂಲಕ ಅದೇ ತೀರ್ಮಾನಕ್ಕೆ ಬರುತ್ತದೆ. ಆದಾಗ್ಯೂ, ಇದು ರಾಷ್ಟ್ರೀಯ ಮಟ್ಟದಲ್ಲಿ 'ಹಣಕಾಸಿನ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ' (ಎಫ್‌ಆರ್‌ಬಿಎಂ) ಕಾಯಿದೆ ಮತ್ತು ಅದಕ್ಕೆ ಅನುಗುಣವಾದ ನಿರ್ಬಂಧಗಳನ್ನು ಜಿಎಸ್‌ಡಿಪಿಯ ಶೇಕಡಾವಾಗಿ ಹಣಕಾಸಿನ ಕೊರತೆಯ ಮಟ್ಟದ ಮೇಲೆ ಹಾಕಿರುವ ನಿರ್ಬಂಧಗಳ ತರ್ಕವನ್ನು ಪ್ರಶ್ನಿಸುವುದಿಲ್ಲ

ತಮಿಳುನಾಡಿನಲ್ಲಿ ಬಂದ ಸರ್ಕಾರಗಳು ಸತತವಾಗಿ, ಹೆಚ್ಚುತ್ತಿರುವ ವರಮಾನ ಕೊರತೆಗಳಿಗೆ ಸಾಲ ಪಡೆಯುವ ಮೂಲಕ ಹಣಕಾಸು ಒದಗಿಸಬೇಕಾಯಿತು. ಇದರ ಪರಿಣಾಮವಾಗಿ, ತಮಿಳುನಾಡು ಸರ್ಕಾರದ ಒಟ್ಟಾರೆ ಸಾಲವು ವೇಗವಾಗಿ ಹೆಚ್ಚುತ್ತಿದೆ, ವಿಶೇಷವಾಗಿ ಕಳೆದ ಐದು ವರ್ಷಗಳಲ್ಲಿ, ಮೊತ್ತದ ದೃಷ್ಟಿಯಿಂದಲೂ ಮತ್ತು ಜಿಎಸ್‌ಡಿಪಿಯ ಶೇಕಡಾವಾರಾಗಿಯೂ, ಎಂದು ಶ್ವೇತ ಪತ್ರವು ಗಮನಿಸುತ್ತದೆ. 2006–07 ಮತ್ತು 2010–11ರ ನಡುವೆ, ಜಿಎಸ್‌ಡಿಪಿಗೆ ಸರ್ಕಾರದ ಸಾಲದ ಅನುಪಾತವು ಸಾಕಷ್ಟು ಸ್ಥಿರವಾಗಿತ್ತು, 2006–07 ರಲ್ಲಿ 18.37 ಶೇಕಡದಿಂದ 2010–11ರಲ್ಲಿ 16.68 ಕ್ಕೆ ಇಳಿದಿದೆ. ಈ ಅನುಪಾತವು 2011–12 ರಿಂದ 2015–16 ರ ಅವಧಿಯಲ್ಲಿ ಸ್ಥಿರವಾಗಿತ್ತು, 2011–12ರಲ್ಲಿ ಕನಿಷ್ಠ 15.36 ಶೇಕಡಾ ಮತ್ತು 2015–16ರಲ್ಲಿ ಗರಿಷ್ಠ 17.94 ಶೇಕಡಾ. ಆದಾಗ್ಯೂ, ಅಂದಿನಿಂದ ಅನುಪಾತವು ತೀವ್ರವಾಗಿ ಹೆಚ್ಚಾಗಿದೆ, 2016–17ರಲ್ಲಿ ಶೇಕಡಾ 20.83 ಕ್ಕೆ ಮತ್ತು 2020–21ರ ಪರಿಷ್ಕೃತ ಅಂದಾಜುಗಳಲ್ಲಿ ಶೇಕಡಾ 24.98 ಕ್ಕೆ ಮತ್ತು ಕಳೆದ ಫೆಬ್ರವರಿಯಲ್ಲಿ ಹಿಂದಿನ ಸರ್ಕಾರವು ಪ್ರಸ್ತುತಪಡಿಸಿದ 2021–22ರ ಮಧ್ಯಂತರ ಬಜೆಟ್‌ನ ಅಂದಾಜಿನ ಪ್ರಕಾರ 26.69 ಶೇಕಡಕ್ಕೆ ಜಿಗಿಯಿತು.

ರಾಜ್ಯ ಸರ್ಕಾರದ ವರಮಾನ ಜಮೆಗಳು ಜಿಎಸ್‌ಡಿಪಿಯ ಶೇ.ವಾಗ 2008–09ರಲ್ಲಿ ಶೇ. 13.35 ರ ಗರಿಷ್ಠ ಮಟ್ಟದಿಂದ ಸ್ಥಿರವಾಗಿ ಕುಸಿದಿದ್ದು, 2015–16ರಲ್ಲಿ ಶೇಕಡಾ 11 ಕ್ಕಿಂತ ಕಡಿಮೆಯಾಗಿದೆ. ಇದು 2020–21ರಲ್ಲಿ 8.70 ಶೇಕಡಕ್ಕೆ ಮತ್ತಷ್ಟು ಕುಸಿದಿದೆ ಮತ್ತು 2016 –2021 ರ ಅವಧಿಯಲ್ಲಿ ಸರಾಸರಿ ಶೇಕಡಾ 10 ಕ್ಕಿಂತ ಕಡಿಮೆ ಇದೆ. ರಾಜ್ಯದ ಸ್ವಂತ ತೆರಿಗೆ ವರಮಾನವು (ಎಸ್‌ಒಟಿಆರ್) ಜಿಎಸ್‌ಡಿಪಿಯ ಅನುಪಾತವಾಗಿ, 2013–14ರಲ್ಲಿ ಶೇ. 8.4 ರಿಂದ 2019–20ರಲ್ಲಿ 5.8 ಕ್ಕೆ ಮತ್ತು 2020–21ರಲ್ಲಿ ಶೇ 5.4 ಕ್ಕೆ ಇಳಿದಿದೆ ಎಂದು ಶ್ವೇತ ಪತ್ರವು ಗಮನಿಸುತ್ತದೆ. ಜಿಎಸ್‌ಡಿಪಿಯ ಅನುಪಾತ, ತೆರಿಗೆಯಲ್ಲದ ವರಮಾನವು 2016 ಮತ್ತು 2021 ರ ನಡುವೆ ಕೇವಲ 0.71 ಶೇಕಡಾ 2006 ರಿಂದ 2011 ರ ನಡುವೆ 1.02 ಶೇಕಡಾ ಮತ್ತು 2011 ಮತ್ತು 2016 ರ ನಡುವೆ 0.81 ಪ್ರತಿಶತದಷ್ಟು ಕಡಿಮೆಯಾಗಿದೆ ಎಂದು ಇದು ಸೂಚಿಸುತ್ತದೆ. ಅವುಗಳೆಂದರೆ ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು, 2006 ಮತ್ತು 2011 ರ ನಡುವೆ ಜಿಎಸ್‌ಡಿಪಿಯ ಸುಮಾರು 1.95 ಶೇಕಡಾದಿಂದ ನಂತರ 1.67 ಕ್ಕೆ ಇಳಿದಿದೆ.

ವರಮಾನ ವೆಚ್ಚಗಳು ಹೆಚ್ಚುತ್ತಲೇ ಇವೆ. 2006 ರಿಂದ 2021 ರವರೆಗಿನ ಸಂಪೂರ್ಣ ಅವಧಿಗೆ, ವರಮಾನ ವೆಚ್ಚಗಳ ಹೆಚ್ಚಳ ದರವು ವಾರ್ಷಿಕವಾಗಿ 12.71 ಶೇ., ವರಮಾನ ಜಮೆಗಳ ಬೆಳವಣಿಗೆಯ ದರ 9.92 ಶೇ.ಕ್ಕಿಂತ ಹೆಚ್ಚಾಗಿದೆ, ಇದರ ಪರಿಣಾಮವಾಗಿ ವರಮಾನ ಕೊರತೆಯ ಜಿಎಸ್‌ಡಿಪಿಯ ಅನುಪಾತವಾಗಿ ಹೆಚ್ಚುತ್ತಿದೆ.

ಶ್ವೇತ ಪತ್ರವು, ಭಾರತ ಸರ್ಕಾರವು ವಿಧಿಸುತ್ತಿರುವ ರಾಜ್ಯಗಳೊಂದಿಗೆ ಹಂಚಿಕೊಳ್ಳಲಾಗದ ಸೆಸ್‌ಗಳು ಮತ್ತು ಸರ್ಚಾರ್ಜ್‌ಗಳ ಪ್ರಮಾಣವು ಗಂಭೀರ ಕಾಳಜಿಯ ಮೂಲವಾಗಿದೆ ಎಂದು ಸರಿಯಾಗಿಯೇ ಹೇಳುತ್ತದೆ. ಸೆಸ್‌ಗಳು ಮತ್ತು ಸರ್ಚಾರ್ಜ್‌ಗಳ ಪ್ರಮಾಣವು 2011–12ರಲ್ಲಿ ಶೇಕಡಾ 10.4 ರಿಂದ 2019–20ರ ಪರಿಷ್ಕೃತ ಅಂದಾಜಿನಲ್ಲಿ ಶೇ 20.2 ಕ್ಕೆ ಏರಿಕೆಯಾಗಿದೆ. ಈ ಸೆಸ್‌ಗಳು ಮತ್ತು ಸರ್ಚಾರ್ಜ್‌ಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಲಾಗುವುದಿಲ್ಲ. ರಾಜ್ಯ ಸರ್ಕಾರದ ಹಣಕಾಸು ಮತ್ತು ನೀತಿ ಸ್ವಾಯತ್ತತೆಗೆ ಧಕ್ಕೆ ತರುವ ಪ್ರಕ್ರಿಯೆಯಾಗಿ ತಮಿಳುನಾಡಿಗೆ ಕೇಂದ್ರದಿಂದ ವರ್ಗಾವಣೆಗಳಲ್ಲಿ ಅನುದಾನ ನೆರವಿನ ಘಟಕದ ಪಾಲು ಹೆಚ್ಚುತ್ತಿರುವುದರತ್ತ ಶ್ವೇತ ಪತ್ರವು ಗಮನ ಸೆಳೆಯುತ್ತದೆ. ರಾಜ್ಯಕ್ಕೆ ನೀಡಬೇಕಾದ ಜಿಎಸ್‌ಟಿ ಪರಿಹಾರವನ್ನು ಪಾವತಿಸುವಲ್ಲಿ ಕೇಂದ್ರ ಸರ್ಕಾರದ ವೈಫಲ್ಯವನ್ನೂ ಇದು ಗಮನಿಸುತ್ತದೆ.

2008–09ರ ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಕೋವಿಡ್ ಸಾಂಕ್ರಾಮಿಕದ ಬಗ್ಗೆ ಉಲ್ಲೇಖಿಸುವ ಮೂಲಕ, ಒಂದು ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ನಿರ್ಧರಿಸುವಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಂಶಗಳು ಪಾತ್ರವಹಿಸುತ್ತವೆ ಎಂದು ಶ್ವೇತ ಪತ್ರವು ಗಮನಿಸುತ್ತದೆ. "ರಾಷ್ಟ್ರೀಯ ಮಟ್ಟದಲ್ಲಿ, ಆರ್ಥಿಕತೆಯು 2016 ರ ನೋಟುರದ್ಧತಿಯಿಂದ ಆರಂಭಗೊಂಡು ನಿರಂತರ ಕುಸಿತದಲ್ಲಿದೆ. ಜಿಎಸ್‌ಟಿಯನ್ನು ತರಾತುರಿಯಲ್ಲಿ ಅಳವಡಿಸಿಕೊಂಡಿರುವುದು ಕುಸಿತವನ್ನು ಮತ್ತಷ್ಟು ಉಲ್ಬಣಗೊಳಿಸಿತು ..."ಎಂದು ಅದು ಹೇಳುತ್ತದೆ. ಆದರೆ ಇದು ಹೆಚ್ಚಿನ ಪುರಾವೆಗಳನ್ನು ನೀಡದೆ, ".....ಭಾರತದ ಇತರ ಶ್ರೀಮಂತ ರಾಜ್ಯಗಳಿಗೆ ಹೋಲಿಸಿದಾಗ, ಹಣಕಾಸಿನ ಶಿಸ್ತು ಮತ್ತು ನಿರ್ವಹಣೆಯ ಕೊರತೆಯು ನಮ್ಮ ಆರ್ಥಿಕ ಮತ್ತು ಬೆಳವಣಿಗೆಯ ಕುಸಿತದಲ್ಲಿ ಮಹತ್ವದ ಪಾತ್ರ ವಹಿಸಿದ" ಎಂಬ ತೀರ್ಮಾನಕ್ಕೆ ಬರುತ್ತದೆ. "ನಮ್ಮ ಹೆಚ್ಚಿನ ಪ್ರಸಕ್ತ ಸಮಸ್ಯೆಗಳು, ವಿಶೇಷವಾಗಿ ಕಳೆದ ಏಳು ವರ್ಷಗಳಲ್ಲಿ, ಸರಿಯಾದ ಆಡಳಿತದ ಕೊರತೆಯ ಫಲಿತಾಂಶ ಎಂದು ಈ ವರದಿಯಲ್ಲಿ ಪ್ರಸ್ತುತಪಡಿಸಿದ ದತ್ತಾಂಶದಲ್ಲಿ ಸ್ಪಷ್ಟವಾಗಿದೆ " ಎಂದೂ ಶ್ವೇತಪತ್ರವು ಹೇಳುತ್ತದೆ.

ನವ ಉದಾರವಾದಿ ಒತ್ತಡಗಳನ್ನು ಪ್ರತಿರೋಧಿಸುವ ಅಗತ್ಯ

"ಎಂದಿನಂತೆ ವ್ಯವಹಾರ ಎಂಬ ರೀತಿ ಮುಂದುವರಿಯಲು ಸಾಧ್ಯವಿಲ್ಲ, ಮತ್ತು ನಾವು ಹೆಚ್ಚುತ್ತಿರುವ ಸಾಲ ಮತ್ತು ಬಡ್ಡಿ ವೆಚ್ಚದ ಈ ವಿಷಚಕ್ರದಿಂದ ಹೊರಬರಬೇಕಾದರೆ ನಮ್ಮ ನಿಲುವು ಮೂಲಭೂತವಾಗಿ ಬದಲಾಗಬೇಕು. ಮತ್ತೊಂದೆಡೆ, ಇದು "ಒಂದು ತಲೆಮಾರಿನಲ್ಲಿ ಒಮ್ಮೆ" ತರಬೇಕಾದ ಸುಧಾರಣೆಗಳನ್ನು ಜಾರಿಗೆ ತರಲು ಇದು ಒಂದು ಅವಕಾಶವಾಗಿದೆ, ಅವುಗಳಲ್ಲಿ ಹಲವನ್ನು ಯಾವುದೇ ಜವಾಬ್ದಾರಿಯುತ ಸರ್ಕಾರವು ವರ್ಷಗಳ ಹಿಂದೆಯೇ ಕೈಗೊಳ್ಳಬೇಕಿತ್ತು "ಎಂದು ಶ್ವೇತಪತ್ರವು ಸಾರುತ್ತದೆ.

ಇದನ್ನು ಸುಲಭವಾಗಿ ತಪ್ಪಾಗಿ ಓದಬಹುದು. ಕಾರ್ಪೊರೇಟ್ ಮಾಧ್ಯಮಗಳಲ್ಲಿ, ಈ ಶ್ವೇತಪತ್ರದಲ್ಲಿ ತೀವ್ರವಾದ ನವ ಉದಾರವಾದಿ ಸುಧಾರಣೆಗಳಿಗೆ ಕರೆ ನೀಡಲಾಗಿದೆ ಎಂದು ಕಾಣುವ ಸಂಘಟಿತ ಪ್ರಯತ್ನವಿತ್ತು. ಈ ಸಮೂಹ ಗಾನವನ್ನು ಗಮನಿಸಬೇಕಾಗಿದೆ.

ಶ್ವೇತಪತ್ರವು ತಮಿಳುನಾಡಿನಲ್ಲಿ ರಾಜ್ಯದ ಹಣಕಾಸಿನ ಸ್ಥಿತಿಯ ಬಗ್ಗೆ ಲಭ್ಯವಿರುವ ಸಾಮಗ್ರಿಗಳನ್ನು ಒಟ್ಟುಗೂಡಿಸುವ ಉಪಯುಕ್ತ ಕಾರ್ಯವನ್ನು ನಿರ್ವಹಿಸಿದೆ. ಪಾರದರ್ಶಕತೆಗೆ ಬದ್ಧವಾಗಿರುವ ಬಗ್ಗೆ ಅದರ ಹೇಳಿಕೆ ಮತ್ತು ಪ್ರಸ್ತುತ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಚರ್ಚೆಯನ್ನು ಉತ್ತೇಜಿಸುವ ಬಯಕೆ ಶ್ಲಾಘನೀಯ. ಆದರೂ, ಗುರುತಿಸಿದ ಸಮಸ್ಯೆಗಳನ್ನು ಹೇಗೆ ನಿಭಾಯಿಸಬೇಕು ಎಂಬುದರ ಕುರಿತು ನಿಸ್ಸಂದಿಗ್ಧ ಮತ್ತು ದೃಢ ಸಲಹೆಗಳನ್ನು ಮುಂದಿಡದಿರುವಂತೆ ಎಚ್ಚರದಿಂದಿರಲು ಯತ್ನಿಸಿದೆ ಎಂದು ಭಾವಿಸದಿರಲು ಸಾಧ್ಯವಿಲ್ಲ. ಹಣಕಾಸು ಮೂಲಭೂತವಾದಕ್ಕೆ ಮತ್ತು ಹಣಕಾಸಿನ ಕೊರತೆಯನ್ನು ಕಡಿಮೆ ಮಾಡುವ ನವ ಉದಾರವಾದದ ಗೀಳಿಗೆ ಅದು ಬದ್ಧವಾಗಿರ ಬಯಸುವಂತೆ ಕಾಣುತ್ತದೆ.

ಶ್ವೇತಪತ್ರವು ಎಫ್‌ಆರ್‌ಬಿಎಂ ಕಾಯ್ದೆಯ ಬಗ್ಗೆ ಒಂದು ವಿಮರ್ಶಾತ್ಮಕ ನಿಲುವು ತಳೆಯುವುದಿಲ್ಲ. ಇದು ರಾಜ್ಯ ಸರ್ಕಾರಗಳ ಹಣಕಾಸಿನ ಅಧಿಕಾರವನ್ನು ನಿರ್ಬಂಧಿಸಲು ಪ್ರಯತ್ನಿಸುವ ಕೇಂದ್ರ ಸರ್ಕಾರದ ಅನೇಕ ನಡೆಗಳ ತೀಕ್ಷ್ಣವಾದ ವಿಮರ್ಶೆಯನ್ನು ಆರೋಹಿಸುವುದಿಲ್ಲ. ಈ ಕೆಲವು ನಡೆಗಳನ್ನು ಹಿಮ್ಮೆಟ್ಟಿಸುವ ಮೂಲಕ ರಾಜ್ಯ ಹಣಕಾಸು ಸುಧಾರಣೆಯಲ್ಲಿ ಸಮಾನ ಮನಸ್ಕ ರಾಜ್ಯ ಸರ್ಕಾರಗಳೊಂದಿಗೆ ಜಂಟಿ ಕ್ರಿಯೆಯ ಸಂಭಾವ್ಯತೆ ಮತ್ತು ಸಾಧ್ಯತೆಗಳನ್ನು ಇದು ಮುನ್ನೆಲೆಗೆ ತರುವುದಿಲ್ಲ. ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಕಾರ್ಪೊರೇಟ್ ವಲಯಕ್ಕೆ ನೀಡಲಾದ ಹಲವಾರು ರಿಯಾಯಿತಿಗಳ ಮೌಲ್ಯಮಾಪನ ಮಾಡುವಲ್ಲಿ ಉತ್ತರದಾಯಿತ್ವಕ್ಕೆ ಕರೆ ನೀಡುವುದಿಲ್ಲ ಅಥವಾ ದೊಡ್ಡ ಉದ್ಯಮಗಳ ಹೂಡಿಕೆಗೆ ಕೊಟ್ಟಿರುವ ಉತ್ತೇಜನೆಗಳ ವೆಚ್ಚಗಳು ಮತ್ತು ಪ್ರಯೋಜನಗಳ ಬಗ್ಗೆ ಕಲ್ಪಿತ ಮತ್ತು ವಾಸ್ತವಿಕ ಅಂಶಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬಲ್ಲ ಒಂದು ಶ್ವೇತಪತ್ರವನ್ನು ಸಲ್ಲಿಸುವ ಪ್ರಸ್ತಾವವನ್ನು ಮುಂದಿಡುವುದೂ ಇಲ್ಲ. ಖಂಡಿತವಾಗಿ, ಈ ರಿಯಾಯಿತಿಗಳು ರಾಜ್ಯದ ಹಣಕಾಸು ಸ್ಥಿತಿಗಳ ಮೇಲೆ ಪ್ರಭಾವ ಬೀರಿವೆ ಮತ್ತು ಪರಿಣಾಮ ಬೀರುತ್ತವೆ!

ಭ್ರಷ್ಟಾಚಾರ ನಿರ್ಮೂಲನೆ ಮತ್ತು ಸ್ವಚ್ಛ ಆಡಳಿತ ಹಾಗೂ ಸಾಕಷ್ಟು ತಾಂತ್ರಿಕ ಮತ್ತು ಮಾರ್ಕೆಟಿಂಗ್ ಬೆಂಬಲದ ಮೂಲಕ ರಾಜ್ಯ ಸಾರ್ವಜನಿಕ ವಲಯದಲ್ಲಿ ನಷ್ಟದಲ್ಲಿರುವ ಘಟಕಗಳನ್ನು ಲಾಭದಾಯಕಗೊಳಿಸುವ ಸಾಧ್ಯತೆಯನ್ನು ಕೇರಳದ ಎಲ್ ಡಿ ಎಫ್ ಸರ್ಕಾರಗಳು ಯಶಸ್ವಿಯಾಗಿ ತೋರಿಸಿರುವುದನ್ನು ಈ ಶ್ವೇತಪತ್ರದಲ್ಲಿ ಉಲ್ಲೇಖಿಸಲಾಗಿಲ್ಲ. ಇದರಲ್ಲಿ ಗುರುತಿಸಿದ ಪ್ರಶ್ನೆಗಳನ್ನು ಪರಿಶೀಲಿಸುವಾಗ, ಸಾರ್ವಜನಿಕ ವಲಯದ ಉದ್ಯಮಗಳಿಗೆ ಸಾಮಾಜಿಕ ಗುರಿಗಳಿರುವುದರಿಂದಾಗಿ ಅವುಗಳನ್ನು ಕೇವಲ ವಾಣಿಜ್ಯ ಲಾಭದ ದೃಷ್ಟಿಯಿಂದ ಮೌಲ್ಯಮಾಪನ ಮಾಡಬಾರದು ಎಂಬುದನ್ನು ಮತ್ತು ಪರಸ್ಪರ ಸಬ್ಸಿಡಿಯ ತತ್ವವನ್ನು ರಾಜ್ಯ ಸರ್ಕಾರವು ಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಸರ್ಕಾರದ ಸಾಲ ಮತ್ತು ವರಮಾನ ಕೊರತೆಗಳ ಪ್ರಶ್ನೆಗಳನ್ನು ಒಂದು ವಿಶಾಲ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ. ಶ್ವೇತಪತ್ರದಲ್ಲಿರುವ ಸಂಖ್ಯೆಗಳನ್ನು ನೋಡಿದರೆ, ಅವು 2020–2021ರ (ಮತ್ತು ಸ್ವಲ್ಪ ಮಟ್ಟಿಗೆ, 2019–20ರ) ಅಂಕಿಅಂಶಗಳು, ಹಿಂದಿನ ವರ್ಷಗಳ ಅಂಕಿ–ಅಂಶಗಳಿಂದ ಬಹಳ ದೂರವಿರುವಂತವು. ಸಾಲ–ಜಿಎಸ್‌ಡಿಪಿ ಅನುಪಾತವನ್ನು ಪ್ರತ್ಯೇಕವಾಗಿ ಅಥವಾ ಎಫ್‌ಆರ್‌ಬಿಎಂ ಕಾಯ್ದೆಯಲ್ಲಿರುವ ಇರುವ ಒಕ್ಕಣಿಕೆಗಳ ದೃಷ್ಟಿಯಿಂದಷ್ಟೇ ನೋಡಲಾಗುವುದಿಲ್ಲ. ದೇಶದ ಸಂಪತ್ತನ್ನು ಉತ್ಪಾದಿಸುವ ದುಡಿಯುವ ಜನಗಳು ಅದರ ಒಂದು ಸಣ್ಣ ಭಾಗವನ್ನಷ್ಟೇ ವೇತನ ಮತ್ತು ಆದಾಯವಾಗಿ ಪಡೆಯುತ್ತಾರೆ, ಅಲ್ಲದೆ ಗಣನೀಯ ಪ್ರಮಾಣದ ಪರೋಕ್ಷ ತೆರಿಗೆಗಳನ್ನು ಪಾವತಿಸುತ್ತಾರೆ. ಇವರ ಅಗತ್ಯಗಳನ್ನು **ಪುಟ 14 ನೋಡಿ**

ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗಕ್ಕೆ ತೀವ್ರ ಪರಾಭವ ಏಕಾಯಿತು?

ಸಿಪಿಐ(ಎಂ) ಕೇಂದ್ರ ಸಮಿತಿಯ ವಿಮರ್ಶೆ



ಇತ್ತೀಚೆಗೆ ನಡೆದ ಪಶ್ಚಿಮ ಬಂಗಾಲದ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ)ಮತ್ತು ಎಡರಂಗ ಹಿಂದೆಂದೂ ಕಾಣದಂತಹ ಆಘಾತಕಾರಿ ಪರಾಭವವನ್ನು ಕಂಡಿವೆ. ಇದು ಏಕಾಯಿತು ಎಂಬುದರ ಒಂದು ತೀಕ್ಷ್ಣವಾದ ವಿಮರ್ಶಾತ್ಮಕ ಆತ್ಮಾವಲೋಕನ ಸಿಪಿಐ(ಎಂ)ಪಶ್ಚಿಮ ಬಂಗಾಲ ರಾಜ್ಯ ಸಮಿತಿಯಲ್ಲಿ, ನಂತರ ಕೇಂದ್ರ ಸಮಿತಿಯಲ್ಲಿ ನಡೆದಿದ್ದು, ಇದರಿಂದ ಪಾಠಗಳನ್ನು ಗುರುತಿಸಿ, ಕೈಗೊಳ್ಳಬೇಕಾದ ಸರಿಪಡಿಕೆ ಕ್ರಮಗಳ ರೂಪುರೇಷೆಯನ್ನು ಆಗಸ್ಟ್ 6ರಿಂದ 8 ರ ವರೆಗೆ ನಡೆದ ಕೇಂದ್ರ ಸಮಿತಿಯ ಸಭೆ ಕೊಟ್ಟಿದೆ. ರಾಜಕೀಯ ಸಂಘಟನಾತ್ಮಕ ಪ್ರಶ್ನೆಗಳಲ್ಲದೆ, ರಾಜ್ಯದಲ್ಲಿನ ಪರಿಸ್ಥಿತಿಯನ್ನು ನಿರ್ಣಯಿಸುವಾಗ ಪಕ್ಷದ ಸಾಮೂಹಿಕ ನೆಲೆಯಲ್ಲಿನ ಅವನತಿಗೆ ಕಾರಣವಾದ ಎರಡು ಮುಖ್ಯ ಅಂಶಗಳನ್ನು, ರಾಜಕೀಯ ಬಲಪಂಥದತ್ತ ಪಲ್ಲಟ ಮತ್ತು ನಮ್ಮ ಸಮಾಜದಲ್ಲಿನ ವರ್ಗ ಬದಲಾವಣೆಗಳನ್ನು ಸರಿಯಾಗಿ ಪರಿಗಣಿಸಲಿಲ್ಲ ಎಂದು ಈ ವಿಮರ್ಶೆ ಗುರುತಿಸಿದೆ. ಇಡೀ ದೇಶದ ಎಡಪಂಥೀಯ ಆಂದೋಲನದ ಮತ್ತು ಕಮ್ಯುನಿಸ್ಟ್ ಆಂದೋಲನದ ಮುನ್ನಡೆಗೆ ನೆರವಾಗಬಹುದಾದ ಈ ವಿಮರ್ಶೆಯನ್ನು ನಮ್ಮ ಓದುಗರಿಗಾಗಿ ಈ ಸಂಚಿಕೆಯಲ್ಲಿ ಮತ್ತು ಮುಂದಿನ ಸಂಚಿಕೆಯಲ್ಲಿ ಕೊಡುತ್ತಿದ್ದೇವೆ.

ಪಶ್ಚಿಮ ಬಂಗಾಳದ ಈ ವಿಧಾನಸಭಾ ಚುನಾವಣಾ ಫಲಿತಾಂಶಗಳು ವಿಧ್ವಂಸಕಾರಕವಾಗಿವೆ. 1946 ರಿಂದೀಚೆಗೆ ಕಮ್ಯುನಿಸ್ಟರು ಎಂದೂ ಇಂತಹ ಆಪತ್ಕಾರಿ ಫಲಿತಾಂಶವನ್ನು ಕಂಡಿರಲಿಲ್ಲ. ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ಕಮ್ಯುನಿಸ್ಟರೊಬ್ಬರೂ ರಾಜ್ಯ ವಿಧಾನಸಭೆಗೆ ಆರಿಸಿ ಬರದಿರುವುದು.

ರಾಜ್ಯ ನಾಯಕತ್ವವು ಇದರ ಹೊಣೆಯನ್ನು ಹೊತ್ತುಕೊಂಡಿದೆ. ಈ ಫಲಿತಾಂಶಗಳ ಪರಾಮರ್ಶೆಯು ಒಂದು ಬಾರಿಯ ಅಭ್ಯಾಸವಾಗಬಾರದು, ಬದಲಿಗೆ ಇದೊಂದು ನಿರಂತರ ಗಂಭೀರ ಸ್ವವಿಮರ್ಶಾತ್ಮಕ ಆತ್ಮಾವಲೋಕನವಾಗಬೇಕು. ಏಕೆಂದರೆ ಈ ಶೋಚನೀಯ ಕಾರ್ಯನಿರ್ವಹಣಕ್ಕೆ ಕಾರಣವಾದ ಹಲವಾರು ಅಂಶಗಳ ಬಗ್ಗೆ ಪಕ್ಷವು ಈ ಹಿಂದೆಯೇ ರಾಜಕೀಯ ಹಾಗೂ ಸಂಘಟನಾತ್ಮಕ ತೀರ್ಮಾನಗಳನ್ನು ಕೂಡಾ ತೆಗೆದುಕೊಂಡಿತ್ತು, ಆದರೆ ಅವಾವುದೂ ಸರಿಯಾಗಿ ಜಾರಿಗೊಳಿಸಲು ಆಗಿಲ್ಲ. ಇದರ ಕಾರಣಗಳನ್ನು ತೀಕ್ಷ್ಣವಾಗಿ ಕರಾರುವಾಕ್ಕಾಗಿ ಗುರುತಿಸಬೇಕು ಮತ್ತು ಸರಿಪಡಿಸಬೇಕು.

ಪಶ್ಚಿಮ ಬಂಗಾಳದ ಜನರು ಬಿಜೆಪಿಯನ್ನು ಸೋಲಿಸಿರುವುದು ಹಿತಕರವಾದ ಅಂಶವಾಗಿದೆ. 294 ವಿಧಾನಸಭಾ ಸ್ಥಾನಗಳಿಗೆ ನಡೆದ ಚುನಾವಣೆ ಪ್ರಕ್ರಿಯೆಯು ಎಂಟು ಹಂತಗಳಲ್ಲಿ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಮುಂದುವರಿಯಿತು. ಶೇಕಡಾ 81.77, ಅಂದರೆ ಸರಿಸುಮಾರು 6 ಕೋಟಿ ಮತದಾರರು ಮತ ಚಲಾಯಿಸಿದರು. ತೃಣಮೂಲ ಕಾಂಗ್ರೆಸ್ 213 ಸ್ಥಾನಗಳನ್ನು, ಬಿಜೆಪಿ 77 ಸ್ಥಾನಗಳನ್ನು ಗೆದ್ದುಕೊಂಡವು.

ಪಕ್ಷವು ಎಡರಂಗದ ಸಹಿತ ಕಾಂಗ್ರೆಸ್ ಹಾಗೂ ಇಂಡಿಯನ್ ಸೆಕ್ಯುಲರ್ ಫ್ರಂಟ್(ಐ.ಎಸ್.ಎಫ್) ನೊಂದಿಗೆ ಸ್ಥಾನ ಹೊಂದಾಣಿಕೆಯನ್ನು ಮಾಡಿಕೊಂಡಿತ್ತು. ಐ.ಎಸ್.ಎಫ್. ಗೆದ್ದುಕೊಂಡ ಒಂದು ಸ್ಥಾನವನ್ನು ಹೊರತುಪಡಿಸಿ ಸಂಯುಕ್ತ ಮೋರ್ಚಾ ಎಂಬ ಈ ಕೂಟವು ಬೇರಾವುದೇ ಸ್ಥಾನವನ್ನು ಗಳಿಸಲಿಲ್ಲ.

ಅಬ್ಬರದ ಹಾಗೂ ಆಕ್ರಮಣಕಾರಿ ಪ್ರಚಾರದ ಹೊರತಾಗಿಯೂ, ಹಿಂದೆಂದೂ ಕಾಣದಷ್ಟು ಮೊತ್ತದ ಹಣವನ್ನು ಖರ್ಚು ಮಾಡಿಯೂ ಮತ್ತು ಪ್ರಧಾನ ಮಂತ್ರಿ ಹಾಗೂ ಗೃಹ ಸಚಿವರಿಬ್ಬರೂ ರಾಜ್ಯಾದ್ಯಂತ ಚುನಾವಣಾ ಬಹಿರಂಗ ಸಭೆಗಳನ್ನು ನಡೆಸಿದ್ದಾಗಿಯೂ ಬಿಜೆಪಿ ಸೋಲುಣ್ಣಬೇಕಾಯಿತು. ಅವರ ಆಕ್ರಮಣಕಾರಿ ಪ್ರಚಾರವನ್ನು ತಮ್ಮ ಸಾಂಸ್ಕೃತಿಕ ಬದುಕಿನ ಮೇಲಿನ ದಾಳಿ ಹಾಗೂ ಬಂಗಾಳದ ಮೇಲೆ ಹಿಂದುತ್ವವನ್ನು ಹೇರುವ ಪ್ರಯತ್ನ ಎಂದು ಪಶ್ಚಿಮ ಬಂಗಾಳದ ಜನರು ಕಂಡುಕೊಂಡರು. ಬಿಜೆಪಿಯನ್ನು ಸೋಲಿಸಲು ಟಿಎಂಸಿ ಮಾತ್ರವೇ ಉತ್ತಮ ಸಾಧನವಾಗಬಹುದು ಎಂದು ಜನ ಯೋಚಿಸಿದರು. ಬಿಜೆಪಿ ವಿರುದ್ಧದ ಪ್ರಚಾರ ಹಾಗೂ ಟಿಎಂಸಿಯ ಹತ್ತು ವರ್ಷಗಳ ಆಡಳಿತ ಮತ್ತು ಭಯೋತ್ಪಾದಕ ರಾಜಕೀಯದ ವಿರುದ್ಧದ ನಮ್ಮ ಪ್ರಚಾರದ ಹೊರತಾಗಿಯೂ, ಜನರು ಸಂಯುಕ್ತ ಮೋರ್ಚಾವನ್ನು ಒಂದು ಪರ್ಯಾಯವೆಂದು ಪರಿಗಣಿಸಲಿಲ್ಲ.

ಪಶ್ಚಿಮ ಬಂಗಾಳದ 17ನೇ ವಿಧಾನಸಭೆಯು ಟಿಎಂಸಿ ಮತ್ತು ಬಿಜೆಪಿ ನಡುವೆ ಧೃವೀಕರಣಗೊಂಡಿದೆ. ಬಿಜೆಪಿಯು ಪಶ್ಚಿಮ ಬಂಗಾಳದ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿರುವುದು ಭವಿಷ್ಯದಲ್ಲಿ ಅಪಾಯದ ಸೂಚನೆಯಾಗಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಗಣನೀಯ ಗೆಲುವು ಪಡೆದು ಮುಖ್ಯ ಶಕ್ತಿಯಾಗಿ ಹೊರಹೊಮ್ಮಿ ರಾಜಕೀಯವಾಗಿ ಎರಡು ಧೃವಗಳಾಗಿರುವುದನ್ನು ಈ ಫಲಿತಾಂಶಗಳು ಸ್ವಾಭಾವಿಕವಾಗಿ ಬಲಪಡಿಸಿವೆ. ಆಗಿನ ಚುನಾವಣೆ ಮತ್ತು ನಂತರದ ಚುನಾವಣೆಗಳ ಪ್ರಚಾರದಲ್ಲಿ ಸ್ಪರ್ಧೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನದು; ಪ್ರಧಾನ ಮತ್ತು ಮುಖ್ಯ ಮಂತ್ರಿಯ ನಡುವಿನದು, ಆದಕಾರಣ ಬಿಜೆಪಿ ಮತ್ತು ಟಿಎಂಸಿ ನಡುವಿನದು ಎಂದು ಬಿಂಬಿಸಲಾಗಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಒಂದು ವಿಧಾನಸಭಾ ವಿಭಾಗದಲ್ಲಿಯೂ ಸಿಪಿಐ(ಎಂ) ಬಹುಮತವನ್ನು ಪಡೆಯಲಿಲ್ಲ. ಬಿಜೆಪಿ ಮತ್ತು ಟಿಎಂಸಿ ನಡುವಿನ ತೀವ್ರ ಧೃವೀಕರಣವು ಇತರ ರಾಜಕೀಯ ಶಕ್ತಿಗಳನ್ನು ನಿರ್ಬಂಧಿಸಿತ್ತು ಎನ್ನುವುದು ಸ್ಪಷ್ಟವಾಗಿತ್ತು.

2019ರ ಚುನಾವಣೆಯಲ್ಲಿ ಹೊರಹೊಮ್ಮಿದ ರಾಜಕೀಯ ಶಕ್ತಿಗಳ ಪರಸ್ಪರ ಸಂಬಂಧಗಳು ಬದಲಾಗಿಲ್ಲ ಎಂದು ಪಕ್ಷದ ರಾಜ್ಯ ಸಮಿತಿಯು ಈಗಿನ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸಲು ಶುರುವಾದಾಗ ಮಾಡಿದ ತನ್ನ ಅಂದಾಜಿನಲ್ಲಿ ನಿರ್ಧಾರಕ್ಕೆ ಬಂದಿತ್ತು. ಈ ಫಲಿತಾಂಶಗಳು ಅದನ್ನು ದೃಢೀಕರಿಸಿದವು. ಆದರೆ ನಮ್ಮ ಮುಂದಿರುವ ಪ್ರಶ್ನೆ, 2019 ಮತ್ತು 2021ರ ನಡುವೆ ಈ ರಾಜಕೀಯ ಶಕ್ತಿಗಳ ಪರಸ್ಪರ ಸಂಬಂಧಗಳನ್ನು ನಾವು ಬದಲಿಸಲಾಗಲಿಲ್ಲ ಏಕೆ?

ಸಿಪಿಐ(ಎಂ) ನಮ್ಮ ಚಿಹ್ನೆಯ ಮೇಲೆಯೇ 138 ಸ್ಥಾನಗಳಿಗೆ ಸ್ಪರ್ಧಿಸಿತು. ನಮಗೆ ಕೇವಲ ಶೇಕಡಾ 4.73 ಮತ ಮಾತ್ರ ದೊರೆಯಿತು. ಸಂಯುಕ್ತ ಮೋರ್ಚಾಕ್ಕೆ ಶೇಕಡಾ 9.9 ಮತಗಳು ಬಂದವು. ಅವುಗಳಲ್ಲಿ ಎಡರಂಗವು ಶೇಕಡಾ 5.6 ಮತಗಳನ್ನು, ಕಾಂಗ್ರೆಸ್ 2.3% ಮತಗಳನ್ನು ಮತ್ತು ಐ.ಎಸ್.ಎಫ್. 1.38% ಮತಗಳನ್ನು ಪಡೆದವು.

2016ರ ವಿಧಾನಸಭಾ ಚುನಾವಣೆಗಳಲ್ಲಿ, ಎಡ ರಂಗವು 32 ಸ್ಥಾನಗಳನ್ನು ಪಡೆದಿತ್ತು. ಈಗ ಅವುಗಳಲ್ಲಿ 23 ಸ್ಥಾನಗಳನ್ನು ಟಿಎಂಸಿ ಮತ್ತು 9 ಸ್ಥಾನಗಳನ್ನು ಬಿಜೆಪಿ ಪಡೆಯಿತು. 2016 ರಲ್ಲಿ ಕಾಂಗ್ರೆಸ್ 44 ಸ್ಥಾನಗಳನ್ನು ಪಡೆದಿತ್ತು. ಅದರಲ್ಲಿ ಈಗ 2021ರಲ್ಲಿ 29 ಸ್ಥಾನಗಳನ್ನು ಟಿಎಂಸಿ ಮತ್ತು ಬಿಜೆಪಿ ಉಳಿದ 15 ಸ್ಥಾನಗಳನ್ನು ಪಡೆಯಿತು.

ಎಡರಂಗದ ಮತವು 2016ಕ್ಕೆ ಹೋಲಿಸಿದರೆ 21.5% ಕುಸಿಯಿತು. 2019ರ ಲೋಕಸಭಾ ಚುನಾವಣೆಯಲ್ಲಿ ಎಡರಂಗವು 7.4% ಮತ ಗಳಿಸಿತ್ತು. ಈ ವಿಧಾನಸಭಾ ಚುನಾವಣೆಯಲ್ಲಿ ಅದು 5.6% ಗೆ ಇಳಿದಿದೆ. ಈ ಬಾರಿ ಸ್ಥಾನ ಹೊಂದಾಣಿಕೆಯ ಕಾರಣ ನಾವು ಕಡಿಮೆ ಸ್ಥಾನಗಳಿಗೆ ಸ್ಪರ್ಧಿಸಿದ್ದೆವು. 2021ರಲ್ಲಿ, ನಾವು 138 ಸ್ಥಾನಗಳಿಗೆ ಸ್ಪರ್ಧಿಸಿ 4.73% ಮತ ಗಳಿಸಿದೆವು.

ಕೆಲವು ಪ್ರಶ್ನೆಗಳು

ಈ ಹಿಂದೆ ಗಮನಿಸಿದಂತೆ, ಈ ಫಲಿತಾಂಶಗಳು ಆಘಾತಕಾರಿಯಾಗಿವೆ. ರಾಜ್ಯ ನಾಯಕತ್ವವು ಈಗಾಗಲೇ ಇದರ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಪಕ್ಷವು ಒಂದು ಗಂಭೀರ ಸ್ವಯಂವಿಮರ್ಶಾತ್ಮಕ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕು. ಈ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಕರ್ತವ್ಯ ಕೇಂದ್ರ ಸಮಿತಿಯದಾಗಿದೆ.

ಈ ಫಲಿತಾಂಶಗಳನ್ನು ಅನುಸರಿಸಿ, ಪೊಲಿಟ್ ಬ್ಯೂರೋವು ತನ್ನ ಮೇ 5, 2021ರ ಸಭೆಯ ನಂತರ ಪಶ್ಚಿಮ ಬಂಗಾಳ ರಾಜ್ಯ ಸಮಿತಿಗೆ ಒಂದು ಟಿಪ್ಪಣಿಯನ್ನು ಕಳಿಸಿ ಪರಾಮರ್ಶೆಯನ್ನು ಮಾಡುವಾಗ ಕೆಲವು ಪ್ರಮುಖ ಅಂಶಗಳನ್ನು ಪರಿಶೀಲಿಸಬೇಕು ಎಂದು ಅವರನ್ನು ಕೇಳಿಕೊಂಡಿತು. ರಾಜ್ಯ ಸಮಿತಿಯು ತನ್ನ ಪ್ರಾಥಮಿಕ ಪರಿಶೀಲನೆಯಲ್ಲಿ ಪಿಬಿ ಟಿಪ್ಪಣಿಯಲ್ಲಿದ್ದ ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಆದಾಗ್ಯೂ, ಕೆಲವು ಅಂಶಗಳನ್ನು ಹೆಚ್ಚು ಕೂಲಂಕುಶವಾಗಿ ಗಮನಿಸಬೇಕಾದ ಅಗತ್ಯವಿದೆ. ಇಡೀ ಪಕ್ಷವನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಈ ಅಂಶಗಳ ಬಗ್ಗೆ ಕೇಂದ್ರ ಸಮಿತಿಯು ತೀರ್ಮಾನಕ್ಕೆ ಬರಬೇಕಿದೆ. ಪಶ್ಚಿಮ ಬಂಗಾಳದ ಈ ಆಘಾತಕಾರಿ ಫಲಿತಾಂಶದ ಪರಿಣಾಮವನ್ನು ಪಕ್ಷವು ದೇಶಾದ್ಯಂತ ಎಲ್ಲಾ ಕಡೆಯಲ್ಲಿಯೂ ಎದುರಿಸುತ್ತಿರುವುದರಿಂದ ಇದು ಬಹಳ ಮಹತ್ವದ್ದು. ಆದಕಾರಣ ಈ ಪರಿಶೀಲನೆಯು ಪಕ್ಷದ ಪಶ್ಚಿಮ ಬಂಗಾಳ ಘಟಕಕ್ಕೆ ಮುಖ್ಯವಾಗಿ ಸಂಬಂಧಿಸಿದ್ದಾದರೂ, ಇಡೀ ಪಕ್ಷಕ್ಕೆ ಇದು ಮಹತ್ವದ ವಿಚಾರ.

ಮತ್ತೊಂದು ಕಾರಣಕ್ಕೆ ಕೂಡ ಇದು ಅಗತ್ಯವಾಗಿದೆ. ಪಶ್ಚಿಮ ಬಂಗಾಳವು ದೇಶದ ಪ್ರಜಾಪ್ರಭುತ್ವ ಚಳುವಳಿಯ ಮುಂದುವರಿದ ಗಡಿಕಾವಲು ಎಂದು ಪಕ್ಷವು ಯಾವಾಗಲೂ ಹೇಳುತ್ತಾ ಬಂದಿದೆ. ಈ ಸ್ಥಾನವನ್ನು ಮತ್ತೆ ಪಡೆಯಬೇಕು ಮತ್ತು ಅದನ್ನು ಮಹತ್ವದ ಅಂಶಗಳ ಮೇಲೆ ಒಂದು ಸಾಮೂಹಿಕ ಐಕ್ಯ ತಿಳುವಳಿಕೆಯ ಆಧಾರದಲ್ಲಿ ಮತ್ತೆ ಪಡೆಯಬೇಕು.

ನಮ್ಮ ಸಾಮೂಹಿಕ ನೆಲೆಯಲ್ಲಿ ತೀವ್ರ ಇಳಿಕೆ:

2008ರಲ್ಲಿ ಪ್ರಾರಂಭವಾದ ನಮ್ಮ ಸಾಮೂಹಿಕ ನೆಲೆ ಹಾಗೂ ಸಾಮಾಜಿಕ ಬೆಂಬಲಿಗರಲ್ಲಿನ ತೀವ್ರ ಅವನತಿಯು ಮುಂದುವರಿಯುತ್ತಿರುವ ಸಂಗತಿಯು ಪ್ರಮುಖ ಅಂಶವಾಗಿದ್ದು ಆ ಕುರಿತು ಒಂದು ಗಂಭೀರ ಸ್ವಯಂವಿಮರ್ಶಾತ್ಮಕ ಆತ್ಮಾವಲೋಕನದ ಅಗತ್ಯವಿದೆ. ಪಕ್ಷವು ಆಗಿನಿಂದಲೂ ಪಕ್ಷದ ಮಹಾಧಿವೇಶನವನ್ನೂ ಒಳಗೊಂಡಂತೆ ಹಲವಾರು ಹಂತಗಳಲ್ಲಿ ಈ ಅವನತಿಯನ್ನು ವಿಮರ್ಶೆ ಮಾಡಿದೆ ಮತ್ತು ಸರಿಪಡಿಸಬೇಕಾದ ಕೆಲವು ಕಾರಣಗಳನ್ನೂ ಗುರುತಿಸಿದೆ. ಪಕ್ಷದ ಸಂಘಟನಾ ಪ್ಲೀನಂ ಕೂಡ ಈ ಅವನತಿಯನ್ನು ತಡೆಯಲು ಹಾಗೂ ತಿರುಗುಮುರುಗುಗೊಳಿಸಲು ಕೈಗೊಳ್ಳಬೇಕಾದ ವಿವರವಾದ ಕ್ರಮಗಳನ್ನು ಗುರುತಿಸಿತು. ಆದರೆ, ಈ ತೀರ್ಮಾನಗಳನ್ನು ನಾವು ಯಶಸ್ವಿಯಾಗಿ ಜಾರಿಮಾಡಲಾಗಿಲ್ಲ ಎಂಬುದನ್ನು ಈ ಫಲಿತಾಂಶಗಳು ಎತ್ತಿ ತೋರಿಸುತ್ತಿವೆ. ಪಕ್ಷವು ಈ ತೀರ್ಮಾನಗಳನ್ನು ಏಕೆ ಅಂತರ್ಗತ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ ಎನ್ನುವ ಬಗ್ಗೆ ಸ್ವಯಂವಿಮರ್ಶಾತ್ಮಕ ಆತ್ಮಾವಲೋಕನದ ಪ್ರಕ್ರಿಯೆಯನ್ನು ಮುಂದುವರಿಸಬೇಕು ಮತ್ತು ಕಾರಣಗಳನ್ನು ಪತ್ತೆಹಚ್ಚಲು ಮತ್ತು ಈ ಪರಿಸ್ಥಿತಿಯಲ್ಲಿನ ತಪ್ಪುಗಳನ್ನು ತಿದ್ದಿ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಲು ಮುಂಬರುವ ಪಕ್ಷದ ಮಹಾಧಿವೇಶನದ ಅವಕಾಶವನ್ನು ಬಳಸಿಕೊಳ್ಳಬೇಕು.

2008ರ ನಂತರದ ಈ ಅವಧಿಯಲ್ಲಿ ನಮ್ಮ ಪಕ್ಷವು ಫ್ಯಾಸಿಸ್ಟ್ ತೆರನ ದಾಳಿಗಳ ಮೂಲಕ ತೀವ್ರತರದ ದಬ್ಬಾಳಿಕೆಯನ್ನು ಎದುರಿಸಬೇಕಾಯಿತು. ಈ ದಾಳಿಗಳ ವಿರುದ್ಧ ಪ್ರತಿರೋಧಗಳಿದ್ದವು. 2011 ಮತ್ತು 2018ರ ಅವಧಿಯಲ್ಲಿ ನಾವು 746 ಸಂಗಾತಿಗಳನ್ನು ಕಳೆದುಕೊಂಡೆವು. ಈ ಅವಧಿಯಲ್ಲಿ, ಒಂದು ಲಕ್ಷದ ಎರಡು ಸಾವಿರಕ್ಕೂ ಹೆಚ್ಚಿನ ನಮ್ಮ ಪಕ್ಷದ ಸದಸ್ಯರುಗಳು ಹಾಗೂ ಹಿತೈಷಿಗಳನ್ನು ಅವರ ಮನೆಗಳಿಂದ ಓಡಿಸಲಾಗಿತ್ತು ಮತ್ತು ಅವರನ್ನು ನೋಡಿಕೊಳ್ಳಲು ಪಕ್ಷವು ನಗರ ಪ್ರದೇಶಗಳಲ್ಲಿ ವ್ಯವಸ್ಥೆ ಮಾಡಬೇಕಾಯಿತು. 1,30,000 ಕ್ಕೂ ಹೆಚ್ಚು ಸದಸ್ಯರು ಹಾಗೂ ಹಿತೈಷಿಗಳ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಹಿಂಸೆ, ಕಿರುಕುಳಗಳನ್ನು ನೀಡಲಾಗಿದೆ. ಈ ಭಯೋತ್ಪಾದಕ ಹಾಗೂ ಹಿಂಸಾತ್ಮಕ ಪರಿಸ್ಥಿತಿಯು ನಮ್ಮ ಬಹುತೇಕ ಸಾಮೂಹಿಕ ಸಂಘಟನೆಗಳ ಸದಸ್ಯರ ಧೈರ್ಯಗೆಡಿಸಿತು.

ಈ ಅವಧಿಯಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಹಲವಾರು ದೊಡ್ಡ ಹೋರಾಟಗಳನ್ನು ನಡೆಸಿದವು, ರಾಜ್ಯ/ಕೇಂದ್ರ ಮಟ್ಟದ ಕರೆಗಳು ಹಾಗೂ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ದೊಡ್ಡ ಸಂಖ್ಯೆಯ ಜನರನ್ನು ಸಂಘಟಿಸಿದ್ದರು. ಬ್ರಿಗೇಡ್ ಮೈದಾನದಲ್ಲಿ ಹತ್ತು ಲಕ್ಷಕ್ಕೂ ಮೀರಿ ಜನರನ್ನು ಅಣಿನೆರೆಸಿ ಬಹಿರಂಗ ಸಭೆಗಳನ್ನು ನಡೆಸಲಾಗಿದೆ. ಆದರೂ ಇಷ್ಟು ದೊಡ್ಡ ಮಟ್ಟದ ಅಣಿನೆರೆಸುವಿಕೆ ಹಾಗೂ ಕಾರ್ಯಾಚರಣೆಗಳು ಉತ್ತಮ ಚುನಾವಣಾ ಫಲಿತಾಂಶವಾಗಿ ಏಕೆ ಪರಿವರ್ತನೆಯಾಗಲಿಲ್ಲ ಅಥವಾ ನಮ್ಮ ಸಾಮೂಹಿಕ ನೆಲೆಯಲ್ಲಿನ ಅವನತಿ ಏಕೆ ನಿಲ್ಲಲಿಲ್ಲ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ರಾಜ್ಯದಲ್ಲಿನ ಪರಿಸ್ಥಿತಿಯನ್ನು ನಿರ್ಣಯಿಸುವಾಗ ನಮ್ಮ ಸಾಮೂಹಿಕ ನೆಲೆಯಲ್ಲಿನ ಅವನತಿಗೆ ಕಾರಣವಾದ ಈ ಕೆಳಗಿನ ಎರಡು ಅಂಶಗಳನ್ನು

ಪುಟ 14 ನೋಡಿ

ನವಉದಾರವಾದದಿಂದ ವಿಮುಖಗೊಳ್ಳುತ್ತಿರುವ ಮೆಕ್ಸಿಕೋ



ಒಬ್ರಾಡರ್, ಮೆಕ್ಸಿಕೋದಲ್ಲಿ ನವಉದಾರವಾದಕ್ಕೆ ವಿಮುಖತೆಯನ್ನು ತೋರಿಸುವ ಹಲವು ಆರ್ಥಿಕ ಬದಲಾವಣೆಗಳನ್ನು ಜಾರಿಗೊಳಿಸುತ್ತಿದ್ದಾರೆ. ನವಉದಾರವಾದಿ ಕಾರ್ಯಸೂಚಿಯನ್ನು ಬುಡಮೇಲು ಮಾಡುವಲ್ಲಿ ಎಷ್ಟರಮಟ್ಟಿಗೆ ಅವರು ಯಶಸ್ವಿಯಾಗುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಅವರ ಯೋಜನೆಯನ್ನು ಹಳಿ ತಪ್ಪಿಸುವುದು ಸಾಮ್ರಾಜ್ಯಶಾಹಿಗೆ ಅಷ್ಟು ಸುಲಭವಲ್ಲ. ಜನರು ಒಗ್ಗಟ್ಟಾಗಿದ್ದರೆ ಮತ್ತು ಒಗ್ಗಟ್ಟಿನ ಮೂಲಕ ರಾಜಕೀಯ ಐಕ್ಯತೆಯನ್ನು ಸಾಧಿಸಿದರೆ, ಅದರ ಎಲ್ಲಾ ಕುತಂತ್ರಗಳನ್ನು ಸೋಲಿಸಬಹುದು. ನವಉದಾರವಾದವನ್ನು ಜಯಿಸುವುದು ನಮ್ಮಂತಹ ದೇಶಗಳಿಗೆ ತುರ್ತು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮೆಕ್ಸಿಕೋದಲ್ಲಿ ಜರುಗುತ್ತಿರುವ ವಿದ್ಯಮಾನಗಳು ಭಾರತಕ್ಕೆ ಪಾಠಗಳಾಗಲಿವೆ.


ಪ್ರೊ, ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಮೆಕ್ಸಿಕೋದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಲೋಪೆಜ್ ಒಬ್ರಾಡರ್ ತಮ್ಮ ಉದ್ಘಾಟನಾ ಭಾಷಣದಲ್ಲಿಯೇ ನವಉದಾರವಾದವನ್ನು ಒಂದು "ಆಪತ್ತು" ಮತ್ತು "ವಿಪತ್ತು" ಎಂದು ವರ್ಣಿಸಿದ್ದರು. 'ಮೊರೆನಾ' ಎಂಬ ಅವರ ಎಡಪಂಥೀಯ ರಾಜಕೀಯ ಪಕ್ಷವು ತನ್ನ ಕಾರ್ಯಕ್ರಮದಲ್ಲಿ "ಜಾಗತಿಕ ಆರ್ಥಿಕ ಬಿಕ್ಕಟ್ಟು ನವಉದಾರವಾದಿ ಮಾದರಿಯ ವೈಫಲ್ಯವನ್ನು ಬಯಲುಮಾಡಿದೆ. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಹೇರಿದ ಆರ್ಥಿಕ ನೀತಿಗಳಿಂದಾಗಿ ನಿಧಾನಗತಿಯ ಬೆಳವಣಿಗೆಯ ದೇಶಗಳ ಪೈಕಿ ಮೆಕ್ಸಿಕೊ ಕೂಡ ಒಂದು" ಎಂದು ಹೇಳಿತ್ತು. ಈ ಕಾರಣದಿಂದಾಗಿಯೇ ಮೋರೆನಾ ಪಕ್ಷದ ಕಾರ್ಯಕ್ರಮವು "ವಿದೇಶಿ ಹಸ್ತಕ್ಷೇಪವಿಲ್ಲದ ಅಭಿವೃದ್ಧಿಯನ್ನು ಸಾಧಿಸುವ ಜವಾಬ್ದಾರಿಯನ್ನು ಪ್ರಭುತ್ವವು ವಹಿಸಿಕೊಳ್ಳಬೇಕು" ಎಂದು ಸೂಚಿಸಿತ್ತು.

ಈ ಕಣ್ಣೋಟದಿಂದ ಒಬ್ರಾಡರ್, ನವಉದಾರವಾದಕ್ಕೆ ವಿಮುಖತೆಯನ್ನು ತೋರಿಸುವ ಹಲವು ಆರ್ಥಿಕ ಬದಲಾವಣೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಕಳೆದ ಕೆಲವು ದಶಕಗಳಿಂದಲೂ ಆ ದೇಶದ ನಾಯಕತ್ವಕ್ಕೆ ಸಂಪೂರ್ಣವಾಗಿ ಅಪಥ್ಯವಾಗಿದ್ದ ನಿಯಂತ್ರಣ ನೀತಿಗಳ ಆಡಳಿತವನ್ನು ಪುನಃ ತರುತ್ತಿದ್ದಾರೆ. ಅವರು ಈ ಉದ್ಧಟತನವನ್ನು ಪಾಶ್ಚಿಮಾತ್ಯ ಪತ್ರಿಕೆಗಳು ಖಂಡಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಲಂಡನ್ ಮೂಲದ 'ದಿ ಎಕನಾಮಿಸ್ಟ್' ಪಾಕ್ಷಿಕವಂತೂ "ಮೆಕ್ಸಿಕೋದ ಹುಸಿ ವಿಮೋಚಕ" ಎಂಬ ಶೀರ್ಷಿಕೆಯಡಿಯಲ್ಲಿ ತನ್ನ ಮೇ ಅಂತ್ಯದ ಸಂಚಿಕೆಯ ಮುಖಪುಟದಲ್ಲಿ ಒಬ್ರಾಡರ್ ಅವರ ಚಿತ್ರವನ್ನು ಇರಿಸಿ ಅವರ ಈ ಧೈರ್ಯವನ್ನು ಮೂದಲಿಸಿದೆ.

ನವಉದಾರವಾದವು ಜಾಗತಿಕ ಅರ್ಥವ್ಯವಸ್ಥೆಯನ್ನು ಸ್ಥಗಿತತೆಗೆ ತಂದಿರುವ ಬಗ್ಗೆ ಅರಿತಿರುವ ಪಶ್ಚಿಮ ದೇಶಗಳ ಮಾಧ್ಯಮಗಳ ಈ ರೀತಿಯ ದಾಳಿಯ ಬಗ್ಗೆ ಒಂದು ಗಮನ ಸೆಳೆಯುವ ಸಂಗತಿಯನ್ನು ಹೇಳುವುದಾದರೆ, ಪಾಶ್ಚಿಮಾತ್ಯ ನಗರ–ಪ್ರಧಾನ (ಮೆಟ್ರೋಪಾಲಿಟನ್) ಅರ್ಥವ್ಯವಸ್ಥೆಗಳು ನವಉದಾರವಾದಿ ಆಳ್ವಿಕೆಯಿಂದ ದೂರ ಸರಿದಾಗ ಈ ಮಾಧ್ಯಮಗಳು ಸಹಾನುಭೂತಿ ವ್ಯಕ್ತಪಡಿಸುತ್ತವೆ; ಆದರೆ, ಮೂರನೆಯ ಜಗತ್ತಿನ ದೇಶಗಳು ನವಉದಾರವಾದದಿಂದ ದೂರ ಸರಿದರೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸುವ ರೀತಿಯಲ್ಲಿ ಬೊಬ್ಬಿರಿಯುತ್ತವೆ. ಇದು ಕೇವಲ ಇಬ್ಬಂದಿ ಮನೋಭಾವದ ವಿಷಯವಲ್ಲ. ಇದು, 'ಮೆಟ್ರೋಪಾಲಿಟನ್ ಅರ್ಥವ್ಯವಸ್ಥೆಗಳ ಹಣದುಬ್ಬರ–ಮುಕ್ತ ಚೇತರಿಕೆಗೆ ಮೂರನೆಯ ಜಗತ್ತಿನ ದೇಶಗಳ ಆದಾಯದ ಕುಗ್ಗುವಿಕೆಯು ಅಗತ್ಯವೆಂದು ಪರಿಗಣಿಸುವ ಸಾಮ್ರಾಜ್ಯಶಾಹಿ ವಿದ್ಯಮಾನಗಳಿಗೆ ಒಂದು ಜ್ವಲಂತ ಉದಾಹರಣೆಯಾಗುತ್ತದೆ, ದಕ್ಷಿಣ ಏಷ್ಯಾ ಅಥವಾ ಸಹರಾ–ಕೆಳಗಿನ ಆಫ್ರಿಕಾದ ದೇಶಗಳಿಗಿಂತ ಹೆಚ್ಚಿನ ತಲಾ ಆದಾಯವನ್ನು ಹೊಂದಿದ್ದರೂ ಸಹ, ಮೆಕ್ಸಿಕೊ ಇನ್ನೂ ಮೂರನೆಯ ಜಗತ್ತಿನ ಒಂದು ಭಾಗವೇ. ತೈಲ ಉತ್ಪಾದಕ ದೇಶವಾಗಿರುವುದರಿಂದ, ನಿಜಕ್ಕೂ ಅದು ಮೂರನೆಯ ಜಗತ್ತಿನ ಒಂದು ಪ್ರಮುಖ ಭಾಗವೇ.

ವಾಸ್ತವವಾಗಿ, ತೈಲ ವಲಯದಲ್ಲಿ ಒಬ್ರಾಡರ್ ಅವರು ಜಾರಿಗೊಳಿಸಿದ ಸುಧಾರಣೆಗಳು ಮಹತ್ವಪೂರ್ಣವಾಗಿವೆ. ತೈಲ ವಲಯವನ್ನು ಮತ್ತಷ್ಟು ಖಾಸಗೀಕರಣಗೊಳಿಸುವುದು ಅಂತಾರಾಷ್ಟ್ರೀಯ ಬಂಡವಾಳದ ಬೇಡಿಕೆಯಾಗಿದ್ದರೂ ಸಹ, ಒಬ್ರಾಡರ್ ಸರ್ಕಾರವು ತದ್ವಿರುದ್ಧ ದಿಕ್ಕಿನಲ್ಲಿ – ಅದನ್ನು ಮರು–



ರಾಷ್ಟ್ರೀಕರಣ ಮಾಡುವತ್ತ – ಸಾಗಿದೆ. ಈ ನಿಟ್ಟಿನಲ್ಲಿ, ರಾಷ್ಟ್ರೀಯ ಇಂಧನ–ಸರಬರಾಜು ವ್ಯವಸ್ಥೆಯು ತೈಲವನ್ನು ಖಾಸಗಿ ತೈಲ ಕಂಪನಿಗಳಿಂದ ಖರೀದಿಸುವ ಬದಲು ಸರ್ಕಾರಿ ಸ್ವಾಮ್ಯದ ಪೆಮೆಕ್ಸ್ ಕಂಪನಿಯಿಂದ ಖರೀದಿಸುವುದನ್ನು ಕಡ್ಡಾಯಗೊಳಿಸಿದೆ. ತೈಲ ಅನ್ವೇಷಣೆಯಲ್ಲಿಯೂ ಸಹ ಪ್ರಮುಖವಾಗಿ ವಿದೇಶಿ ಖಾಸಗಿ ಕಂಪನಿಗಳಿಗೆ ತೆರೆದಿಟ್ಟಿದ್ದ ತೈಲ ಅನ್ವೇಷಣಾ ಹಕ್ಕುಗಳ ಹರಾಜುಗಳನ್ನು ನಿಲ್ಲಿಸಿದೆ.

ದೇಶೀಯ ತೈಲ ಸಂಸ್ಕರಣಾ ಸಾಮರ್ಥ್ಯದ ವಿಸ್ತರಣೆಯನ್ನು ಮೆಕ್ಸಿಕೊ ನಾಲ್ಕು ದಶಕಗಳಿಂದಲೂ ನಿಲ್ಲಿಸಿದೆ. ಹಿಂದೆ ಕಚ್ಚಾ ತೈಲವನ್ನು ಸಂಸ್ಕರಿಸಲು ಅದನ್ನು ಅಮೇರಿಕಾಗೆ ಕಳುಹಿಸುತ್ತಿತ್ತು. ಒಬ್ರಾಡರ್ ಸರ್ಕಾರವು ಪೆಮೆಕ್ಸ್ ನೇತೃತ್ವದಲ್ಲಿ ಮೆಕ್ಸಿಕೋದಲ್ಲೇ ಹೊಸ ಸಂಸ್ಕರಣಾ ಸಾಮರ್ಥ್ಯವನ್ನು ಸ್ಥಾಪಿಸಿತು. ಅದಕ್ಕಾಗಿ ಸರ್ಕಾರದಿಂದ ಆರ್ಥಿಕ ನೆರವು ಕೊಡಲಾಗುತ್ತಿದೆ. ಹೀಗಾಗಿ ತೈಲ ವಲಯಕ್ಕೆ ಸಂಬಂಧಿಸಿದ ಪ್ರತಿಯೊಂದು ಚಟುವಟಿಕೆಯಲ್ಲೂ, ತೈಲ ಅನ್ವೇಷಣೆಯಿಂದ ಹಿಡಿದು ಅದನ್ನು ಹೊರತೆಗೆದು ಸಂಸ್ಕರಿಸುವುದರ ವರೆಗೂ ಎಲ್ಲ ಹಂತಗಳಲ್ಲೂ ವಿದೇಶಿ ಖಾಸಗಿ ಹಿತಾಸಕ್ತಿಗಳನ್ನು ಕೊನೆಗೊಳಿಸಿದ ಒಬ್ರಾಡರ್ ಸರ್ಕಾರವು ಮೆಕ್ಸಿಕನ್ ಪ್ರಭುತ್ವದ ಪಾತ್ರವನ್ನು ವಿಸ್ತರಿಸಿದೆ.

ಈ ಕ್ರಮಗಳು ಆರ್ಥಿಕವಾಗಿಯೂ ಪರಿಣಾಮ ಹೊಂದಿವೆ. ತೈಲ ಮಾರಾಟದ ಮೂಲಕ ಪೆಮೆಕ್ಸ್ ಗಳಿಸಿದ ಲಾಭವು ರಾಜ್ಯದ ಬೊಕ್ಕಸಕ್ಕೆ ಬರುತ್ತದೆ. ಪೆಮೆಕ್ಸ್ ವಹಿವಾಟಿನ ಗಾತ್ರವು ಚಿಕ್ಕದಾಗಿದ್ದರೆ ಮತ್ತು ಅದರ ಕಡೆಯಿಂದ ಬರುವ ಲಾಭವು ಎಷ್ಟು ಕಡಿಮೆ ಇರುತ್ತದೆಯೊ ಅಷ್ಟುಮಟ್ಟಿಗೆ ಸರ್ಕಾರವು ತನ್ನ ಖರ್ಚು ವೆಚ್ಚಗಳಿಗಾಗಿ ಇತರ ಆದಾಯ ಮೂಲಗಳನ್ನು ಅವಲಂಬಿಸ ಬೇಕಾಗುತ್ತದೆ. ಆದಾಯದ ಇನ್ನೊಂದು ಮೂಲವೆಂದರೆ, ದೇಶೀಯವಾಗಿ ಉತ್ಪಾದಿಸಿದ ತೈಲದ ಮೇಲಿನ ತೆರಿಗೆಯೇ (ಭಾರತದಲ್ಲಿ ಮೋದಿ ಸರ್ಕಾರವು ಇದನ್ನೇ ಮಾಡುತ್ತಿದೆ). ಮೆಕ್ಸಿಕೋದ ತೈಲ ಉದ್ಯಮದ ಖಾಸಗೀಕರಣವು ತೈಲದ ಮೇಲೆ ಹೆಚ್ಚು ತೆರಿಗೆಗಳನ್ನು ಹೇರುವುದು ಎಂದಾಗಿದೆ. ಹಾಗಾಗಿ, ಮೆಕ್ಸಿಕೊ ಪ್ರಮುಖ ತೈಲ ಉತ್ಪಾದಕ ದೇಶವಾಗಿದ್ದರೂ (2019 ರಲ್ಲಿ ವಿಶ್ವ ತೈಲ ಒಟ್ಟು ಉತ್ಪಾದನೆಯ ಶೇ.2 ರಷ್ಟನ್ನು ಉತ್ಪಾದಿಸಿತ್ತು) ಅದರ ದೇಶೀಯ ತೈಲ ಬೆಲೆಯು ಇಡೀ ಉತ್ತರ ಅಮೆರಿಕಾ ಖಂಡದಲ್ಲೇ ಅತಿ ಹೆಚ್ಚಿನದಾಗಿತ್ತು. ದೀರ್ಘಕಾಲದಿಂದಲೂ ಹೆಚ್ಚಿನ ತೈಲ ಬೆಲೆಗಳನ್ನು ಒಬ್ರಾಡರ್ ವಿರೋಧಿಸುತ್ತಿದ್ದರು ಮತ್ತು ತೈಲ ವಲಯದಲ್ಲಿ ಸಾರ್ವಜನಿಕ ಒಡೆತನದ ವಿಸ್ತರಣೆಯು ಅವರ ಆ ವಿರೋಧಕ್ಕೆ ಇಂಬು ನೀಡಿದೆ.

ನವಉದಾರವಾದಿ ನೀತಿಗಳನ್ನು ಒಬ್ರಾಡರ್ ಪೂರ್ಣವಾಗಿ ಬದಲಾಯಿಸಿರುವುದು ತೈಲ ವಲಯದಲ್ಲಿ ಮಾತ್ರವಲ್ಲ. ವಿದೇಶಿ ಕಂಪನಿಗಳಿಗೆ, ಅದರಲ್ಲೂ ವಿಶೇಷವಾಗಿ ಕೆನಡಾದ ಕಂಪೆನಿಗಳಿಗೆ ನೀಡಿದ್ದ ಗಣಿಗಾರಿಕೆ ರಿಯಾಯಿತಿಗಳನ್ನು ನಿಲ್ಲಿಸಲಾಗಿದೆ. ಮತ್ತು, ಮೆಕ್ಸಿಕೋದ ಲಿಥಿಯಂ ನಿಕ್ಷೇಪಗಳನ್ನು ರಾಷ್ಟ್ರೀಕರಣಗೊಳಿಸುವ ಇಂಗಿತವನ್ನು ಒಬ್ರಾಡರ್ ವ್ಯಕ್ತಪಡಿಸಿದ್ದಾರೆ.

ಮೆಕ್ಸಿಕೋದ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣವನ್ನು ಮರಳಿ ಪಡೆಯುವ ಪ್ರಯತ್ನಗಳ ಜೊತೆಗೆ, ಒಬ್ರಾಡರ್ ಸರ್ಕಾರವು ಮೆಕ್ಸಿಕೋದ ಕೇಂದ್ರೀಯ ಬ್ಯಾಂಕ್ ಮೇಲಿನ ನಿಯಂತ್ರಣವನ್ನು ಮರಳಿ ಪಡೆಯಲು ಯೋಜಿಸುತ್ತಿದೆ. ಕೇಂದ್ರೀಯ ಬ್ಯಾಂಕ್‌ನ ಗವರ್ನರ್‌ನ್ನು ಸರ್ಕಾರವು ನಾಮಮಾತ್ರವಾಗಿ ನೇಮಿಸುತ್ತದೆಯಾದರೂ, ಈ ಹುದ್ದೆಗೆ ನೇಮಕಗೊಂಡ ವ್ಯಕ್ತಿಯು ಸಾಮಾನ್ಯವಾಗಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಒಪ್ಪಿಗೆಯಾಗುವಂತಹ ವ್ಯಕ್ತಿಯೇ ಆಗಿರುತ್ತಾನೆ. ಅಂತಹ ವ್ಯಕ್ತಿಯು ಅನುಸರಿಸುವ ಹಣಕಾಸು ನೀತಿಯು ಆರ್ಥಿಕ ಬೆಳವಣಿಗೆಗಿಂತಲೂ ಹೆಚ್ಚಿನ ಆದ್ಯತೆಯನ್ನು ಹಣದುಬ್ಬರ ನಿಯಂತ್ರಣಕ್ಕೆ ನೀಡುತ್ತದೆ. ಅಂಥಹ ಹಣಕಾಸು ನೀತಿಯನ್ನು ಟೀಕಿಸಿದಾಗ, ಹಣದುಬ್ಬರವನ್ನು ನಿರ್ಲಕ್ಷಿಸಬೇಕು ಎಂಬುದು ಅದರ ಅರ್ಥವಲ್ಲ. ಹಣದುಬ್ಬರವನ್ನು ವಿಭಿನ್ನವಾಗಿ ನಿಭಾಯಿಸಬೇಕು ಎಂಬುದೇ ಈ ಟೀಕೆಯ ಉದ್ದೇಶ. ಬೆಳವಣಿಗೆಯನ್ನು ಕಡಿತಗೊಳಿಸುವ ಬಿಗಿ ಹಣಕಾಸು ನೀತಿಯ ಬದಲಾಗಿ, ಹಣದುಬ್ಬರದ ಬಗ್ಗೆ ಒಂದು ಪರ್ಯಾಯ ದೃಷ್ಟಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈ ಅಂಶವು ಈಗ ಲ್ಯಾಟಿನ್ ಅಮೆರಿಕಾದಲ್ಲಿ ಬಿಸಿ ಚರ್ಚೆಯ ವಿಷಯವಾಗಿದೆ. ಹಾಗಾಗಿ, ಅದರ ಬಗ್ಗೆ ಕೆಲವು ಅಂಶಗಳನ್ನು ತಿಳಿದುಕೊಳ್ಳುವುದು ಅವಶ್ಯವಾಗುತ್ತದೆ.

ಮೂರನೆಯ ಜಗತ್ತಿನ ದೇಶಗಳ ಆರ್ಥಿಕ ಬೆಳವಣಿಗೆಯ ವೇಗವು ಹಲವಾರು ನೈಜ ಸಂರಚನಾ ಅಡೆ ತಡೆಗಳಿಂದ ನಿರ್ಬಂಧಿಸಲ್ಪಟ್ಟಿದೆ, ನಿಜ. ಈ ಅಡೆ ತಡೆಗಳು ಮೂಲತಃ ಕೃಷಿ ವಲಯದಿಂದ ಉದ್ಭವಿಸುತ್ತವೆ, ಅಲ್ಲಿ ಉತ್ಪಾದನೆಯು ಮಂದಗತಿಯಲ್ಲಿರುತ್ತದೆ. ಅದರ ಹೆಚ್ಚಳಕ್ಕೆ ಭೂ ಸುಧಾರಣೆಗಳು, ಲಾಗುವಾಡುಗಳ ಒದಗಿಸುವಿಕೆ ಮುಂತಾದ ಕ್ರಮಗಳ ಮೂಲಕ ಪ್ರಭುತ್ವದ ಪ್ರಜ್ಞಾಪೂರ್ವಕ ಹಸ್ತಕ್ಷೇಪದ ಅಗತ್ಯವಿರುತ್ತದೆ. ಹಾಗಾಗಿ ಆರ್ಥಿಕ ಬೆಳವಣಿಗೆಯ ದರವನ್ನು ಹೆಚ್ಚಿಸುವ ಪ್ರಯತ್ನಗಳು ಕೃಷಿ ವಲಯದಿಂದ ಉದ್ಭವಿಸುವ ಸಂರಚನಾ ಅಡೆ ತಡೆಗಳಿಂದಾಗಿ ತಕ್ಷಣವೇ ಹಣದುಬ್ಬರಕ್ಕೆ ಕಾರಣವಾಗುತ್ತವೆ. ಹಣದುಬ್ಬರವು ತಲೆ ಎತ್ತಿದ ಕೂಡಲೇ ಅದರ ನಿಯಂತ್ರಣವೇ ಒಂದು ಮುಖ್ಯ ಉದ್ದೇಶವಾದರೆ, ಅಂತಹ ನಿಯಂತ್ರಣ ಕ್ರಮಗಳು ಆರ್ಥಿಕ ಬೆಳವಣಿಗೆ ದರವನ್ನು ಕಡಿತಗೊಳಿಸುವಲ್ಲಿ ಪರಿಣಮಿಸುತ್ತವೆ. ಅಂದರೆ, ಅರ್ಥವ್ಯವಸ್ಥೆಯು ಶಾಶ್ವತವಾಗಿ ಕಡಿಮೆ ಆದಾಯದ ಬಲೆಯೊಳಗೇ ಉಳಿಯುತ್ತದೆ.

ಕಡಿಮೆ ಆದಾಯದ ಬಲೆಯಿಂದ ಹೊರಬರಬೇಕು ಎಂದಾದರೆ, ಹಣಕಾಸು ನೀತಿ ಮತ್ತು ಒಟ್ಟಾರೆ ಆರ್ಥಿಕ ನೀತಿಯು ಕೆಲವು ಕಟ್ಟುಪಾಡುಗಳಿಗೆ ಬಂಧಿಯಾಗಿರಬಾರದು. ಅದರ ಗುರಿ ಬೆಳವಣಿಗೆಯನ್ನು ಉತ್ತೇಜಿಸುವುದಾಗಿರಬೇಕು. ಹಣದುಬ್ಬರವು ತಲೆ ಎತ್ತಿದ್ದೇ ಆದರೆ, ಅದರಿಂದ ಆರ್ಥಿಕ ಬೆಳವಣಿಗೆಗೆ ಅಪಾಯವಾಗದಂತೆ, ಪಡಿತರ ಮತ್ತು "ಪೂರೈಕೆ ನಿರ್ವಹಣೆ" ಮತ್ತು ಇತರ ನೇರ ಕ್ರಮಗಳ ಮೂಲಕ ಉತ್ಪಾದನೆಯನ್ನು ಹೆಚ್ಚಿಸಿ, ಹಣದುಬ್ಬರವನ್ನು ಪ್ರತ್ಯೇಕವಾಗಿಯೇ ನಿಭಾಯಿಸಬೇಕಾಗುತ್ತದೆ.

ನವಉದಾರವಾದಿ ಅವಧಿಯಲ್ಲಿ, ಇತರ ಎಲ್ಲಾ ಉದ್ದೇಶಗಳಿಗಿಂತ ಹೆಚ್ಚಿನ ಆದ್ಯತೆಯನ್ನು ಹಣದುಬ್ಬರ–ನಿಯಂತ್ರಣಕ್ಕೆ ನೀಡಲಾಗುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ. ಅಂದರೆ, ಕಡಿಮೆ ಆದಾಯದ ಬಲೆಗೆ ಸಿಕ್ಕಿಕೊಂಡಿರುವ ಅರ್ಥವ್ಯವಸ್ಥೆಗಳು ಅಲ್ಲಿಯೇ ಉಳಿಯುತ್ತವೆ. ಇದಕ್ಕೆ ಕಾರಣ, ಕೆಲವು ತಪ್ಪು ಅಕಡೆಮಿಕ್ ತಿಳುವಳಿಕೆಗಳಲ್ಲ. ಸಾಮ್ರಾಜ್ಯಶಾಹಿಯ ಕಾರ್ಯವಿಧಾನವೇ ಹಾಗಿದೆ. ಈ ಕಾರ್ಯವಿಧಾನದ ಪ್ರಕಾರವಾಗಿ, ನಗರ–ಪ್ರಧಾನ (ಮೆಟ್ರೋಪಾಲಿಟನ್) ಅರ್ಥವ್ಯವಸ್ಥೆಗಳ ಅವಶ್ಯಕತೆಗಳಿಗಾಗಿ, ಹಾಲಿ ಕೃಷಿ ಸರಕುಗಳನ್ನು (ಅಥವಾ ಇತರ ಬೆಳೆಗಳನ್ನು, ಭೂ ಬಳಕೆಯನ್ನು ಈ ಬೆಳೆಗಳನ್ನು ಬೆಳೆಯುವತ್ತ ತಿರುಗಿಸಿ), ಅವುಗಳ ಅನಗತ್ಯ ಬೆಲೆ–ಹೆಚ್ಚಳಗಳಿಲ್ಲದೆ ಪೂರೈಕೆ ಮಾಡುವಂತೆ ಒತ್ತಾಯಿಸಿ, ಮೂರನೆಯ ಜಗತ್ತಿನ ದೇಶಗಳ ಆದಾಯವನ್ನು ಸಂಕುಚಿತಗೊಳಿಸಲಾಗುತ್ತದೆ. ನವಉದಾರವಾದಿ ಯುಗದಲ್ಲಿ ಹಣಕಾಸು ನೀತಿಯ ಬಗ್ಗೆ ನಿರುಪದ್ರವಿಯಂತೆ ತೋರುವ ಈ ಚರ್ಚೆಯು ನಿಜಕ್ಕೂ ಮೂರನೆಯ ಜಗತ್ತಿನ ದೇಶಗಳ ಮೇಲೆ ಸಾಮ್ರಾಜ್ಯಶಾಹಿಯು ಹೇರಿದ ಆಡಳಿತವನ್ನು ಕಿತ್ತೊಗೆಯುವುದರ ಬಗ್ಗೆಯೇ. ಇದುವೇ ಅಧ್ಯಕ್ಷ ಒಬ್ರಾಡರ್ ಕೈಗೊಂಡಿರುವ ಕಾರ್ಯ. ಅದಕ್ಕಾಗಿಯೇ, ಒಬ್ರಾಡರ್ ಅವರನ್ನು "ಪ್ರಭುತ್ವವಾದ, ರಾಷ್ಟ್ರವಾದ ಮತ್ತು 1970 ರ ದಶಕದ ಹಳೆನೆನಪುಗಳಿಗೆ" ಅಂಟಿಕೊಂಡಿರುವ ವ್ಯಕ್ತಿ (ದಿ ಎಕನಾಮಿಸ್ಟ್ ಪತ್ರಿಕೆಯ ಮಾತುಗಳಲ್ಲಿ) ಎಂಬುದಾಗಿ ಪಾಶ್ಚಾತ್ಯ ಮಾಧ್ಯಮಗಳು ಅಪಹಾಸ್ಯ ಮಾಡುತ್ತಿವೆ.

ನವಉದಾರವಾದಿ ಕಾರ್ಯಸೂಚಿಯನ್ನು ಬುಡಮೇಲು ಮಾಡುವಲ್ಲಿ ಎಷ್ಟರಮಟ್ಟಿಗೆ ಒಬ್ರಾಡರ್ ಯಶಸ್ವಿಯಾಗುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಆದರೂ, ಅವರ ಈ ಯೋಜನೆಯನ್ನು ಹಳಿ ತಪ್ಪಿಸುವುದು ಸಾಮ್ರಾಜ್ಯಶಾಹಿಗೆ ಅಷ್ಟು ಸುಲಭವಲ್ಲ. ಮೆಕ್ಸಿಕೋದ ಅಧ್ಯಕ್ಷೀಯ ಚುನಾವಣೆಗೆ ಇನ್ನೂ ಸ್ವಲ್ಪ ಸಮಯ ಇದೆಯಾದರೂ, ಶಾಸಕಾಂಗ ಮತ್ತು ಪ್ರಾಂತೀಯ ರಾಜ್ಯಪಾಲ ಹುದ್ದೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಒಬ್ರಾಡರ್ ಗಣನೀಯ ಜನಬೆಂಬಲವನ್ನು ಹೊಂದಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಅದಕ್ಕಿಂತಲೂ ಮುಖ್ಯವಾಗಿ, ಮೆಕ್ಸಿಕನ್ ಕ್ರಾಂತಿಯಿಂದ ಹೊರಬಂದು ದಶಕಗಳ ಕಾಲ ಮೆಕ್ಸಿಕೊವನ್ನು ಆಳಿದ ಪಿಆರ್‌ಐ ನಂತಹ ಇತರ ರಾಜಕೀಯ ಪಕ್ಷಗಳ ಬೆಂಬಲವನ್ನು ಅವರು ಸಂಪಾದಿಸಿಕೊಂಡಿದ್ದಾರೆ. ಇಂದಿನ ಇಡೀ ಮೆಕ್ಸಿಕನ್ ಎಡಪಂಥೀಯರು ಒಂದು ಕಾಲದಲ್ಲಿ ಪಿಆರ್‌ಐ ನಲ್ಲಿದ್ದವರೇ(ಬೋಲ್ಶೆವಿಕ್ ಕ್ರಾಂತಿಯನ್ನನುಸರಿಸಿ ಎಂ.ಎನ್. ರಾಯ್ ಸ್ಥಾಪಿಸಿದ ಮೆಕ್ಸಿಕೊ ಕಮ್ಯುನಿಸ್ಟ್ ಪಕ್ಷ ಈಗ ಅಸ್ತಿತ್ವದಲ್ಲಿಲ್ಲ). ಆದ್ದರಿಂದ, ಲುಲಾ ವಿರುದ್ಧ ಬ್ರೆಜಿಲ್‌ನಲ್ಲಿ ಸಂಘಟಿಸಿದಂತೆ ಸಂಸದೀಯ ಕ್ಷಿಪ್ರಕ್ರಾಂತಿಯನ್ನು ಸಂಘಟಿಸುವುದು ಸಾಮ್ರಾಜ್ಯಶಾಹಿಗೆ ಕಷ್ಟವೇ ಸರಿ.

ಮೆಕ್ಸಿಕೋದಲ್ಲಿ ಜರುಗುತ್ತಿರುವ ವಿದ್ಯಮಾನಗಳು ಭಾರತಕ್ಕೆ ಪಾಠಗಳಾಗಲಿವೆ. ನಗರ–ಪ್ರಧಾನ ಅರ್ಥವ್ಯವಸ್ಥೆಗಳು ನವಉದಾರವಾದದಿಂದ ಹೊರಬರಲು ಪ್ರಯತ್ನಿಸುತ್ತಿವೆ. ಆದರೆ, ಅದೇ ಪ್ರಯತ್ನವನ್ನು ಮಾಡ ಬಯಸುವ ಮೂರನೆಯ ಜಗತ್ತಿನ ದೇಶಗಳ ಮೇಲೆ ದಾಳಿ ಮಾಡುತ್ತವೆ. ಮತ್ತು ಈ ಉದ್ದೇಶಕ್ಕಾಗಿ ಎಲ್ಲಾ ಅಸ್ತ್ರಗಳನ್ನು ಬಳಸುತ್ತವೆ, ಅಂತಹ ಪ್ರಯತ್ನಗಳ ವಿರುದ್ಧ ತೀವ್ರ–ಬಲಪಂಥೀಯ ರಾಜಕೀಯ ಪಕ್ಷಗಳನ್ನು ಬೆಂಬಲಿಸುವುದರಿಂದ ಹಿಡಿದು, ಜನರ ನಡುವೆ ವಿಭಜನೆಗಳನ್ನು ಸೃಷ್ಟಿಸುವುದರಿಂದ ಹಿಡಿದು ಕ್ಯೂಬಾದ ವಿಷಯದಲ್ಲಿ ಮಾಡುತ್ತಿರುವಂತೆ ಆರ್ಥಿಕ ಸಮರವನ್ನು (ಮತ್ತು ಕೆಲವು ಕಠಿಣ ಪರಿಸ್ಥಿತಿಗಳಲ್ಲಿ ಮಿಲಿಟರಿ ಹಸ್ತಕ್ಷೇಪವನ್ನೂ) ಬಳಸುತ್ತವೆ. ಆದರೆ, ಜನರು ಒಗ್ಗಟ್ಟಾಗಿದ್ದರೆ ಮತ್ತು ಒಗ್ಗಟ್ಟಿನ ಮೂಲಕ ರಾಜಕೀಯ ಐಕ್ಯತೆಯನ್ನು ಸಾಧಿಸಿದರೆ, ಈ ಎಲ್ಲಾ ಕುತಂತ್ರಗಳನ್ನು ಸೋಲಿಸಬಹುದು. ನವಉದಾರವಾದವನ್ನು ಜಯಿಸುವುದು ನಮ್ಮಂತಹ ದೇಶಗಳಿಗೆ ತುರ್ತು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಜನರನ್ನು ಸಜ್ಜುಗೊಳಿಸಬೇಕು. □

ಬಿಜೆಪಿಯ 'ನಯಾ ಕಾಶ್ಮೀರ' ದಾವೆಯನ್ನು ಜಮ್ಮು-ಕಾಶ್ಮೀರದ ಎಲ್ಲರೂ ಪ್ರಶ್ನಿಸುತ್ತಿದ್ದಾರೆ

ಕಲಮು 370 ಮತ್ತು 35ಎ ಮರುಸ್ಥಾಪನೆಗೆ ಮತ್ತೊಮ್ಮೆ ಗುಪ್ಕರ್ ಮೈತ್ರಿಕೂಟದ ಆಗ್ರಹ



ಎರಡು ತಿಂಗಳ ಹಿಂದೆ ಪ್ರಧಾನ ಮಂತ್ರಿಗಳು ಜಮ್ಮು ಮತ್ತು ಕಾಶ್ಮೀರದ ನೇತಾರರನ್ನು ಭೇಟಿ ಮಾಡಿದಾಗ "ದಿಲ್ಲಿ ಕೀ ದೂರೀ' ಮತ್ತು 'ದಿಲ್ ಕೀ ದೂರೀ' ಎಂದೆಲ್ಲ ಬಹಳವಾಗಿ ಮಾತಾಡಿದರು. ಆದರೂ ಆಮೇಲೆ ಏನೂ ನಡೆದಿಲ್ಲ. ರಾಜ್ಯದ ಹತಾಶ ಜನಗಳಿಗೆ ಏನಾದರೂ ಪರಿಹಾರ ಒದಗಿಸುವ ಅಥವ ವಿಶ್ವಾಸ ಮೂಡಿಸುವ ಕ್ರಮಗಳನ್ನು ಕೈಗೊಂಡಿಲ್ಲ ಎಂದು ಆಗಸ್ಟ್ 24ರಂದು ನಡೆದ ಗುಪ್ಕರ್ ಘೋಷಣೆಯ ಜನತಾ ಮೈತ್ರಿಕೂಟ (ಪಿಎಜಿಡಿ)ತನ್ನ ವಿಸ್ತೃತ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದಲ್ಲಿ ಖೇದ ವ್ಯಕ್ತ ಪಡಿಸಿದೆ.

ಭಾರತದ ಸಂವಿಧಾನದ ಕಲಮು 370 ಮತ್ತು 35 ಎನ್ನು ರದ್ದುಪಡಿಸಿ ಈ ಚಾರಿತ್ರಿಕ ರಾಜ್ಯವನ್ನು ಕಳಚಿ ಹಾಕಿ ಕೇಂದ್ರ ಸರಕಾರ ಉಂಟು ಮಾಡಿರುವ ರಾಜಕೀಯ ನಿರ್ವಾತ ಮತ್ತು ಅನಿಶ್ಚಿತತೆ ಈಗಲೂ ಮುಂದುವರೆಯುತ್ತಿದೆ. ಅತ್ಯಂತ ದುರದೃಷ್ಟಕರ ಸಂಗತಿಯೆಂದರೆ, ಈ ರದ್ದತಿಗಳು ಸಂವಿಧಾನದ ಉಲ್ಲಂಘನೆ ಎಂದು ಅದಕ್ಕೆ ಸವಾಲು ಹಾಕಿದ ಅರ್ಜಿಎರಡು ವರ್ಷಗಳ ನಂತರವೂ ಸುಪ್ರಿಂ ಕೋರ್ಟಿನ ಮುಂದೆ ಹಾಗೆಯೇ ಉಳಿದುಕೊಂಡಿದೆ ಎಂದು ಈ ನಿರ್ಣಯ ಬೇಸರದಿಂದ ಗಮನಿಸಿದೆ.

ನಾಗರಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ದಮನ ನಿಲ್ಲದೆ ಸಾಗಿದೆ. ಕರಾಳ ಶಾಸನಗಳ ಅಡಿಯಲ್ಲಿ ನೂರಾರು ಜನ ಗಳ ಬಂಧನ ಇದುವರೆಗೂ ಆರೋಪ ಪಟ್ಟಿ ಹಾಕದೆಯೇ ಮುಂದುವರೆಯುತ್ತಿದೆ. ಈಗ "ಕಾನೂನು–ವ್ಯವಸ್ಥೆಯ , 'ಕಲ್ಲು ತೂರಾಟ'ದ ಕೇಸುಗಳಲ್ಲಿ ಸಿಲುಕಿಕೊಂಡವರಿಗೆ ಪಾಸ್‌ಪೋರ್ಟ್‌ಗಳಿಗೆ ಕ್ಲಿಯರೆನ್ಸ್ ಕೊಡಲಾಗುವುದಿಲ್ಲ ಎಂಬ ಹೊಸ ಆದೇಶವನ್ನು ಹೊರಡಿಸಲಾಗಿದೆ. ಈ ರೀತಿಯಲ್ಲಿ ಪೋಲೀಸ್ ರಿಪೋರ್ಟ್ ಹಾಕುವುದೇ ಅಪರಾಧಿಯೆಂಬ ತೀರ್ಪು ಎಂದು ಪರಿಗಣಿಸುವುದು ಸಹಜ ನ್ಯಾಯದ ನಿರಾಕರಣೆಯಾಗುತ್ತದೆ ಎಂದು ಪಿಎಜಿಡಿ ಹೇಳಿದೆ.

ಈ ಹಿಂದೆ ಇದ್ದ ರಾಜ್ಯದ ಖಾಯಂ ನಿವಾಸಿಗಳ ಸ್ಥಾನಮಾನವನ್ನು ಅರ್ಥಹೀನಗೊಳಿಸಲಾಗಿದೆ. ಈ ಮೂಲಕ ಉದ್ಯೋಗ ಮತ್ತು ಭೂಮಿ ಹಕ್ಕಿನ ರಕ್ಷಣೆಯನ್ನು ಇಲ್ಲವಾಗಿಸಿ ಅಭದ್ರತೆಯ ಭಾವನೆಯನ್ನು ಆಳಗೊಳಿಸಲಾಗಿದೆ.

ಈ ಪ್ರದೇಶದ ಅರ್ಥವ್ಯವಸ್ಥೆ ದಿನಗಳೆದಂತೆ ಇನ್ನೂ ಕೆಟ್ಟದಾಗುತ್ತಿದೆ. ಅಭಿವೃದ್ಧಿ, ಹೂಡಿಕೆ, ಉದ್ಯೋಗ ನಿರ್ಮಾಣದ ಸರಕಾರದ ಭರವಸೆಗಳೆಲ್ಲ ಹುಸಿಯಾಗಿವೆ. ಹೊಸ ಉದ್ಯೋಗಾವಕಾಶಗಳ ನಿರ್ಮಾಣ ಒತ್ತಟ್ಟಿಗಿರಲಿ, ದಿನಗೂಲಿಗಳು, ಹಂಗಾಮಿ ಕಾರ್ಮಿಕರು, ಸ್ಕೀಮ್ ಕೆಲಸಗಾರರು ಮುಂತಾದವರಿಗೆ ನಿಯಮಿತವಾಗಿ ಕೂಲಿ/ವೇತನ ಸಿಗುತ್ತಿಲ್ಲ, ಕೆಲವರಿಗಂತೂ ವೇತನವೇ ಸಿಗುತ್ತಿಲ್ಲ. ಕೃಷಿ, ತೋಟಗಾರಿಕೆ, ಪ್ರವಾಸೋದ್ಯಮ, ಕರಕುಶಲ ಉದ್ಯಮ, ಸಾರಿಗೆ ಎಲ್ಲವೂ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿವೆ.

ಆಗಸ್ಟ್ 2019ರ ನಂತರ ನಿರಂತರವಾಗಿ ನಿವಾಸಿ ಕಾಯ್ದೆಗಳು, ಮಾಧ್ಯಮಗಳ ಮೇಲೆ ನಿರ್ಬಂಧ, ನೌಕರರಿಗೆ ಬೆದರಿಕೆ, ಉದ್ಯೋಗದ ವಿಷಯದಲ್ಲಿ ತಾರತಮ್ಯದ ನಿಯಮಗಳು ಮುಂತಾದ ಸರ್ವಾಧಿಕಾರಶಾಹೀ ನಿರ್ದೇಶನಗಳನ್ನು ರಾಜ್ಯದ ಜನತೆಯ ಮೇಲೆ ಹೇರಲಾಗುತ್ತಿದೆ. ನೌಕರರನ್ನು ವಿಚಾರಣೆಯಿಲ್ಲದೆ ವಜಾ ಮಾಡಿ ಭಯದ ಭಾವನೆಯನ್ನು ಹುಟ್ಟಿಸಲಾಗುತ್ತಿದೆ. ಈಗ ಜನಗಳನ್ನು ನಿರ್ಬಲಗೊಳಿಸುವ ಮತ್ತೊಂದು ಕ್ರಮವಾಗಿ ಸ್ಥಳೀಯ ಅಧಿಕಾರಿಗಳನ್ನು ಬದಿಗೊತ್ತಲಾಗುತ್ತಿದೆ, ರಾಜ್ಯ ಕೇಡರನ್ನು ರದ್ದು ಮಾಡಲಾಗಿದೆ.

ಸರಕಾರ ಶಾಂತಿ ಮತ್ತು ಸಾಮಾನ್ಯ ಸ್ಥಿತಿ ನೆಲೆಸಿದೆ ಎನ್ನುತ್ತಿದೆ. ಆದರೆ ರಾಜಕೀಯ ಕಾರ್ಯಕರ್ತರೂ ಸೇರಿದಂತೆ ಕೊಲೆಗಳು ಅವ್ಯಾಹತವಾಗಿ ಸಾಗಿವೆ ಎಂದಿರುವ ಪಿಎಜಿಡಿ ನಿರ್ಣಯ ರಾಜಕೀಯ ಕಾರ್ಯಕರ್ತರು ಸೇರಿದಂತೆ ನಿಶ್ಶಸ್ತ್ರ ವ್ಯಕ್ತಿಗಳ ಕೊಲೆಗಳನ್ನು ಖಂಡಿಸಿದೆ.

ಕಾಶ್ಮೀರದಲ್ಲಿ ಮಾತ್ರವಲ್ಲ, ಜಮ್ಮುವಿನಲ್ಲೂ ಮತ್ತು ಲಡಾಖ್ ಪ್ರದೇಶದಲ್ಲೂ ಕೇಂದ್ರ ಸರಕಾರದ 'ಮತ್ತು ಸ್ಥಳೀಯ ಆಡಳಿತದ ಪ್ರಜಾಪ್ರಭುತ್ವ–ವಿರೋಧಿ ಕ್ರಮಗಳ ಪರಿಣಾಮವಾಗಿ ಜನಗಳಲ್ಲಿ ಅಸಂತೃಪ್ತಿ ಹೆಚ್ಚುತ್ತಿದೆ. ಈ ಎಲ್ಲ ಪ್ರದೇಶಗಳ ಜನಗಳೂ ಬಿಜೆಪಿಯ 'ನಯಾಕಾಶ್ಮೀರ್' ದಾವೆಯನ್ನು ಪ್ರಶ್ನಿಸುತ್ತಿದ್ದಾರೆ ಎಂಬುದನ್ನು ನಿರ್ಣಯ ಮೋದಿ ಸರಕಾರದ ಗಮನಕ್ಕೆ ತಂದಿದೆ.

ಆಗಸ್ಟ್ 5, 2019ರ ಮೊದಲು ಇದ್ದಂತಹ ರಾಜ್ಯದ ಸ್ಥಾನಮಾನವನ್ನು ಮತ್ತೆ ತರಬೇಕು, ಎಲ್ಲ ರಾಜಕೀಯ ಬಂಧಿಗಳನ್ನು ತಕ್ಷಣ ಬಿಡುಗಡೆ ಮಡಬೇಕು, ಕರಾಳ ಶಾಸನಗಳ ಬೇಕಾಬಿಟ್ಟಿ ಪ್ರಯೋಗವನ್ನು ಕೊನೆಗೊಳಿಸಬೇಕು ಎಂದು ಮತ್ತೊಮ್ಮೆ ಆಗ್ರಹಿಸಿರುವ ಗುಪ್ಕರ್ ಘೋಷಣೆಯ ಜನತಾ ಮೈತ್ರಿಕೂಟ, ಈ ಮೂರೂ ಪ್ರದೇಶಗಳ ಜನಗಳ, ಸಮುದಾಯಗಳ ಐಕ್ಯತೆ, ಸೌಹಾರ್ದತೆ ಮತ್ತು ಸೋದರತ್ವದ ಪರಂಪರೆಗಳನ್ನು ಎತ್ತಿಹಿಡಿಯುವ ದೃಢನಿರ್ಧಾರ ಮಾಡಿದೆ ಎನ್ನುತ್ತ ಎಲ್ಲ ಸಂದರ್ಭಗಳಲ್ಲೂ ಈ ಎಲ್ಲ ಜನಗಳ ಉತ್ತಮ ಭವಿಷ್ಯ ಹಾಗೂ ಘನತೆಯ ಬದುಕಿನ ಪರವಾಗಿಯೇ ನಿಲ್ಲುತ್ತದೆ ಎಂದು ಆಶ್ವಾಸನೆ ನೀಡಿದೆ.

ತಮಿಳುನಾಡು: ಹಣಕಾಸು ಕುರಿತ ಶ್ವೇತ ಪತ್ರ

ಪುಟ 11 ರಿಂದ

ನಿಭಾಯಿಸುವ ಸಾರ್ವಜನಿಕ ಖರ್ಚುಗಳಿಗೆ ಹಣಕಾಸು ಒದಗಿಸಲು ಶ್ರೀಮಂತರಿಂದ ಸಂಪನ್ಮೂಲಗಳನ್ನು ಪಡೆಯುವುದು ಒಂದು ಆದರ್ಶಪ್ರಾಯ ಸಂಗತಿ. ಆದಾಗ್ಯೂ, ರಾಜ್ಯ ಸರ್ಕಾರಗಳು ಒಕ್ಕೂಟ–ರಾಜ್ಯ ಹಣಕಾಸು ಸಂಬಂಧಗಳ ಸ್ವರೂಪದಿಂದ ಬಹಳ ನಿರ್ಬಂಧಿತವಾಗಿವೆ ಮತ್ತು ಎಫ್‌ಆರ್‌ಬಿಎಂ ಕಾಯಿದೆಯಂತಹ ನಿರ್ಬಂಧಕಾರೀ ಶಾಸನಗಳ ಒತ್ತಡಕ್ಕೆ ಒಳಗಾಗಿವೆ. ಈ ವಾಸ್ತವಗಳನ್ನು ಗುರುತಿಸಬೇಕಾಗಿದೆ, ಆದರೆ ಅವಕ್ಕೆ ದೀನವಾದಿ ಶರಣಾಗಬೇಕಾಗಿಲ್ಲ. ಅನ್ಯಾಯದ ಮತ್ತು ಅಸಮಾನ ವ್ಯವಸ್ಥೆಯ ವಿರುದ್ಧ ಜನರನ್ನು ಸಜ್ಜುಗೊಳಿಸುವ ಕಾರ್ಯವನ್ನೂ ಮರೆಯುವಂತಿಲ್ಲ!

ತಮಿಳುನಾಡು ಬಜೆಟ್

ಪಿಟಿಆರ್ ರವರು ಆಗಸ್ಟ್ 13 ರಂದು ರಾಜ್ಯ ಬಜೆಟ್ ಅನ್ನು ಮಂಡಿಸಿದರು. ಇದು ಪ್ರಸ್ತುತ ಹಣಕಾಸು ವರ್ಷದ ಉಳಿದ ತಿಂಗಳುಗಳವರೆಗೆ ಹಿಡಿದಿಟ್ಟುಕೊಳ್ಳುವ ಕಾರ್ಯಾಚರಣೆಯಾಗಿದೆ. ಆದರೆ ಇದು ಎಲ್ಲರ ಮೇಲೂ ತೆರಿಗೆ ಹೊರೆಗಳನ್ನು ಹಾಕಬೇಕು, 'ಜನಮರುಳು' ಎಂದು ಶಪಿಸಲಾಗುವ ಜನಕಲ್ಯಾಣ ಕ್ರಮಗಳನ್ನು ಕೊನೆಗೊಳಿಸಬೇಕು ಎಂಬ ನವ–ಉದರವಾದದ ಕೂಗುಗಳಿಗೆ ಮಣಿದಿಲ್ಲ ಎನ್ನುವುದು ಗಮನಾರ್ಹ. ಬಜೆಟ್ ನ ಒಂದು ಪ್ರಮುಖ ಲಕ್ಷಣವೆಂದರೆ ಪೆಟ್ರೋಲ್ ಮೇಲಿನ ರಾಜ್ಯ ತೆರಿಗೆಯನ್ನು ಕಡಿಮೆ ಮಾಡಿರುವುದು, ಪೆಟ್ರೋಲ್ ಬೆಲೆಯನ್ನು 3 ರೂ.ಗಳಷ್ಟು ಕಡಿಮೆ ಮಾಡಿರುವುದು, ರಾಜ್ಯವು ಎದುರಿಸುತ್ತಿರುವ ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ ಒಂದು ಅತ್ಯಂತ ದಿಟ್ಟ ಕ್ರಮ. ಇದು ಜನರಿಗೆ ಅಗತ್ಯವಾದ ಪರಿಹಾರವನ್ನು ಒದಗಿಸುತ್ತದೆ ಮತ್ತು ಈ ಮಹತ್ವದ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ತುದಿಗಾಲ ಮೇಲೆ ನಿಲ್ಲುವಂತೆ ಕೂಡ ಮಾಡುತ್ತದೆ. ಇದರಾಚೆಗೆ, ಇದು ಶ್ವೇತಪತ್ರದಲ್ಲಿ ಪ್ರಸ್ತಾಪಿಸಿದ ಸಪ್ರಶ್ನೆಗಳನ್ನು ಪರಿಶೀಲಿಸುವ ಕೆಲವು ಸಮಿತಿಗಳ ರಚನೆಯನ್ನು ಘೋಷಿಸಿದೆ. ಅರ್ಧ ವರ್ಷಕ್ಕಷ್ಟೇ ಸಂಬಂಧಿಸಿದ ಬಜೆಟ್‌ನಲ್ಲಿ, ಇದಕ್ಕಿಂತ ಹೆಚ್ಚಿನದನ್ನು ಮಾಡಲು ಅವಕಾಶವಿಲ್ಲ ಎಂದು ಸಚಿವರು ಭಾವಿಸಿರಬಹುದು.

ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಪ್ರತ್ಯೇಕವಾಗಿ ಮಂಡಿಸಿದ ಬಜೆಟ್ ನಿರಾಶಾದಾಯಕವಾಗಿತ್ತು. ಏಕೆಂದರೆ ಅದು ಭತ್ತ ಮತ್ತು ಕಬ್ಬಿಗೆ ಎಮ್‌ಎಸ್‌ಪಿಯಲ್ಲಿ ಸಣ್ಣ ಹೆಚ್ಚಳವನ್ನಷ್ಟ ಪ್ರಕಟಿಸಿದೆ ಮತ್ತು ಸಚಿವಾಲಯಕ್ಕೆ ಸಲ್ಲಿಸಿದ ರೈತರ ಕಲ್ಯಾಣಕ್ಕಾಗಿ ಹಲವು ಸಲಹೆಗಳನ್ನು ಕಡೆಗಣಿಸಿದೆ. ನಿರಾಶಾದಾಯಕವಾಗಿತ್ತು. ಅಲ್ಲದೆ ಗ್ರಾಮೀಣ ಆರ್ಥಿಕತೆಯ ಬಿಕ್ಕಟ್ಟಿನ ಸಮಯದಲ್ಲಿ ಕೃಷಿ ಕಾರ್ಮಿಕರ ಬೆಂಬಲಕ್ಕೆ ಯಾವುದೇ ಉಲ್ಲೇಖವಾಗಲೀ, ಕ್ರಮಗಳಾಗಲೀ ಇಲ್ಲ ಎಂಬುದು ಕೂಡ ನಿರಾಶಾದಾಯಕವಾಗಿದೆ. □

ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಗಳ ವಿಮರ್ಶೆ

ಪುಟ 12 ರಿಂದ

ಕಂಡುಕೊಂಡಿದೆ. ಜಾಗತಿಕ ಕೋವಿಡ್ ಮಹಾಸೋಂಕನ್ನು ಬಲಪಂಥೀಯ ಶಕ್ತಿಗಳು ತಮ್ಮ ಕ್ರೋಢೀಕರಣಕ್ಕೆ ಬಳಸಿಕೊಂಡಿರುವುದರಿಂದಾಗಿ ಈ ಬೆಳವಣಿಗೆ ಇನ್ನೂ ಗಟ್ಟಿಗೊಂಡಿದೆ. ಜನಾಂಗವಾದ, ಪರಕೀಯರ ದ್ವೇಷ ಮತ್ತಿತರ ಎಲ್ಲಾ ರೀತಿಯ ವಿಚ್ಛಿದ್ರಕಾರಿ ಶಕ್ತಿಗಳು ಜಾಗತಿಕವಾಗಿ ಬೆಳೆಯುತ್ತಿವೆ. ಭಾರತದಲ್ಲಿನ ಉನ್ಮತ್ತ ಕೋಮುವಾದ ಹಾಗೂ ಧೃವೀಕರಣ ಹೆಚ್ಚಾಗುತ್ತಿರುವುದಕ್ಕೆ ಜಾಗತಿಕ ಬೆಳವಣಿಗೆಗಳೂ ಪ್ರಭಾವ ಬೀರಿವೆ. ಬಂಗಾಳದಲ್ಲಿನ ಅದರ ಪ್ರಭಾವ ಮತ್ತು ಜಾತ್ಯತೀತವಾದದ ಶಕ್ತಿ ಕುಂದುತ್ತಿರುವುದು ಮತ್ತು ಅವು ನಮ್ಮ ಸಾಮೂಹಿಕ ನೆಲೆಯ ಮೇಲೆ ಪರಿಣಾಮ ಬೀರುತ್ತಿರುವ ಅಂಶವನ್ನು ನಾವು ಗಂಭೀರವಾಗಿ ಅಂದಾಜು ಮಾಡಬೇಕು ಮತ್ತು ಹಿಮ್ಮೆಟ್ಟಿಸಬೇಕು. ಆರ್.ಎಸ್.ಎಸ್./ಬಿಜೆಪಿಯ ಕೋಮುವಾದಿ ದಾಳಿಯನ್ನು ಎದುರಿಸುವ ಹೋರಾಟವು ನಮ್ಮ ಪಕ್ಷದ ಮಹಾಧಿವೇಶನವು ನಿರ್ಧರಿಸಿದಂತೆ ವಿವಿಧ ಹಂತಗಳಲ್ಲಿ, ಅಂದರೆ ಸೈದ್ಧಾಂತಿಕವಾಗಿ, ರಾಜಕೀಯವಾಗಿ. ಸಂಘಟನಾತ್ಮಕವಾಗಿ, ಸಾಂಸ್ಕೃತಿಕವಾಗಿ ಎಲ್ಲಾ ಹಂತಗಳಲ್ಲಿ ನಡೆಯಬೇಕು.

ಸರಿಯಾಗಿ ಪರಿಗಣಿಸಲಿಲ್ಲ:

ರಾಜಕೀಯ ಬಲಪಂಥದತ್ತ ಪಲ್ಲಟ:

ಈ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಆರ್.ಎಸ್.ಎಸ್. ತ್ವರಿತಗತಿಯಲ್ಲಿ ವಿಸ್ತರಣೆ ಆಯಿತು. ಆರ್.ಎಸ್.ಎಸ್. ಶಾಖೆಗಳ ಸಂಖ್ಯೆ ಮತ್ತು ಹಿಂದುತ್ವ ಕಾರ್ಯಸೂಚಿಯನ್ನು ಪ್ರಚಾರ ಮಾಡುವ ತೀವ್ರತರದ ಕೋಮು ಧೃವೀಕರಣ ಗಣನೀಯವಾಗಿ ಬೆಳೆಯಿತು. ಇದು 2014ರ ಲೋಕಸಭಾ ಚುನಾವಣೆಯ ನಂತರ ಮೋದಿ ಸರ್ಕಾರದ ಅಡಿಯಲ್ಲಿ ದೇಶಾದ್ಯಂತ ಆರ್.ಎಸ್.ಎಸ್./ಬಿಜೆಪಿಯ ಬೆಳವಣಿಗೆಯ ಭಾಗವಾಗಿದೆ. ಇದು ಹಿಂದುತ್ವ ಕೋಮು ಮತ ಬ್ಯಾಂಕ್‌ನ ಕ್ರೋಢೀಕರಣದ ಹಾಗೂ ಅಬ್ಬರದ ರಾಷ್ಟ್ರವಾದವನ್ನು ಬಡಿದೆಬ್ಬಿಸುವ ಪ್ರಕ್ರಿಯೆಗೆ ಕಾರಣವಾಯಿತು.

ಬಲಪಂಥೀಯ ರಾಜಕಾರಣದ ಕಡೆಗಿನ ಪಲ್ಲಟಕ್ಕೆ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮಗಳು ಕಾರಣ ಎಂಬುದನ್ನು ನಮ್ಮ ಪಕ್ಷದ 22ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಆ ಅಂಶಗಳ ವಿಶ್ಲೇಷಣೆಯಲ್ಲಿ

ನಮ್ಮ ಸಮಾಜದಲ್ಲಿನ ವರ್ಗ ಬದಲಾವಣೆಗಳು:

ಭಾರತೀಯ ಸಮಾಜದ ಮೇಲೆ ನವ–ಉದಾರೀಕರಣ ಸುಧಾರಣೆಯ ಮಾರ್ಗದ ಆಕ್ರಮಣಕಾರಿ ಅನುಸರಣೆಯ ಅಂಶವನ್ನು ಪಕ್ಷದ ಕೇಂದ್ರ ಸಮಿತಿಯು ಗಂಭೀರವಾಗಿ ತೆಗೆದುಕೊಂಡಿದೆ. ವಿವಿಧ ಕ್ಷೇತ್ರಗಳಲ್ಲಿನ ಈ ಬದಲಾವಣೆಗಳನ್ನು ಪತ್ತೆಹಚ್ಚಲು ಕೇಂದ್ರ ಸಮಿತಿಯು ನಿರ್ದಿಷ್ಟ ಆಯೋಗಗಳನ್ನು ರಚಿಸಿತು ಮತ್ತು ಈ ಆಯೋಗಗಳ ವರದಿಗಳನ್ನು ಕೇಂದ್ರ ಸಮಿತಿಯು ಚರ್ಚಿಸಿತು ಮತ್ತು ಅದರ ಆಧಾರದಲ್ಲಿ ಕೆಲವು ಸಂಘಟನಾ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. 2015ರ ಸಂಘಟನಾತ್ಮಕ ಪ್ಲೀನಂ ಅಂತಹ ಹಲವಾರು ಕ್ರಮಗಳಿಗೆ ಮೂರ್ತ ರೂಪ ಕೊಟ್ಟಿತು.

ನಿರ್ದಿಷ್ಟವಾಗಿ, ಪಶ್ಚಿಮ ಬಂಗಾಳವನ್ನೂ ಒಳಗೊಂಡಂತೆ ನಮ್ಮ ರಾಜ್ಯ ಸಮಿತಿಗಳು ಅದೇ ರೀತಿಯ ಪ್ರಯೋಗಗಳನ್ನು ಕೈಗೊಂಡವು. ಆದರೆ ನಮ್ಮ ಸಮಾಜದಲ್ಲಿ ಆಗುತ್ತಿರುವ ವರ್ಗ ಪಲ್ಲಟಗಳು ಮತ್ತು ಅದರ ಕಾರಣದಿಂದ ಪಕ್ಷದ ಸಂಘಟನೆ, ಘೋಷಣೆಗಳು ಹಾಗೂ ಜನರನ್ನು ಅದರಲ್ಲೂ ಬಹುಮುಖ್ಯವಾಗಿ ನಮ್ಮ ಬೆಂಬಲದ ಆಧಾರಶಿಲೆಗಳಾಗಿದ್ದ ಗ್ರಾಮೀಣ ಬಡವರನ್ನು ಅಣಿನೆರೆಸುವಲ್ಲಿನ ತಂತ್ರಗಳ ಮೇಲೆ ಉಂಟಾದ ಪರಿಣಾಮಗಳ ಕುರಿತ ಅಂತಹ ನಿರ್ದಿಷ್ಟ ಅಧ್ಯಯನಗಳ ಫಲಿತಾಂಶಗಳು ಪರಿಣಾಮಕಾರಿಯಾಗಿ ಸಿದ್ಧಿಸಲಿಲ್ಲ. ಈ ದೌರ್ಬಲ್ಯವನ್ನು ಈ ಕೂಡಲೇ ಸರಿಪಡಿಸಬೇಕು. ಇದರ ಪ್ರಭಾವವನ್ನು ಈ ಚುನಾವಣೆಯಲ್ಲಿ ಕೂಡ ಕಾಣಬಹುದಾಗಿದೆ, ಗ್ರಾಮೀಣ ಬಡವರು, ನಮ್ಮ ಸಮಾಜದ ಅಂಚಿನಲ್ಲಿರುವ ವಿಭಾಗಗಳವರು ಪಕ್ಷದಿಂದ ದೂರವಾಗಿಯೇ ಉಳಿದರು. ಇದನ್ನು ಸರಿಯಾಗಿ ನಿರ್ವಹಿಸಬೇಕು ಮತ್ತು ರಾಜಕೀಯ–ಸಂಘಟನಾತ್ಮಕ ಬದಲಾವಣೆಗಾಗಿ ನಿರ್ದಿಷ್ಟ ನಿರ್ದೇಶನವನ್ನು ನೀಡಬೇಕು.

(ಮುಂದುವರೆದ ಭಾಗ –ಮುಂದಿನ ಸಂಚಿಕೆಯಲ್ಲಿ)







ಪ್ರಕ್ಷುಬ್ಧ ಪಶ್ಚಿಮ ಏಶ್ಯಾ

(ಸಿಪಿಐ–ಎಂ ಕೇಂದ್ರ ಸಮಿತಿಯ ವರದಿಯ ಆಯ್ದ ಭಾಗಗಳು)

ಅನುವಾದ: **ನಾಗರಾಜ್ ನಂಜುಂಡಯ್ಯ**

ಮಹಾಸೋಂಕು ಮತ್ತು ಅದು ಉಂಟುಮಾಡಿದ ಆರ್ಥಿಕ ತೊಂದರೆಗಳು ಇಡೀ ಪಶ್ಚಿಮ ಏಷ್ಯಾ ಪ್ರದೇಶದ ಮೇಲೆ ಪರಿಣಾಮ ಬೀರಿದೆ. ವ್ಯಾಪಕ ನಿರುದ್ಯೋಗ, ಬೆಲೆ ಏರಿಕೆ ಮತ್ತು ಆರ್ಥಿಕ ಸಂಕಷ್ಟಗಳಿಂದಾಗಿ ಪ್ರತಿಭಟನೆಗಳು ಹೆಚ್ಚಾಗಿವೆ ಮತ್ತು ರಾಜಕೀಯ ಪ್ರಕ್ಷುಬ್ಧತೆ ಸೃಷ್ಟಿಯಾಗಿದೆ. ಇರಾಕ್, ಲೆಬನಾನ್, ಟುನೀಶಿಯಾ ಮತ್ತು ಇತರ ದೇಶಗಳಲ್ಲಿ ಇಂತಹದ್ದೇ ಪರಿಸ್ಥಿತಿ ಇದೆ. ಪ್ಯಾಲೆಸ್ಟೈನ್ ಮೇಲೆ ಇಸ್ರೇಲಿನ 'ವರ್ಣಬೇಧ' ವಂತೂ ಅವ್ಯಾಹತವಾಗಿ ಮುಂದುವರೆದಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಕಳೆದ ಆರು ತಿಂಗಳುಗಳಲ್ಲಿ ಪಶ್ಚಿಮ ಏಶ್ಯಾದ ಬೆಳವಣಿಗೆಗಳನ್ನು ಹೀಗೆ ಅರ್ಥೈಸುತ್ತದೆ. ಕಳೆದ ಆರು ತಿಂಗಳ ರಾಷ್ಟ್ರೀಯ ಅಂತರ್ರಾಷ್ಟ್ರೀಯ ವಿದ್ಯಮಾನಗಳ ಕುರಿತು ಅದು ಅಂಗೀಕರಿಸಿದ ರಾಜಕೀಯ ವರದಿಯ ಆಯ್ದ ಭಾಗಗಳು.

ಪ್ಯಾಲೆಸ್ಟೈನ್ ಮೇಲೆ ಇಸ್ರೇಲಿ ದಾಳಿ

ಪ್ಯಾಲೆಸ್ಟೈನ್ ನ ಗಾಜಾ ಮೇಲೆ ಇಸ್ರೇಲಿ ವಾಯುದಾಳಿ ಮುಂದುವರೆದಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಹಲವು ಪ್ಯಾಲೆಸ್ಟೈನ್ ನಾಗರಿಕರ ಸಾವಿಗೆ ಕಾರಣವಾಗುತ್ತಿದೆ. ಪೂರ್ವ ಜೆರುಸಲೆಮ್ ಅನ್ನು ಸಂಪೂರ್ಣವಾಗಿ ಆಕ್ರಮಿಸಿಕೊಳ್ಳುವ ಉದ್ದೇಶವನ್ನು ಇಸ್ರೇಲ್ ಹೊಂದಿದೆ ಮತ್ತು ಪ್ಯಾಲೆಸ್ಟೀನಿಯನ್ನರು ವಾಸಿಸುವ ಪ್ರದೇಶಗಳಲ್ಲಿ ಯಹೂದಿ ವಸಾಹತುಗಳ ನಿರ್ಮಾಣವನ್ನು ತೀವ್ರಗೊಳಿಸುತ್ತಿದೆ. ಶೇಖ್ ಜರಾ ನೆರೆಹೊರೆಯ ನಿವಾಸಿಗಳನ್ನು ಬಲವಂತವಾಗಿ ಹೊರಹಾಕುವ ಪ್ರಯತ್ನಗಳನ್ನು ಪ್ರತಿಭಟಿಸುತ್ತಿದ್ದವರ ಮೇಲೆ ಇಸ್ರೇಲ್ ಕ್ರೂರವಾಗಿ ದಾಳಿ ಮಾಡಿದೆ. ಮುಸ್ಲಿಮರ ಮೂರನೇ ಪವಿತ್ರ ದೇವಾಲಯವಾದ ಅಲ್–ಅಕ್ಸಾ ಮಸೀದಿ ಕಾಂಪೌಂಡ್ ಮೇಲೆ, ಅದೂ ಪವಿತ್ರ ರಂಜಾನ್ ಸಮಯದಲ್ಲಿ ಇಸ್ರೇಲಿ ಪಡೆಗಳು ದಾಳಿ ಮಾಡಿದವು ಈ ದಾಳಿಯಲ್ಲಿ ನೂರಾರು ಜನರು ಗಾಯಗೊಂಡರು. ಉಗ್ರ ಬಲಪಂಥೀಯ ನೆತನ್ಯಾಹು ನೇತೃತ್ವದ ಮಧ್ಯಂತರ ಸರ್ಕಾರವು ರಾಜಕೀಯ ಲಾಭಕ್ಕಾಗಿ ಈ ದಾಳಿಗಳನ್ನು ನಡೆಸಿತು.

ಪ್ರಧಾನ ಮಂತ್ರಿಯಾಗಿ ನೆತನ್ಯಾಹು ಉಚ್ಚಾಟನೆಯಾದರೂ ಮತ್ತು ನಾಫ್ತಾಲಿ ಬೆನೆಟ್ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದರೂ ಪ್ಯಾಲೆಸ್ಟೈನ್ ಕುರಿತು ಇಸ್ರೇಲಿನ ನೀತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇಸ್ರೇಲಿನಲ್ಲಿ ವಾಸಿಸುತ್ತಿರುವ ಪ್ಯಾಲೆಸ್ತೀನಿಯರಿಗೆ ಲಸಿಕೆಯನ್ನು ಸಹ ನಿರಾಕರಿಸಲಾಗಿದೆ. 1967 ಗಡಿಗಳು ಮತ್ತು ಪೂರ್ವ ಜೆರುಸಲೆಮ್ ಅನ್ನು ಪ್ಯಾಲೆಸ್ಟೈನ್ ರಾಜಧಾನಿಯಾಗಿ ಒಪ್ಪಿಕೊಳ್ಳುವ "ಎರಡು ದೇಶಗಳ ಪರಿಹಾರ"ವನ್ನು ಇಸ್ರೇಲ್ ಒಪ್ಪಿಕೊಳ್ಳದಿದ್ದರೆ ಮತ್ತು ಪಾಲಿಸದಿದ್ದರೆ ಶಾಂತಿ ನೆಲೆಸಲು ಸಾಧ್ಯವಿಲ್ಲ.

ಅರಬ್ ದೇಶಗಳ ನಿಲುವು

2020 ರಲ್ಲಿ, ನಾಲ್ಕು ಅರಬ್ ದೇಶಗಳಾದ ಯುನೈಟೆಡ್ ಅರಬ್ ಎಮಿರೇಟ್ಸ್, ಮೊರಾಕೊ, ಸುಡಾನ್ ಮತ್ತು ಬಹ್ರೇನ್ಗಳು ಅಮೆರಿಕದ ಲಾಭದಾಯಕ ವ್ಯವಹಾರಗಳ ಒತ್ತಾಯದಿಂದಾಗಿ ಇಸ್ರೇಲ್ ಜೊತೆಗಿನ ಸಂಬಂಧವನ್ನು ಸುಧಾರಿಸಿಕೊಂಡವು. ಇಸ್ರೇಲ್ ನೊಂದಿಗಿನ ಯುಎಇ ಸಂಬಂಧವನ್ನು ಸಾಮಾನ್ಯಗೊಳಿಸಲು ಅಬ್ರಹಾಂ ಒಪ್ಪಂದಗಳಿಗೆ ಸಹಿ ಮಾಡಲು ಅಮೆರಿಕ ದಲ್ಲಾಳಿ ಕೆಲಸ ಮಾಡಿದೆ. ಸೌದಿ ಅರೇಬಿಯಾ ಈ ಒಪ್ಪಂದಗಳಿಗೆ ಸಹಿ ಹಾಕದಿದ್ದರೂ, ನಿಧಾನವಾಗಿ ಇಸ್ರೇಲ್ನೊಂದಿಗೆ ತನ್ನ ಸಂಬಂಧವನ್ನು ಉತ್ತಮ ಪಡಿಸಿಕೊಳ್ಳುತ್ತಿದೆ. ಪ್ಯಾಲೆಸ್ಟೀನಿಯನ್ನರು ಈ ಎಲ್ಲಾ ಒಪ್ಪಂದಗಳಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ದೇಶಗಳು ಇಸ್ರೇಲಿನೊಂದಿಗೆ ಸಂಬಂಧವನ್ನು ಬೆಳೆಸಿಕೊಂಡಿರುವುದರಿಂದ, ಈ ದೇಶಗಳ ಯಾವುದೇ ಪ್ರಮುಖ ನಾಯಕರು ಗಾಜಾ ಮೇಲಿನ ಇಸ್ರೇಲಿ ದಾಳಿಯನ್ನು ದೃಢವಾಗಿ ಖಂಡಿಸಲಿಲ್ಲ. ಅದ್ದರಿಂದ ಪ್ಯಾಲೆಸ್ಟೈನ್ ಸ್ವತಂತ್ರ ದೇಶವಾಗಿ ರಚನೆಯಾದಾಗ ಮಾತ್ರ ಅರಬ್ ರಾಷ್ಟ್ರಗಳು ಇಸ್ರೇಲ್ ಜೊತೆ ಸಂಬಂಧವನ್ನು ಬೆಳಸಬೇಕು ಎಂಬ ಅರಬ್ ಶಾಂತಿ ಉಪಕ್ರಮದ ಉದ್ದೇಶವನ್ನು ಅಲ್ಲಗಳೆಯುತ್ತಿದ್ದಾರೆ.

ಶಿಯಾಗಳು ಮತ್ತು ಸುನ್ನಿಗಳ ನಡುವಿನ ಪಂಥೀಯ ವಿಭಜನೆಯನ್ನು ಅಮೆರಿಕ ಬಳಸಿಕೊಳ್ಳುತ್ತಿದೆ. ಶಿಯಾಗಳು ಬಹುಸಂಖ್ಯಾತರಾಗಿರುವ ಇರಾನ್ ದೇಶವನ್ನು ಸಾಮಾನ್ಯ ಶತ್ರು ಎಂದು ಬಿಂಬಿಸಿ ಪ್ಯಾಲೆಸ್ಟೈನ್ ಹಿತಾಸಕ್ತಿಗಳನ್ನು ಬಲಿಕೊಟ್ಟಾದರೂ ಇರಾನ್ ವಿರುದ್ಧ ಇತರರು ಇಸ್ರೇಲ್ ಜೊತೆ ಕೈಜೋಡಿಸುವಂತೆ ಮಾಡಲಾಗಿದೆ. ಈ ರೀತಿಯ ವಿಚ್ಛಿದ್ರಕಾರಿ ಕ್ರಮಗಳು ಪಶ್ಚಿಮ ಏಷ್ಯಾದ ದೇಶಗಳ ಒಳಗೆ ಮತ್ತು ದೇಶಗಳ ನಡುವೆ ಪಂಥೀಯ ಕಲಹವನ್ನು ಇನ್ನಷ್ಟು ತೀವ್ರಗೊಳಿಸುತ್ತವೆ.

ಇರಾನಿನಲ್ಲಿ ಹೊಸ ಅಧ್ಯಕ್ಷ ಮತ್ತು ಪರಮಾಣು ಮಾತುಕತೆ

ಇತ್ತೀಚೆಗೆ ಮುಕ್ತಾಯಗೊಂಡ ಚುನಾವಣೆಯಲ್ಲಿ ಇಬ್ರಾಹಿಂ ರೈಸಿ ಇರಾನಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಚುನಾವಣೆಯು ಕಡಿಮೆ ಮತದಾನವನ್ನು (ಶೇ. 49) ಕಂಡಿತು ಮತ್ತು ವಿಶ್ವಾಸಾರ್ಹ ಪರ್ಯಾಯದ ಅನುಪಸ್ಥಿತಿಯಲ್ಲಿ, ಉದ್ದೇಶಪೂರ್ವಕವಾಗಿ ಹಾಳು ಮಾಡಲಾದ, ಲಕ್ಷಾಂತರ ಮತಪತ್ರಗಳು ಆರ್ಥಿಕ ಸಂಕಷ್ಟಗಳ ವಿರುದ್ಧ ಅಸಮಾಧಾನದ, ಆಹಾರ ಮತ್ತು ಇಂಧನದ ಬೆಲೆಗಳ ಏರಿಕೆಯ ವಿರುದ್ಧದ ಅಭಿವ್ಯಕ್ತಿಯಾಗಿ ಕಂಡವು.

ಏಪ್ರಿಲ್ ನಲ್ಲಿ ಆರಂಭವಾದ ಇರಾನ್ ಜೊತೆಗಿನ ವಿಯೆನ್ನಾ ಪರಮಾಣು ಮಾತುಕತೆಗಳನ್ನು, ಇಬ್ರಾಹಿಂ ರೈಸಿ ಅಧ್ಯಕ್ಷರಾದ ನಂತರ, ಸ್ಥಗಿತಗೊಳಿಸಿ ಆಗಸ್ಟ್ 3 ರ ವರೆಗೆ ಮುಂದೂಡಲಾಗಿದೆ. ಒಪ್ಪಂದಕ್ಕೆ ಅಮೆರಿಕ ಬದ್ಧತೆಯನ್ನು ತೋರಬೇಕೆಂದು ಇರಾನ್ ಒತ್ತಾಯಿಸುತ್ತಿದೆ ಮತ್ತು ಟ್ರಂಪ್ ಆಡಳಿತವು ಮಾಡಿದಂತೆ ಒಪ್ಪಂದದಿಂದ ಹಿಂದೆ ಸರಿಯುವುದಿಲ್ಲ ಎಂದು ಖಾತರಿಪಡಿಸುವಂತೆ ಕೇಳುತ್ತಿದೆ. ಅಮೆರಿಕ ಹೇರಿರುವ ನಿರ್ಬಂಧಗಳನ್ನು ತಕ್ಷಣವೇ ತೆಗೆದುಹಾಕಬೇಕೆಂದು ಇರಾನ್ ಬಯಸುತ್ತಿದೆ.

ರಾಜಕೀಯ ಪ್ರಕ್ಷುಬ್ಧತೆ

ಮಹಾಸೋಂಕು ಮತ್ತು ಅದು ಉಂಟುಮಾಡಿದ ಆರ್ಥಿಕ ತೊಂದರೆಗಳು ಇಡೀ ಪಶ್ಚಿಮ ಏಷ್ಯಾ ಪ್ರದೇಶದ ಮೇಲೆ ಪರಿಣಾಮ ಬೀರಿದೆ. ವ್ಯಾಪಕ ನಿರುದ್ಯೋಗ, ಬೆಲೆ ಏರಿಕೆ ಮತ್ತು ಆರ್ಥಿಕ ಸಂಕಷ್ಟಗಳಿಂದಾಗಿ ಪ್ರತಿಭಟನೆಗಳು ಹೆಚ್ಚಾಗಿವೆ ಮತ್ತು ರಾಜಕೀಯ ಪ್ರಕ್ಷುಬ್ಧತೆ ಸೃಷ್ಟಿಯಾಗಿದೆ. ಇರಾಕ್, ಲೆಬನಾನ್, ಟುನೀಶಿಯಾ ಮತ್ತು ಇತರ ದೇಶಗಳಲ್ಲಿ ಇಂತಹದ್ದೇ ಪರಿಸ್ಥಿತಿ ಇದೆ.

ಇರಾಕ್

18 ವರ್ಷಗಳ ಅತಿಕ್ರಮಣ ಮತ್ತು ವಿನಾಶದ ನಂತರ ಈ ವರ್ಷದ ಅಂತ್ಯದ ವೇಳೆಗೆ ಇರಾಕ್ನಿಂದ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳುವುದಾಗಿ ಅಮೆರಿಕ ಘೋಷಿಸಿದೆ ಮತ್ತು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಇರಾಕಿನ ಮೂರನೇ ಒಂದು ಭಾಗದ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಬಂಡುಕೋರರು ಮತ್ತು ಸಶಸ್ತ್ರ ಗುಂಪುಗಳ ಹರಡುವಿಕೆ, ಪಂಥೀಯ ಹೋರಾಟಗಳು ಮತ್ತು ಹತ್ಯೆಗಳು ಹಾಗೂ ಇರಾಕಿನ ಭೂಪ್ರದೇಶದ ಮೂರನೇ ಎರಡರಷ್ಟನ್ನು ಆಕ್ರಮಿಸಿರುವ ಭಯೋತ್ಪಾದಕ ಸಂಘಟನೆಗಳ ಹೊರಹೊಮ್ಮುವಿಕೆಯಿಂದಾಗಿ ಇರಾಕ್ ನ್ನು ಸಂಪೂರ್ಣವಾಗಿ ಹಾಳುಗೆಡವಲಾಗಿದೆ. ಅವಧಿಪೂರ್ವ ಚುನಾವಣೆಗಾಗಿ, ಸಂಪೂರ್ಣ ರಾಜಕೀಯ ಮತ್ತು ಚುನಾವಣಾ ವ್ಯವಸ್ಥೆಯ ಸುಧಾರಣೆಗಾಗಿ, ಆರ್ಥಿಕತೆ ಮತ್ತು ಆಡಳಿತದ ಭ್ರಷ್ಟಾಚಾರವನ್ನು ಎದುರಿಸಲು, ನಿರುದ್ಯೋಗವನ್ನು ಕೊನೆಗೊಳಿಸಲು ಮತ್ತು ಜೀವನಮಟ್ಟದಲ್ಲಿ ಸುಧಾರಣೆ ತರಲು ಇರಾಕಿನ ಜನತೆ ಒತ್ತಾಯಿಸುತ್ತಿದ್ದಾರೆ.

ಈ ವರ್ಷದ ಅಕ್ಟೋಬರ್ ನಲ್ಲಿ ಚುನಾವಣೆ ನಡೆಯಲಿದೆ ಎಂದು ಇರಾಕ್ ಸರ್ಕಾರ ಘೋಷಿಸಿತ್ತು. ಚುನಾವಣೆ ನಡೆಸಲು 52 ಲಕ್ಷ ಡಾಲರ್ ಸಹಾಯ ನೀಡುವುದಾಗಿ ಅಮೆರಿಕ ಭರವಸೆ ನೀಡಿತ್ತು. ಇರಾಕ್ ಕಮ್ಯುನಿಸ್ಟ್ ಪಕ್ಷವು ತನ್ನ ಸದಸ್ಯರ ನಡುವೆ ಜನಾಭಿಪ್ರಾಯ ಸಂಗ್ರಹಿಸಿ, ರಾಜಕೀಯ ಪರಿಸ್ಥಿತಿಯು ನ್ಯಾಯಯುತ ಮತ್ತು ಶಾಂತಿಯುತ ಚುನಾವಣೆ ನಡೆಸಲು ಅನುಕೂಲಕರವಾಗಿರದ ಕಾರಣ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ ಎಂದು ನಿರ್ಧರಿಸಿತು.

ಲೆಬನಾನ್

ಲೆಬನಾನ್ ತನ್ನ ಇತಿಹಾಸದಲ್ಲೇ ಅತ್ಯಂತ ಕರಾಳ ಬಿಕ್ಕಟ್ಟನ್ನು ಹಾದು ಹೋಗುತ್ತಿದೆ. ಈ ದೇಶವು 1800ರಿಂದ ಈಚೆಗೆ ವಿಶ್ವದ ಯಾವುದೇ ದೇಶ ಕಾಣದ ಅತ್ಯಂತ ಕೆಟ್ಟ ಆರ್ಥಿಕ ಬಿಕ್ಕಟ್ಟಿನಲ್ಲಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ. ಯುನಿಸೆಫ್ ಪ್ರಕಾರ, ಶೇ. 77 ಕ್ಕಿಂತ ಹೆಚ್ಚು ಲೆಬನಾನಿನ ಜನರ ಹತ್ತಿರ ಈಗ ಸಾಕಷ್ಟು ಆಹಾರವಾಗಲೀ ಅಥವಾ ಆಹಾರವನ್ನು ಖರೀದಿಸಲು ಸಾಕಷ್ಟು ಹಣವಾಗಲೀ ಇಲ್ಲ. ಬ್ಯಾಂಕುಗಳಿಂದ ಹಣ ಹಿಂಪಡೆಯುವುದನ್ನು ಸ್ಥಗಿತಗೊಳಿಸಲಾಗಿದೆ ಮತ್ತು ಔಷಧಾಲಯಗಳು ಔಷಧಿಗಳ ಕೊರತೆಯನ್ನು ಎದುರಿಸುತ್ತಿವೆ. ಜಿಡಿಪಿಯು 2019 ರಲ್ಲಿ 6.7% ಸಂಕುಚಿತಗೊಂಡ ಹಿನ್ನೆಲೆಯಲ್ಲಿ 2020 ರಲ್ಲಿ ನೈಜ ಜಿಡಿಪಿ 20.3% ಸಂಕುಚಿತಗೊಂಡಿದೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ. ಡಾಲರ್ ಲೆಕ್ಕದಲ್ಲಿ ತಲಾವಾರು ಜಿಡಿಪಿ 40% ಕುಸಿದಿದೆ. ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ನಿರುದ್ಯೋಗ ವೇಗವಾಗಿ ಏರುತ್ತಿದೆ.

ಬೈರುತ್ ಬಂದರಿನಲ್ಲಿ ಭಾರೀ ಸ್ಫೋಟ ಸಂಭವಿಸಿತು. ಇದು ನಗರದಲ್ಲಿ ವಿನಾಶವನ್ನೇ ಉಂಟುಮಾಡಿತು. ಇದರಿಂದಾಗಿ ಸರ್ಕಾರವು ರಾಜೀನಾಮೆ ನೀಡಬೇಕಾಯಿತು. ಅಲ್ಲಿಂದೀಚೆಗೆ, ಯಾವುದೇ ಸರ್ಕಾರ ರಚನೆಯಾಗಲಿಲ್ಲ. ಇಬ್ಬರು ಪ್ರಧಾನ ಮಂತ್ರಿಗಳನ್ನು ನೇಮಿಸಿದರೂ ರಾಜಕೀಯ ಅಸ್ಥಿರತೆ ಮುಂದುವರೆದಿದೆ. ಫ್ರೆಂಚ್ ಸರ್ಕಾರ (ಹಿಂದಿನ ವಸಾಹತು ಆಡಳಿತಗಾರರು) ಮಧ್ಯಪ್ರವೇಶಿಸಲು ಹಾಗೂ ರಾಜಕೀಯ ಮತ್ತು ಆರ್ಥಿಕ ನೀತಿಗಳನ್ನು ರೂಪಿಸಲು ಪ್ರಯತ್ನಿಸುತ್ತಿದೆ.

ಟುನೀಶಿಯಾ

ಟುನೀಶಿಯಾದ ಹಲವಾರು ಪ್ರಾಂತ್ಯಗಳಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದು, ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ಹದಗೆಟ್ಟಿರುವ ಬಗ್ಗೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರವನ್ನು ಉಚ್ಚಾಟಿಸಬೇಕು ಮತ್ತು ಸಂಸತ್ತನ್ನು ವಿಸರ್ಜಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಹಿಚೆಮ್ ಮೆಚಿಚಿಯನ್ನು ಪ್ರಧಾನ ಮಂತ್ರಿ ಹುದ್ದೆಯಿಂದ ಅಧ್ಯಕ್ಷರು ತೆಗೆದುಹಾಕಿದ್ದಾರೆ ಮತ್ತು ಸಂಸತ್ತಿನ ಎಲ್ಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದಾರೆ. ಸರ್ಕಾರವನ್ನು ವಹಿಸಿಕೊಂಡು ಎಲ್ಲಾ ಸಂಸತ್ ಸದಸ್ಯರಿಗಿದ್ದ ವಿನಾಯಿತಿಗಳನ್ನು ರದ್ದುಗೊಳಿಸಿ ಆರ್ಥಿಕ ಬಿಕ್ಕಟ್ಟಿನಲ್ಲಿ ಅವರ ಪಾತ್ರದ ಬಗ್ಗೆ ತನಿಖೆ ನಡೆಸಲು ಅವಕಾಶ ಮಾಡಿದ್ದಾರೆ.

ಸತ್ಯಜಿತ್ ರಾಯ್ ರಾಜಕೀಯ ಪ್ರಜ್ಞೆ ನದಿಯ ಒಳಹರಿವಿನಂತೆ....... ಪುಟ 16 ರಿಂದ

ಅಪ್ಪುವಿನ ಬಾಲ್ಯ, ಯೌವನ, ಪ್ರಬುದ್ಧ ಅವಧಿಗಳ ಕಥಾನಕ ಮಾತ್ರವಲ್ಲ ಆಗಿನ ಬಂಗಾಳದ ಕಥಾನಕವೂ ಕೈಗಾರಿಕೀಕರಣ/ನಗರೀಕರಣಗಳ ಮತ್ತು ಮನುಷ್ಯ ಸಂಬಂಧಗಳ ನಡುವಿನ ತಿಕ್ಕಾಟದ ಆಳವಾದ ರಾಜಕೀಯ ಪ್ರಜ್ಞೆ ಇರುವ ನಿರೂಪಣೆಯೆಂದೂ, ಮತ್ತೆ ಸಣ್ಣ ಸಣ್ಣ ಮಾತುಕತೆ, ನಡವಳಿಕೆ, ಘಟನೆಗಳಿಂದ ರಾಯ್ ಹೇಗೆ ಕಟ್ಟಿ ಕೊಡುತ್ತಾರೆ ಎಂದೂ ಅವರು ವಿವರಿಸಿದರು. ಈ ತ್ರಿವಳಿಯಲ್ಲಿ ಅಪ್ಪು ಮತ್ತು ರೈಲಿನ ಸಂಬಂಧದ ಕುರಿತು ಅದ್ಭುತ ಒಳನೋಟವನ್ನು ಕೊಟ್ಟರು. ಅದೇ ರೀತಿಯಲ್ಲಿ 'ಚಾರುಲತ', 'ಮಹಾನಗರ' ಗಳಲ್ಲಿರುವ ರಾಜಕೀಯ ಪ್ರಜ್ಞೆಯನ್ನೂ ವಿವರಿಸಿದರು. 'ಜಲಸಾಗರ್', 'ಆಶನಿ ಸಂಕೇತ್' ಮತ್ತು ಕಲ್ಕತ್ತಾ ತ್ರಿವಳಿಗಳಲ್ಲಿ 60–70ರ ದಶಕದ ಪ್ರಭುತ್ವ ರಾಜಕಾರಣದ ನಿರೂಪಣೆಯನ್ನು ರಾಯ್ ಹೇಗೆ ನಿರ್ವಹಿಸಿದ್ದಾರೆ ಎಂದು ಕಾಸರವಳ್ಳಿ ವಿವರಿಸಿದರು.

ಸಾಮಾನ್ಯವಾಗಿ ರಾಯ್ ನಿರೂಪಕನಾಗಿ ಫಿಲಂ ನಲ್ಲಿ ಯಾವುದೇ ರಾಜಕೀಯ ನಿಲುವು ತೆಗೆದುಕೊಳ್ಳುವುದಿಲ್ಲ. ಆದರೆ 'ದೇವಿ'ಯಲ್ಲಿ ಮತಧರ್ಮ ಶಕ್ತಿಗಳೂ ಮೌಢ್ಯವನ್ನೂ, 'ಗಣಶತ್ರು'ನಲ್ಲಿ ಪ್ರಭುತ್ವ ರಾಜಕಾರಣವನ್ನು ರೂಕ್ಷವಾಗಿ ನೇರ ಕಟು ಟೀಕೆಗೆ ಒಳಪಡಿಸುತ್ತಾರೆ ಎಂದು ಅವರು ವಿವರಿಸಿದರು. ಅದೇ ರೀತಿಯಲ್ಲಿ 1990ರ ದಶಕದ ಜನ ಪ್ರಚೋದಕ ರಾಜಕಾರಣಕ್ಕೆ ಪ್ರತಿಕ್ರಿಯೆಯಾಗಿ ಅವರು 'ಘರೇ ಬೈರೇ'ಯಲ್ಲಿ ತೋರಿಸಿದ ರಾಜಕೀಯ ಪ್ರಜ್ಞೆಯನ್ನೂ ಗುರುತಿಸಿದರು.

JANASHAKTHI KANNADA VARA PATRIKE August 30-September 5, 2021 Price: Rs. 10/- Date of Publication: 27 August 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಸತ್ಯಜಿತ್ ರಾಯ್ ರಾಜಕೀಯ ಪ್ರಜ್ಞೆ ನದಿಯ ಒಳಹರಿವಿನಂತೆ: ಕಾಸರವಳ್ಳಿ



ಸತ್ಯಜಿತ್ ರಾಯ್ ಅವರ ಫಿಲಂಗಳ ವಿಶಿಷ್ಟತೆಯೆಂದರೆ ವಾಸ್ತವಿಕತೆ, ಕಥಾ ನಿರೂಪಣೆ, ಕಲಾತ್ಮಕ ಅಭಿವ್ಯಕ್ತಿ ಮತ್ತು ಮಾನವೀಯತೆ. ಅವರ ಫಿಲಂಗಳಲ್ಲಿ ರಾಜಕೀಯ ಪ್ರಜ್ಞೆ ಕಂಡು ಬರುವುದಿಲ್ಲ ಎಂದು ಹೇಳಲಾಗುತ್ತದೆ. ಆದರೆ ಇದು ರಾಯ್ ಫಿಲಂಗಳ ಸರಿಯಾದ ವ್ಯಾಖ್ಯಾನ ಅಲ್ಲ. ಅವರ ರಾಜಕೀಯ ಪ್ರಜ್ಞೆ ನದಿಯ ಒಳಹರಿವಿನಂತೆ ಸುಪ್ತವಾದ್ದು, ಸೂಕ್ಷ್ಮವಾದ್ದು. ಮೇಲು ನೋಟಕ್ಕೆ ಎದ್ದು ಕಾಣುವಂಥದ್ದಲ್ಲ ಎಂದು ಖ್ಯಾತ ಸಿನಿಮಾ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಹೇಳಿದರು. ಅವರು 'ಸತ್ಯಜಿತ್ ರಾಯ್ 100: ಅವರ ಫಿಲಂಗಳ ಹೊರಳು ನೋಟ' ಸಂವಾದ ಸರಣಿಯ ಉದ್ಘಾಟನಾ ಉಪನ್ಯಾಸ ಮಾಡುತ್ತಾ ಈ ಮಾತುಗಳನ್ನು ಹೇಳಿದರು. ಈ ಸಂವಾದ ಸರಣಿಯನ್ನು ನಾಡಿನ ಸಾಂಸ್ಕತಿಕ ಸಂಘಟನೆಗಳಾದ 'ಸಮುದಾಯ ಕರ್ನಾಟಕ', 'ಸಹಯಾನ', ಸಾಂಸ್ಕೃತಿಕ ವೆಬ್ ಪತ್ರಿಕೆ 'ಋತುಮಾನ' ಮತ್ತು ಸಿನಿಮಾಸಕ್ತರ ಕೂಟ 'ಮನುಜಮತ ಸಿನಿಯಾನ' ಜಂಟಿಯಾಗಿ ಅಗಸ್ಟ್ 22ರಂದು (ಭಾನುವಾರ ಬೆಳಿಗ್ಗೆ 11 ಗಂಟೆಗೆ) ಆನ್–ಲೈನಿನಲ್ಲಿ ಸಂಘಟಿಸಿದ್ದವು.

ಸತ್ಯಜಿತ್ ರಾಯ್ ಅವರ ಶತಮಾನೋತ್ಸವದ ಸಂದರ್ಭದಲ್ಲಿ ಹಲವು ಕಾರ್ಯಕ್ರಮಗಳು ನಡೆಯುತ್ತಿದ್ದು ಹೆಚ್ಚಾಗಿ ಅವು ಬರಿಯ ಹೊಗಳಿಕೆಗಳ ಮಹಾಪೂರವಾಗಿದೆ. ವಾಸ್ತವಿಕತೆ, ಕಥಾ ನಿರೂಪಣೆ, ಕಲಾತ್ಮಕ ಅಭಿವ್ಯಕ್ತಿ ಮತ್ತು ಮಾನವೀಯತೆಯ ಸೆಲೆ – ಇವುಗಳೇ ಅವರ ಫಿಲಂಗಳ ವಿಶಿಷ್ಟತೆಗಳೋ ಎಂಬಂತೆ ಬಿಂಬಿಸಲಾಗುತ್ತಿದೆ. ಹಾಗಾದರೆ ಇವನ್ನು ಅಷ್ಟೇ ಪರಿಣಾಮಕಾರಿಯಾಗಿ ಮಾಡಿರುವ ಆ ನಂತರದ ಹಲವು ನಿರ್ದೇಶಕರ ಸಿನಿಮಾಗಳು ರಾಯ್ ಫಿಲಂಗಳು ಗಳಿಸಿದ ಈಗಲೂ ಗಳಿಸುತ್ತಿರುವ ಅಪಾರ ಮನ್ನಣೆ ಯಾಕೆ ಗಳಿಸಿಲ್ಲ? ರಾಯ್ ಫಿಲಂಗಳು ಆದಂತೆ ಅವು ಎಲ್ಲ ದೇಶ–ಕಾಲಕ್ಕೂ ಮಹತ್ವವೆನಿಸುವ ಸಾರ್ವಕಾಲಿಕ, ಸಾರ್ವತ್ರಿಕ ಫಿಲಂಗಳು ಅಂತ ಯಾಕೆ ಅನಿಸುವುದಿಲ್ಲ? ಭಾರತದ ಸಿನಿಮಾ ಮತ್ತು ಕಲಾ ಜಗತ್ತಿಗೆ ರಾಯ್ ಅವರ ಕಾಣಿಕೆ ಏನು? ಅವರ ಫಿಲಂಗಳ ಐತಿಹಾಸಿಕ ಮಹತ್ವವೇನು? ಇಂದಿನ ದಿನಮಾನಗಳಲ್ಲಿ ಫಿಲಂ ಮಾಡುವವರು ಅವರಿಂದ ಏನನ್ನು ಕಲಿಯಬಹುದು? ಎಂಬ ಪ್ರಶ್ನೆಗಳನ್ನು ಕೇಳಿಕೊಂಡು ಉತ್ತರಿಸುವುದು, ಸತ್ಯಜಿತ್ ರಾಯ್ ಅವರ ಫಿಲಂ ಗಳ ಮರು ಅವಲೋಕನ ಮಾಡುವುದು ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ 'ಸತ್ಯಜಿತ್ ರಾಯ್ 100: ಅವರ ಫಿಲಂಗಳ ಹೊರಳು ನೋಟ' ಸಂವಾದ ಸರಣಿಯನ್ನು ಯೋಜಿಸಿರುವುದು ಅತ್ಯಂತ ಸೂಕ್ತವಾಗಿದೆ. ಇದರ ಉದ್ಘಾಟನೆ ಮಾಡಿ ಮಾತನಾಡಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಅದರಲ್ಲೂ ಸರಣಿಯ ಸಂವಾದಗಳಲ್ಲಿ ಬಹುತೇಕ ಸಿನಿಮಾದ ವಿವಿಧ ಆಯಾಮಗಳಲ್ಲಿ ತೊಡಗಿಸಿಕೊಂಡ ಯುವ ಸಿನಿಮಾ ಕರ್ಮಿಗಳು ಮತ್ತು ಆಸಕ್ತರು ಭಾಗವಹಿಸುತ್ತಾರೆ ಎಂಬುದು ಇನ್ನಷ್ಟು ಸಂತೋಷದ ವಿಷಯ ಎಂದು ಕಾಸರವಳ್ಳಿ ಅವರು ಹೇಳಿದರು.

ಇದಕ್ಕಿಂತ ಮೊದಲು ಪ್ರಾಸ್ತಾವಿಕವಾಗಿ ಪ್ರೊ.ಕೆ.ಫಣಿರಾಜ್ ಕಾರ್ಯಕ್ರಮ ಸಂಘಟಿಸಿದ ಸಂಘಟನೆಗಳ ಪರವಾಗಿ ಮಾತನಾಡಿದರು. ನಮ್ಮ ನಡುವೆ ಈಗ ಇಲ್ಲದ ಡಾ.ವಿಠ್ಠಲ ಭಂಡಾರಿ ಕೊವಿದ್ ಕಾಲದ ಸ್ವಲ್ಪ ಮೊದಲು ಸಹಯಾನೋತ್ಸವದ ಭಾಗವಾಗಿ ಸಂಘಟಿಸಿದ 'ಸಿನೆಮಾ : ಹೊಸ ತಲೆಮಾರು" ಎಂಬ ಒಂದು ದಿನದ ಚರ್ಚೆಯಲ್ಲಿ ಈ ಸರಣಿ ಸಂವಾದದ ಬೇರು ಇದೆ ಎಂದರು. ಅಲ್ಲಿ ಸಿನೆಮಾವನ್ನು ಹೊಸ ತಲೆಮಾರಿನತ್ತ ಒಯ್ಯಲು ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಆದರೆ ಕೊವಿದ್ ಅದಕ್ಕೆ ಅಡ್ಡಿಯಾಯಿತು. ಆದರೂ ಧೃತಿಗೆಡದ ವಿಠ್ಠಲ ಭಂಡಾರಿ ತಂಡ ಜನಶಕ್ತಿ ಮೀಡಿಯಾದ ಮೂಲಕ 'ಪಿಚ್ಚರ್ ಪಯಣ' ಎಂಬ ವಾರದಲ್ಲಿ ಒಂದು ಫಿಲಂ ನ ವಿಮರ್ಶೆ ಮಾಡುವ ಅರ್ಥೈಸುವ ಕಾರ್ಯಕ್ರಮ ಆರಂಭಿಸಿತು. ವಿಠ್ಠಲ ಭಂಡಾರಿ ಅವರ ಅಕಾಲಿಕ ನಿಧನದಿಂದ ಧೃತಿಗೆಡದೆ ಅದನ್ನು ಮುಂದುವರೆಸಲಾಯಿತು. ಮಾತ್ರವಲ್ಲ, 'ಸತ್ಯಜಿತ್ ರಾಯ್ 100: ಅವರ ಫಿಲಂಗಳ ಹೊರಳು ನೋಟ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮುಂದಿನ ತಿಂಗಳಿಂದ ಪ್ರತಿ ತಿಂಗಳು ಒಂದು ಆಯ್ದ ಭಾನುವಾರ ಬೆಳಿಗ್ಗೆ 11ಕ್ಕೆ ಸುಮಾರು ಒಂದುವರೆ ಗಂಟೆ ಕಾಲ ಸತ್ಯಜಿತ್ ರಾಯ್ 100: ಅವರ ಫಿಲಂಗಳ ಅಥವಾ ಅದಕ್ಕೆ ಸಂಬಂಧಿತ ಒಂದು ಆಯಾಮದ ಕುರಿತು ಬಹುತೇಕ ಸಿನಿಮಾ ಕರ್ಮಿಗಳು, ವಿಮರ್ಶಕರು ಮಾತನಾಡಲಿದ್ದಾರೆ ಅಥವಾ ಸಂವಾದ ಮಾಡಲಿದ್ದಾರೆ. ಈ ಸರಣಿಯಲ್ಲಿ 10 ಇಂತಹ ಸಂವಾದಗಳಿರುತ್ತವೆ. ಮುಂದಿನ ಕೆಲವು ಸಂವಾದಗಳನ್ನು ಸದ್ಯದಲ್ಲೇ ತಿಳಿಸಲಾಗುವುದು ಎಂದು ಫಣಿರಾಜ್ ಹೇಳಿದರು.

ಸತ್ಯಜಿತ್ ರಾಯ್ ಅವರ ಫಿಲಂಗಳಲ್ಲಿ ರಾಜಕೀಯ ಪ್ರಜ್ಞೆಯ ಕುರಿತು ತಮ್ಮ ಸುಮಾರು ಒಂದುವರೆ ಗಂಟೆಯ ಉಪನ್ಯಾಸದಲ್ಲಿ ಕಾಸರವಳ್ಳಿ ಅವರು ವಿಸ್ತಾರವಾಗಿ ಮಾತನಾಡಿದರು. ಫಿಲಂಗಳಲ್ಲಿ ರಾಜಕೀಯ ಪ್ರಜ್ಞೆಯನ್ನು ನಿರ್ವಚಿಸುತ್ತಾ ಅದು ಮೂರು ರೂಪಗಳಲ್ಲಿ ಇರಬಹುದು ಎಂದು ಅವರು ಗುರುತಿಸಿದರು. ಮೊದಲನೆಯದಾಗಿ ಶಕ್ತಿ ರಾಜಕಾರಣದ ಅನಾವರಣದ ರೂಪದಲ್ಲಿ ಇರಬಹುದು. ಇದು ಪ್ರಭುತ್ವ ಮಾತ್ರವಲ್ಲದೆ ಯಜಮಾನಿಕೆ ಇರುವ ವರ್ಗ, ಸಮುದಾಯ, ಮತಧರ್ಮ, ಕುಲ/ಜನಾಂಗ (ರೇಸ್) – ಇವುಗಳ ಶಕ್ತಿ ರಾಜಕಾರಣ ಸಹ ಆಗಿರಬಹುದು. ಎರಡನೆಯದಾಗಿ ಅದು ಸೈದ್ಧಾಂತಿಕ ರಾಜಕಾರಣದ ರೂಪ ತಳೆಯಬಹುದು. ಫಿಲಂಗಳಲ್ಲಿ ಕಥನ ನಿರ್ವಹಣೆಗೆ ಅಥವಾ ಒಂದು ಪರಿಸ್ಥಿತಿಯ ವ್ಯಾಖ್ಯಾನ ಮಾಡಲು ಸಿದ್ಧಾಂತವನ್ನು ಬಳಸಬಹುದು. ಇಲ್ಲಿ ಸಿದ್ಧಾಂತ ಎಂದರೆ ಎಡ, ಬಲ, ನಡು ಅಲ್ಲದೆ, ಮಹಿಳಾವಾದ, ಪರಿಸರವಾದ, ಜಾತಿ–ವಿನಾಶ, ಜನಾಂಗವಾದ–ವಿರೋಧಿ ಇತ್ಯಾದಿಗಳಲ್ಲಿ ಯಾವುದೂ ಇರಬಹುದು. ಮೂರನೆಯದು ವಿವಿಧ ವ್ಯಕ್ತಿಗಳು ತಮ್ಮ ಅನುದಿನದ ವ್ಯವಹಾರ, ಕ್ರಿಯೆಗಳ ಭಾಗವಾಗಿ ಆಡುವ ಮಾತುಗಳಲ್ಲಿ ತೆಗೆದುಕೊಳ್ಳುವ ನಿಲುವುಗಳಲ್ಲಿ ಅವರಿಗೆ ಅರಿವಿಲ್ಲದೆಯೇ ರಾಜಕಾರಣದ ಧ್ವನಿ ಮೂಡುತ್ತವೆ. ಇದು ವ್ಯಕ್ತ ನೆಲೆಯಲ್ಲಿ ಇರುವುದಿಲ್ಲ. ಆದರೆ ಅದರ ಸೂಚ್ಯ ಮೆಲುದನಿ ಇರುತ್ತದೆ. ಈ ಮೂರನೆಯ ರೀತಿಯಲ್ಲಿ ರಾಜಕೀಯ ಪ್ರಜ್ಞೆ ಸತ್ಯಜಿತ್ ರಾಯ್ ಅವರ ಫಿಲಂ ಗಳಲ್ಲಿ ಹೆಚ್ಚಾಗಿ ವ್ಯಕ್ತವಾಗುತ್ತದೆ ಎಂದರು.

ಇದನ್ನು ಅವರು ಪ್ರಮುಖವಾಗಿ ರಾಯ್ ಅವರೇ ಚಿತ್ರಕತೆ ಬರೆದು ನಿರ್ದೇಶಿಸಿದ 'ಕಾಂಚನ್ ಜಂಗ' ಫಿಲಂ ನ ಉದಾಹರಣೆಯೊಂದಿಗೆ ವಿವರಿಸಿದರು. 'ಕಾಂಚನ್ ಜಂಗ' ಅವರ ಜನಪ್ರಿಯ ಬಹುಚರ್ಚಿತ ಫಿಲಂ ಅಲ್ಲ. ಆದರೆ ಹಲವು ರೀತಿಗಳಲ್ಲಿ ವಿಶಿಷ್ಟವಾದ ಫಿಲಂ. ರಾಯ್ ಅವರು ತಮ್ಮ ರಾಜಕೀಯ ಪ್ರಜ್ಞೆ ಅಥವಾ ನಿಲುವಿನ ಬಗ್ಗೆ ಎಲ್ಲೂ ಹೇಳುವುದಿಲ್ಲ. ಆದರೆ ಈ ಫಿಲಂ ನಲ್ಲಿ (ಅದರ ಚಿತ್ರಕತೆ ಬರೆದಿರುವುದರಿಂದ) ಅದನ್ನು ಸ್ಪಷ್ಟವಾಗಿ ಕಾಣಬಹುದು. ಬೇರೆ ಕಥನಗಳನ್ನು ತೆಗೆದುಕೊಂಡು ಫಿಲಂ ಮಾಡಿದಾಗ ಕೂಡಾ ಅದನ್ನು ಕಾಣಬಹುದು. ಹೆಚ್ಚಿನ ಕತೆ ಅಥವಾ ಘಟನಾವಳಿಯ ಹಂದರ ಇಲ್ಲದ ಫಿಲಂ ಇದು. ರಾವ್ ಬಹದ್ದೂರ್ ಎಂಬವರ ಬಂಗಾಳಿ 'ಭದ್ರಲೋಕ್' ಕುಟುಂಬವೊಂದು ಕಾಂಚನಜಂಗ ಪರ್ವತಶಿಖರ ನೋಡಲು ಡೆಹರಾಡೂನಿಗೆ ಪ್ರವಾಸಕ್ಕೆ ಬಂದಿದೆ. ಅವರ ಕುಟುಂಬದಲ್ಲಿ ಅವರು ಮಡದಿ, ಹಿರಿಮಗಳು, ಅವಳ ಗಂಡ, ಕಿರಿ ಮಗಳು, ಅವಳಿಗೆ ಮದುವೆ ನಿಶ್ಚಯವಾಗಿರುವ ಯುವಕ ಸೇರಿದ್ದಾರೆ. ಅವರಲ್ಲದೆ ಅವರ ಒಬ್ಬ ಪರಿಚಿತ (ಸಾಮಾಜಿಕ ಅಂತಸ್ತಿನಲ್ಲಿ ಅವರಿಗಿಂತ ಕೆಳಗಿನವರು) ಮತ್ತು ಆತನ ಅಣ್ಣನ ಮಗ ಇದ್ದಾರೆ. ಮೋಡ ಮುಸುಕಿರುವುದರಿಂದ 7 ದಿನಗಳಿಂದ ಕಾಂಚನಜಂಗ ಇನ್ನೂ ಕಂಡಿಲ್ಲ. ಕೊನೆಯ ದಿನದ ಸಂಜೆ 4ರಿಂದ 5.30 ವರೆಗೆ ನೈಜ ಒಂದುವರೆ ಗಂಟೆ ಅವಧಿ ಫಿಲಂ ನ ಅವಧಿ ಸಹ.



ಆ ಅವಧಿಯಲ್ಲಿ ರಾವ್ ಬಹದ್ದೂರ್ ಅವರ ಕುಟುಂಬದ ಮತ್ತು ತಂಡದ 8 ಸದಸ್ಯರ ನಡುವೆ ನಡೆಯುವ ಸಾಮಾನ್ಯವಾಗಿ ನಾವು ಉಪೇಕ್ಷಿಸುವ ಉಪೇಕ್ಷಿಸಬಹುದಾದ ಸಣ್ಣಸಣ್ಣ ಮಾತುಕತೆ, ತಿಕ್ಕಾಟಗಳ, ನಡವಳಿಕೆಗಳ ಮೂಲಕ ಅನಾವರಣಗೊಳ್ಳುವ ಅವರ ಸಂಬಂಧಗಳಲ್ಲಿ ಸಮಾಜದ ಎಲ್ಲ ದೊಡ್ಡ ರಾಜಕೀಯ ತಿಕ್ಕಾಟಗಳ ದರ್ಶನವನ್ನು ರಾಯ್ ಮಾಡಿಸುತ್ತಾರೆ. ರಾವ್ ಬಹದ್ದೂರ್ ಅವರ (ಮೇಲು ಜಾತಿ ಮೇಲು ವರ್ಗದ, ಆರ್ಥಿಕವಾಗಿ ಸಬಲವಾದ, ಸಾಮಾಜಿಕ ಮನ್ನಣೆ ಇರುವ, ರಾಜಕೀಯವಾಗಿ ಸಹ ಪ್ರಭಾವಶಾಲಿಯಾದ, ಬ್ರಹ್ಮೋ ಸಮಾಜಕ್ಕೆ ಸೇರಿದ ಬ್ರಿಟಿಷರ ವಿರುದ್ಧವೂ ಪರವೂ ರಾಜಕೀಯ ನಿಲುವು ತಳೆಯುವ) 'ಭದ್ರಲೋಕ' ಸ್ಥಿತಿಯಿಂದಾಗಿ ಅವರ ಎಲ್ಲ ನಡೆ ನುಡಿಗಳಲ್ಲಿ ಕಾಣುವ ಅಹಮಿಕೆಯಲ್ಲಿ ವರ್ಗ, ಯಜಮಾನಿಕೆಯ ಸಮುದಾಯದ ಶಕ್ತಿರಾಜಕಾರಣದ ಹೊಳಹು ಸಿಗುತ್ತದೆ. ಯಾವುದೇ ಸ್ವಂತಿಕೆ ಇಲ್ಲದ, ಯಾವುದರಲ್ಲೂ ಆಸಕ್ತಿ ವಹಿಸದ, ಗಂಡನ ಆಜ್ಞೆಯಂತೆ ನಡೆಯುವ ಅವರ ಮಡದಿಯ ಜತೆ ಅವರ ಸಂಬಂಧದಲ್ಲಿ ಲಿಂಗ ಶಕ್ತಿ ರಾಜಕಾರಣದ (ಈಗ ಫೆಮಿನಿಸ್ಟ್ ಎಂದು ಕರೆಯಲಾಗುವ) ನಿರೂಪಣೆ ಕಾಣಬಹುದು. ಹಿರಿಯ ಮಗಳು ಮತ್ತು ಅವಳ ಗಂಡನ ನಡುವೆ ಸಂಬಂಧ ಚೆನ್ನಾಗಿಲ್ಲ. ಅವಳಿಗೆ ಇನ್ನೊಬ್ಬ ಗೆಳೆಯನ ಮೇಲೆ ಆಸಕ್ತಿಯಿದೆ. ಕಿರಿಯ ಮಗಳ ಜತೆ ಅವಳಿಗೆ ತಂದೆ ನಿಶ್ಚಯಿಸಿರುವ ಆದರೆ ಅವಳಿಗೆ ಇಷ್ಟವಿರದ ಯುವಕ ಇದ್ದಾನೆ. ಮದುವೆ ಎಂಬ ಸಾಮಾಜಿಕ ಸಂಸ್ಥೆಯ ಸಮಸ್ಯೆಗಳ ಮತ್ತು ಮುಕ್ತ ಸಂಬಂಧಗಳ ಸಾಧ್ಯತೆಗಳ ಚರ್ಚೆಯೂ ಇದೆ. ರಾವ್ ಬಹದ್ದೂರ್ ಪರಿಚಿತನಿಗೆ, ತನ್ನ ಅಣ್ಣನ ಮಗನಿಗೆ (ಇವನಲ್ಲಿ ಕಿರಿಯ ಮಗಳಿಗೆ ಆಸಕ್ತಿ) ಅವರ ಪ್ರಭಾವದಿಂದ ಉದ್ಯೋಗ ಕೊಡಿಸುವ ಉದ್ದೇಶವಿದೆ. ಅವನ ಮೂಲಕ ನಿರುದ್ಯೋಗ, ಸಾಮಾಜಿಕ ಅಶಾಂತಿ ಉಂಟು ಮಾಡುವ ರಾಜಕಾರಣದ ಅನಾವರಣವೂ ಇದೆ.

ಕೊನೆಗೂ ಕಾಂಚನ್‌ಜಂಗ ಶಿಖರ ಕಂಡರೂ ರಾವ್ ಬಹದ್ದೂರ್ ಕುಟುಂಬದವರಿಗೆ ಅದನ್ನು ಆಸ್ವಾದಿಸುವ ಮೂಡ್ ಆಗಲಿ ವ್ಯವಧಾನವಾಗಲಿ ಇರುವುದಿಲ್ಲ. ಎಲ್ಲರೂ ಅವರದೇ ಆದ ತಲ್ಲಣಗಳಲ್ಲಿ ಇರುತ್ತಾರೆ. ಒಂದುವರೆ ಗಂಟೆಯ ಕಾಲ ರಾವ್ ಬಹದ್ದೂರ್ ಅವರ ಕುಟುಂಬದ ಮತ್ತು ತಂಡದ ಸದಸ್ಯರ ಸಣ್ಣ ಸಣ್ಣ ಮಾತುಕತೆ, ತಿಕ್ಕಾಟಗಳ, ನಡವಳಿಕೆಗಳ ಮೂಲಕ ಆ ಕಾಲದ ಬಂಗಾಳದ ಸಮಾಜದ ಕುರಿತ ರಾಜಕೀಯ ಪ್ರಜ್ಞೆ ಮತ್ತು ಆ ಮೂಲಕ ಅಂದಿನ ಇರವಿನ ರಾಜಕೀಯ ಅರಿವನ್ನು ರಾಯ್ ಮೂಡಿಸುತ್ತಾರೆ. ಈ ಹಿಂದೆ ಹೇಳಿದ ರಾಜಕೀಯ ಪ್ರಜ್ಞೆಯ ಒಳಹರಿವಿನಿಂದಾಗಿ ಸರಳ ಸ್ಥಳೀಯ ಕಥಾನಕ ಅದರ ಸ್ಥಳೀಯತೆಯನ್ನು ಮೀರಿ ಆ ಕಾಲದ ಬಂಗಾಳದ, ಈಗಿನ ಭಾರತದ ಜಗತ್ತಿನಲ್ಲೂ ವಿಶಿಷ್ಟ ಅರಿವು ಮೂಡಿಸುವ ಸಾರ್ವಕಾಲಿಕ ಸಾರ್ವತ್ರಿಕ ಕಲಾಕೃತಿಯಾಗುತ್ತದೆ. ಸತ್ಯಜಿತ್ ರಾಯ್ ಮೇಲ್ ಮಟ್ಟದ 'ಸಾಮಾನ್ಯ ಪ್ರೇಕ್ಷಕ'ನಿಗೂ ಮುದ ಕೊಡುವ ಸರಳ ನೇರ ಕಥಾನಕವನ್ನು ಈ ರೀತಿಯಲ್ಲಿ ಸಾರ್ವಕಾಲಿಕ ಸಾರ್ವತ್ರಿಕ ಕಲಾಕೃತಿಯಾಗಿಸುವ ಹದ ಅಥವಾ ಪಾಕವನ್ನು ಕಂಡುಕೊಂಡಿದ್ದಾರೆ. ಪ್ರತಿಯೊಂದು ಮರು ವೀಕ್ಷಣೆಯಲ್ಲಿ ಈ ಒಳಹರಿವನ್ನು ಹೊಕ್ಕು ನೋಡಿದಾಗ ಹಲವು ಆಯಾಮಗಳು ಕಂಡು ಅದು ಹೊಸದಾಗಿ ಕಾಣುತ್ತದೆ. ಅದು ಅವರ ಫಿಲಂಗಳ ವಿಶಿಷ್ಟತೆ ಎಂದು ಕಾಸರವಳ್ಳಿ ಅವರು ವಿವರಿಸಿದರು.

ಇದನ್ನು ಅವರು ಅಪ್ಪು ತ್ರಿವಳಿಯ ಫಿಲಂಗಳು

ಪುಟ 15 ನೋಡಿ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**